
ಸಂಪುಟ 24 ಸಂಚಿಕೆ 4
ಜನವರಿ 27, 2002 ಬೆಲೆ ರೂ. 3.00

# ಐಕ್ಯರಂಗ


ದುಡಿವ ಜನರ ಪ್ರಾಣಮಿತ್ರ




ಚೀನಿ ಪ್ರಧಾನಿ
ಮಹತ್ವದ ಭೇಟಿ




## ಘೋರ 'ಫೋಟೋ'ದ ಮರಿ ಕ್ರೂರ 'ಕೋಕಾ'



## ನೀರು ಮಾರಾಟ!





ದಲಾಯಿಲಾಮಾ
ತರಂಗ ಮತ್ತು
ಬಸವ ಪ್ರಶಸ್ತಿ



ಕಾವೇರುತ್ತಿರುವ ಕನಕಪುರ ಚುನಾವಣೆ

# ಪಂಜಾಬ್ ಚುನಾವಣೆ: ನೀತಿ ಮತ್ತು ಗಾಳಿಗೆ ತೂರಿದ ಕಾಂಗ್ರೆಸ್ ಭುಗಿಲೆದ್ದ ಕೋಮುವಾದದ ವೈರಸ್

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)




## ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 87

'ಈ ಪರಿಸ್ಥಿತಿಯ ಲಾಭ ಪಡೆಯಲು ಪೂರ್ವಯುರೋಪಿನ ಪ್ರತಿಗಾಮಿಗಳಿಗೆ ಸಾಮ್ರಾಜ್ಯಶಾಹಿ ಶಕ್ತಿಗಳು ನೆರವಾದವು' ಎಂದು ನಾವು ಹೇಳಿದೆವು. 1957 ಮತ್ತು 1960 ರ ಗೊತ್ತುವಳಿಗಳಲ್ಲಿನ ದಿಕ್ಚ್ಯುತಿಗಳನ್ನು ಬೊಟ್ಟು ಮಾಡಿ ತೋರಿಸಿದ ನಾವು, 'ಈ ವಿಷಯಗಳನ್ನು ವಿವರಿಸುವ ಪ್ರಯತ್ನಗಳ ವೈಜ್ಞಾನಿಕ ಮಾರ್ಗಕ್ಕೆ' ಕೆಲವು ಪ್ರತಿರೋಧ ಇದೆ ಎಂದು ಹೇಳಿದ್ದೆವು.

1989 ಮತ್ತು 1991 ರ ನಡುವೆ ದೇಶದಲ್ಲಿ ಎರಡು ಲೋಕಸಭೆ ಚುನಾವಣೆಗಳು ನಡೆದವು. ದೇಶ ತುಮುಲವನ್ನು ಎದುರಿಸುತ್ತಿತ್ತು. ಸರಕಾರಗಳ ಅಸ್ಥಿರತೆಯನ್ನು ಗಮನಿಸುವಾಗ ಮಧ್ಯಂತರ



ಇಎಂಎಸ್ - ಸುರ್ಜಿತ್

ಚುನಾವಣೆಯೇ ಸೂಕ್ತ, ಅದಕ್ಕೆ ನಾವು ಸಿದ್ಧರಿರಬೇಕು ಎಂದು ನಾವು ಹೇಳಿದೆವು.

ದೇಶದಾದ್ಯಂತ ಕಂಡು ಬಂದಿರುವ ಬಂಡವಾಳಶಾಹಿ ಪ್ರವೃತ್ತಿಯ ಕರಾಳ ಛಾಯೆ ಬಂಗಾಳದಲ್ಲಿ ಕೂಡ ಕಾಣಿಸಿಕೊಂಡಿದೆ ಎಂದು ರಾಜ್ಯ ಸಮ್ಮೇಳನ ಗಮನಿಸಿತು. ಹಾಲ್ದಿಯಾ ಮತ್ತು ಬಕ್ರೇಶ್ವರ ಯೋಜನೆಗಳನ್ನು ತಡೆಹಿಡಿಯಲಾಗಿತ್ತು. ರಾಷ್ಟ್ರೀಯ ರಂಗ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅವುಗಳಿಗೆ ಅನುಮತಿ ನೀಡಿತ್ತು. ಎಡರಂಗ ಸರ್ಕಾರ ಹಳ್ಳಿಗಳಲ್ಲಿ ಶ್ಲಾಘನೀಯ ಕೆಲಸ ಮಾಡಿತ್ತು. ಎಲ್ಲಾ ಹಂತಗಳಲ್ಲಿ ವಿಕೇಂದ್ರೀಕರಣವನ್ನು ಖಾತರಿಗೊಳಿಸಿತ್ತು. ಕಾಂಗ್ರೆಸ್‌ನ ಪ್ರಭಾವ ಕುಂದುತ್ತಿತ್ತು. ಆದರೆ ಕಾಂಗ್ರೆಸ್ ಪಕ್ಷ ಹರಿಯಬಿಟ್ಟ ಸರ್ವಾಧಿಕಾರಿ ಶಕ್ತಿಗಳು ಹಾಗೂ ಬಿಜೆಪಿಯಿಂದ ಕೋಮುವಾದಿ ಶಕ್ತಿಗಳು ನಮ್ಮ ವಿರುದ್ಧದ ಆಟವನ್ನು ಇನ್ನೂ ಮುಂದುವರಿಸಿದ್ದವು ಎನ್ನುವುದನ್ನು ಕಡೆಗಣಿಸಲಾಗದು. ಜಿಎಸ್‌ಎಲ್ ಎಫ್ ಮತ್ತು ಜಾರ್ಖಂಡ್‌ಗಳಂಥ ಶಕ್ತಿಗಳು ಪ್ರತ್ಯೇಕತಾವಾದಿ ಭಾವನೆಗಳನ್ನು ಬಡಿದೆಬ್ಬಿಸಲು ಯತ್ನಿಸುತ್ತಿದ್ದವು. ಬಂಗಾಳ ಮತ್ತು ಕೇರಳಗಳೆರಡರಲ್ಲೂ ನಮ್ಮ ಮೇಲಿನ ಧಾಳಿಹೆಚ್ಚಿತ್ತು. ರಂಗವನ್ನು ಬಲಪಡಿಸಲು ಪ್ರಯತ್ನಗಳನ್ನು ತೀವ್ರಗೊಳಿಸುವ ಕರೆಯೊಂದಿಗೆ ಸಮ್ಮೇಳನ ಮುಕ್ತಾಯವಾಯಿತು. ಶೈಲೇನ್ ದಾಸ್‌ಗುಪ್ತಾರನ್ನು ಕಾರ್ಯದರ್ಶಿಯಾಗಿ ಮರು ಆಯ್ಕೆ ಮಾಡಲಾಯಿತು. ಅಲ್ಲಿಂದ ಕೆಲವೇ ದಿನಗಳಲ್ಲಿ ನಾವು 14 ನೇ ಮಹಾಧಿವೇಶನಕ್ಕಾಗಿ ಚೆನ್ನೈಗೆ ತೆರಳಬೇಕಿತ್ತು.

**ಸಿಪಿಐ(ಎಂ) 14ನೇ ಮಹಾಧಿವೇಶನ**

1992 ಜನವರಿ 3-9 ರಂದು ಚೆನ್ನೈನ ಬಿ.ಟಿ.ಆರ್. ನಗರದಲ್ಲಿ ಪಕ್ಷದ 14ನೇ ಮಹಾಧಿವೇಶನ ನಡೆಯಿತು. ಸೋವಿಯತ್ ಒಕ್ಕೂಟದ ಛಿದ್ರತೆ, ನರಸಿಂಹರಾವ್‌ರಿಂದ ಅಲ್ಪಸಂಖ್ಯಾತ ಸರಕಾರದ ರಚನೆ, ಮನಮೋಹನಸಿಂಗ್ ರ ಹೊಸ ಆರ್ಥಿಕ ನೀತಿ ಮತ್ತು ತಲೆಯೆತ್ತಿದ್ದ ಧಾರ್ಮಿಕ ಫ್ಯಾಸಿಸಂ ಇವುಗಳ [illegible]

ಅಮೆರಿಕದ ಅದೃಷ್ಟ ಖುಲಾಯಿಸಿತ್ತು! ತೃತೀಯ ಜಗತ್ತಿನ ಮೇಲಿನ ಆಕ್ರಮಣಗಳು ಹೆಚ್ಚುತ್ತ ಹಾಗೂ ಹೊಸ ವಿಶ್ವವ್ಯವಸ್ಥೆಯನ್ನು ಬದಲಾಯಿಸಬೇಕು ಎಂದು ನಾವು ಅಭಿಪ್ರಾಯಪಟ್ಟೆವು. 'ಆಳುವ ವರ್ಗಗಳು ಮತ್ತು ದುಡಿಯುವ ಜನರ ನಡುವಿನ ಸಂಘರ್ಷ ಹೆಚ್ಚಲಿದೆ' ಎಂದು ಮಹಾಧಿವೇಶನ ಹೇಳಿತು.

ನಮ್ಮ ಮುಂದಿರುವ ಕಾರ್ಯಭಾರ ಕಠಿಣವಾಗಿತ್ತು. ಅನೇಕ ದೇಶಗಳ ಕೆಲವು ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದ-ಲೆನಿನ್ ವಾದದ ತತ್ವ ಸಿದ್ಧಾಂತಗಳನ್ನು ಕೈಬಿಟ್ಟು ಸಾಮಾಜಿಕ ಪ್ರಜಾಪ್ರಭುತ್ವದ ಸುಲಭದ ಹಾದಿಯನ್ನು ಹಿಡಿದವು. ಇದು ವರ್ಗ ರಾಜಿಯ ಹಾದಿಯೇ ಹೊರತು ವರ್ಗ ಸಂಘರ್ಷದ ಹಾದಿಯಲ್ಲ ಎಂದು ಮಹಾಧಿವೇಶನ ಹೇಳಿತು. ಇಂಥ ದಿಕ್ಚ್ಯುತಿಗಳ ವಿರುದ್ಧ ಹೋರಾಟವನ್ನು ಮುಂದುವರಿಸಬೇಕು. ರಾಜಕೀಯ ಸಿದ್ಧಾಂತದ ಬಗ್ಗೆ ಒಂದು ದಸ್ತಾವೇಜನ್ನು ಮಹಾಧಿವೇಶನದಲ್ಲಿ ವಿತರಿಸಲಾಯಿತು. ರಾಜೀವಗಾಂಧಿ ಯವರ ಹತ್ಯೆ ನಮ್ಮ ದೇಶವನ್ನು ಅಸ್ಥಿರಗೊಳಿಸುವ ಸಾಮ್ರಾಜ್ಯಶಾಹಿ ಶಕ್ತಿಗಳ ಪಿತೂರಿಗಳಲ್ಲಿ ಒಂದು. ರಾವ್ ಸರ್ಕಾರದ ಆರ್ಥಿಕ ನೀತಿಗಳು ದೇಶಕ್ಕೆ ದುರಂತಮಯವಾಗಿ ಪರಿಣಮಿಸುತ್ತಿದ್ದವು. ಸೆಪ್ಟೆಂಬರ್ 27 ರಂದು ದೆಹಲಿಯಲ್ಲಿ ನಡೆದ ರಾಷ್ಟ್ರೀಯ ರಂಗ ಮತ್ತು ಎಡಪಕ್ಷಗಳ ಸಮ್ಮೇಳನ ಅಂಗೀಕರಿಸಿದ ಸಾಮಾನ್ಯ ಕಾರ್ಯಕ್ರಮ ನಮಗೆ ಮಾರ್ಗದರ್ಶಕ ರೇಖೆಯಾಗಿ ಹಾಗೂ ಕಾರ್ಯಾಚರಣೆಗೆ ಆಧಾರವಾಗಿ ಮುಂದುವರಿಯಿತು. ಬೆಳೆಯುತ್ತಿರುವ ಕೋಮುವಾದವನ್ನು ಎದುರಿಸಲು, ಅದರ ವಿರುದ್ಧ ಹೋರಾಡಲು ಎಡಪಕ್ಷಗಳಿಗೆ ಮಾತ್ರ ಸಾಧ್ಯ ಎಂಬುದು ಸ್ಪಷ್ಟವಾಗಿತ್ತು. 64 ಸದಸ್ಯರ ಹೊಸ ಕೇಂದ್ರ ಸಮಿತಿಯನ್ನು ರಚಿಸಲಾಯಿತು. ಕಾಂ. ಹರಿಕಿಶನ್ ಸಿಂಗ್ ಸುರ್ಜಿತ್, ಕಾಂ.ಇಎಂಎಸ್‌ರಿಂದ ಪ್ರಧಾನ ಕಾರ್ಯದರ್ಶಿ ಹೊಣೆಯನ್ನು ವಹಿಸಿಕೊಂಡರು. 14 ಸದಸ್ಯರ ಪಾಲಿಟ್‌ಬ್ಯೂರೋ ಆಯ್ಕೆಯಾಯಿತು. ಅದರಲ್ಲಿ ಅನೇಕ ಯುವ ಸಂಗಾತಿಗಳಿದ್ದರು. ಶಿಸ್ತು ಆಯೋಗದ (Control Commission) ಅಧ್ಯಕ್ಷ ಕಾಂ. ಸಮರ್ ಮುಖರ್ಜಿಯವರನ್ನು ಪಾಲಿಟ್‌ಬ್ಯೂರೋಗೆ ಸೇರ್ಪಡೆ ಮಾಡಿಕೊಳ್ಳಲಾಯಿತು.

ನಮಗೆ ಮಾರ್ಗದರ್ಶಕ ರೇಖೆಯಾಗಿ ಹಾಗೂ ಕಾರ್ಯಾಚರಣೆಗೆ ಆಧಾರವಾಗಿ ಮುಂದುವರೆಯಿತು. ಬೆಳೆಯುತ್ತಿರುವ ಕೋಮುವಾದವನ್ನು ಎದುರಿಸಲು, ಅದರ ವಿರುದ್ಧ ಹೋರಾಡಲು ಎಡಪಕ್ಷಗಳಿಗೆ ಮಾತ್ರ ಸಾಧ್ಯ ಎಂಬುದು ಸ್ಪಷ್ಟವಾಗಿತ್ತು. 64 ಸದಸ್ಯರ ಹೊಸ ಕೇಂದ್ರ ಸಮಿತಿಯನ್ನು ರಚಿಸಲಾಯಿತು. ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್, ಕಾಂ.ಇ.ಎಂ.ಎಸ್. ರಿಂದ ಪ್ರಧಾನ ಕಾರ್ಯದರ್ಶಿ ಹೊಣೆಯನ್ನು ವಹಿಸಿಕೊಂಡರು. 14 ಸದಸ್ಯರ ಪಾಲಿಟ್‌ಬ್ಯೂರೋ ಆಯ್ಕೆಯಾಯಿತು. ಅದರಲ್ಲಿ ಅನೇಕ ಯುವ ಸಂಗಾತಿಗಳಿದ್ದರು. ಶಿಸ್ತು ಆಯೋಗದ (Control commission) ಅಧ್ಯಕ್ಷ ಕಾ. ಸಮರ್

ಸೇರ್ಪಡೆ ಮಾಡಿಕೊಳ್ಳಲಾಯಿತು.

ಸಾಗಾಟ ದರ ಸಮೀಕರಣ ನೀತಿಯನ್ನು(Freight equalisation policy) ಜನವರಿ 16ರಂದು ಭಾಗಗಳಲ್ಲಿ ವಾಪಸ್ ಪಡೆಯಲಾಯಿತು. ಈ ನೀತಿ ದೇಶದ ಈಶಾನ್ಯ ಪ್ರದೇಶಕ್ಕೆ ವಿರುದ್ಧವಾಗಿತ್ತು ಹಾಗೂ ಅದನ್ನು ರಾಜಕೀಯ ಅಸ್ತ್ರವನ್ನಾಗಿ ಬಳಸಲಾಗುತ್ತಿತ್ತು. ಆದ್ದರಿಂದ ಅದನ್ನು ವಾಪಸ್ ಪಡೆಯಬೇಕೆನ್ನುವುದು ನಮ್ಮ ಆಗ್ರಹವಾಗಿತ್ತು. ಹಲವು ಕಾಂಗ್ರೆಸ್ ರಾಜ್ಯಗಳ ಮುಖ್ಯಮಂತ್ರಿಗಳೂ, ಇತರ ಅನೇಕ ಪಕ್ಷಗಳೂ ನಮ್ಮ ನಿಲುವನ್ನು ಬೆಂಬಲಿಸಿದರು. ಅದನ್ನು ವಾಪಸ್ ಪಡೆಯುವುದು ಕೇಂದ್ರ ಸರಕಾರಕ್ಕೆ ಅನಿವಾರ್ಯವಾಯಿತು.

ಫೆಬ್ರವರಿ 19ರಂದು ಪಂಜಾಬ್ ಚುನಾವಣೆ ನಡೆಯಿತು. ರಾವ್ ಸರಕಾರ ಪಂಜಾಬ್ ಒಪ್ಪಂದವನ್ನು ಧೂಳು ಹಿಡಿಯುವಂತೆ ಮಾಡಿತು. ಚಂಡೀಗಢವನ್ನು ಪಂಜಾಬ್‌ಗೆ ಹಸ್ತಾಂತರಿಸುವ ಯಾವುದೇ ಉಪಕ್ರಮ ಇರಲಿಲ್ಲ. ನೀರು ಪಾಲು ಮಾಡುವುದಕ್ಕೆ ಸಂಬಂಧಿಸಿದ ಬಿಯಾಸ್ ಸೂತ್ರವನ್ನು ನಿರ್ಲಕ್ಷಿಸಲಾಯಿತು. ಸಹಜವಾಗಿಯೇ ಅಕಾಲಿದಳದ ಎಲ್ಲ ಬಣಗಳು ಚುನಾವಣೆಯನ್ನು ಬಹಿಷ್ಕರಿಸಿದವು. ಪಂಜಾಬ್ ಚುನಾವಣೆಯು ಅದುವರೆಗಿನಇತಿಹಾಸದಲ್ಲೇ ಕಡಿಮೆ ಪ್ರಮಾಣದ ಮತದಾನವಾಯಿತು. ಏನಿದ್ದರೂ ಹೀಗೆ ಆಗಬೇಕೆನ್ನುವುದು ಕಾಂಗ್ರೆಸ್‌ನ ಬಯಕೆಯಾಗಿತ್ತು. ಏನಾದರೂ ಮಾಡಿ ಗೆಲ್ಲುವುದು ಅದರ ಯೋಚನೆಯಾಗಿತ್ತು. ನೀತಿ ನಿಯತ್ತುಗಳನ್ನು ಗಾಳಿಗೆ ತೂರಲಾಯಿತು.13 ಲೋಕಸಭೆ ಸ್ಥಾನಗಳ ಪೈಕಿ 12ರಲ್ಲಿ ಕಾಂಗ್ರೆಸ್ ಗೆದ್ದಿತು, ಲೋಕಸಭೆಯಲ್ಲಿ ಬಹುಮತ ಗಳಿಸಬೇಕೆಂಬ ಗುರಿಯಲ್ಲಿ ಒಂದು ಹೆಜ್ಜೆ ಮುಂದೆ ಹೋಯಿತು. ಅಸೆಂಬ್ಲಿ ಚುನಾವಣೆಗಳನ್ನು ಕೂಡಾ ಕಾಂಗ್ರೆಸ್ ಜಯಿಸಿತು.

**ಕಾಮ್ರೇಡ್ ಬಸವಪುನ್ನಯ್ಯ ನಿಧನ**

ನಮ್ಮ ಪಾಲಿಟ್‌ಬ್ಯೂರೋ ಸದಸ್ಯ ಕಾಮ್ರೇಡ್ ಎಂ. ಬಸವಪುನ್ನಯ್ಯ ಏಪ್ರಿಲ್ 12ರಂದು ನಮ್ಮನ್ನು ಅಗಲಿದರು. ಅವರು ಒಬ್ಬ ಮಹಾನ್ ಸಿದ್ಧಾಂತಿಯಾಗಿದ್ದರು. 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕರಾಗಿದ್ದರು. ಬ್ರಿಟಿಷ್ ರಾಜ್ ಕಾಲದಲ್ಲಿ ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸಿದ್ದ ಅವರು 1936ರಲ್ಲಿ ಸ್ಥಾಪನೆಯಾದ ಕಮ್ಯುನಿಸ್ಟ್ ವಿದ್ಯಾರ್ಥಿ ಸಂಘಟನೆಯ ಅತ್ಯುನ್ನತ ನಾಯಕರಲ್ಲಿ ಒಬ್ಬರಾದರು. ತೆಲಂಗಾಣಾ ಚಳುವಳಿಯ ಒಬ್ಬ ಪ್ರಮುಖ ಸಂಘಟಕರಾಗಿದ್ದರು. ಸುಂದರಯ್ಯ ಮತ್ತು ರಾಜೇಶ್ವರರಾವ್‌ರಂಥ ನೇತಾರರ ಹೆಸರಿನ ಜತೆ ಇವರನ್ನು ಸೇರಿಸಬಹುದು. ಕಮ್ಯುನಿಸ್ಟ್ ಪಕ್ಷಗಳ ಅಂತರ್‌ರಾಷ್ಟ್ರೀಯ ಸಭೆಯಲ್ಲಿ ಕಾಮ್ರೇಡ್ ಎಂ.ಬಿ. ಭಾರತವನ್ನು ಪ್ರತಿನಿಧಿಸಿದ್ದರು. 1957ರ ಈ ಸಭೆ ಅಂಗೀಕರಿಸಿದ ದಾಸ್ತಾವೇಜಿಗೆ ಇವರೂ ಸಹಿ ಹಾಕಿದ್ದರು. ಪಕ್ಷದ ಆದರ್ಶ ಮತ್ತು ತತ್ವಗಳ ವಿಚಾರದಲ್ಲಿ ರಾಜಿ ಮಾಡಿಕೊಳ್ಳದ ಅವರ ಧೋರಣೆ ಅವಿಸ್ಮರಣೀಯ.

ಈ ನಡುವೆ, ಆರ್ಥಿಕ ನೀತಿಯ ವಿರುದ್ಧದ ವ್ಯಾಪಕ ಪ್ರತಿಭಟನೆ ಜೂನ್ 16ರ ಕೈಗಾರಿಕೆ ಮುಷ್ಕರವಾಗಿ ಪರಿವರ್ತನೆಗೊಂಡಿತು. ಎಲ್ಲಾ ಕೈಗಾರಿಕಾ ಸಿಬ್ಬಂದಿ ಕೂಡ ಮುಷ್ಕರದಲ್ಲಿ ಸೇರಿದರು. ಎಲ್ಲ ಸರಕಾರದ ನೀತಿಗಳನ್ನು ಅಂಗೀಕರಿಸಲು ಜನತೆ ಸಿದ್ಧವಿರಲಿಲ್ಲ.

ಆ ವೇಳೆಗೆ ತೀನ್‌ಬಿಘಾ ಒಪ್ಪಂದವಾಯಿತು. ಜೂನ್ 26ರಂದು ತೀನ್ ಬಿಘಾವನ್ನು ಬಾಂಗ್ಲಾ ದೇಶಕ್ಕೆ ಹಸ್ತಾಂತರಿಸುವುದೆಂದು ನಿಗದಿಯಾಯಿತು. ಆ ಪ್ರದೇಶದ ಸಾರ್ವಭೌಮತೆಯನ್ನು ಢಾಕ್ಕಾಗೆ ಹಸ್ತಾಂತರಿಸುವುದಿಲ್ಲ, ಆದರೆ ಆ ಕಾರಿಡಾರ್ ಮೂಲಕ ವ್ಯವಹಾರಕ್ಕೆ ಬಾಂಗ್ಲಾದೇಶಕ್ಕೆ ಅವಕಾಶ ಕಲ್ಪಿಸುವುದು ಒಪ್ಪಂದದ ಉದ್ದೇಶವಾಗಿತ್ತು. ಅನೇಕ ಜನರು ಈ ಒಡಬಂಡಕೆಯನ್ನು ತಪ್ಪಾಗಿ ಅರ್ಥೈಸಿದರು. ಎಲ್ಲಿಯವರೆಗೆ ಅಂದರೆ ಫಾರ್ವರ್ಡ್ ಬ್ಲಾಕ್‌ನ ಒಬ್ಬ ನಾಯಕ ಆ ಪಕ್ಷವನ್ನೂ ಬಿಟ್ಟು ಪ್ರಾದೇಶಿಕ ಪಕ್ಷವೊಂದನ್ನು ಕಟ್ಟಿದರು. ತೀನ್‌ಬಿಘಾ ಒಪ್ಪಂದದ ಬಗ್ಗೆ ಬಿಜೆಪಿಯೂ ವಿವಾದವೆಬ್ಬಿಸಿತು. ವಾಸ್ತವವಾಗಿ ಅದೊಂದು ಗುತ್ತಿಗೆ ಒಪ್ಪಂದವಾಗಿತ್ತು. ಅದು ಉಭಯ ದೇಶಗಳ ನಡುವಿನ ಸಂಬಂಧವನ್ನು ಗಟ್ಟಿಗೊಳಿಸಲಿತ್ತು.

**ಬೇಜವಾಬ್ದಾರಿ ಸಂಘ ಪರಿವಾರ......**

(ಮುಂದುವರಿಯುವುದು)



# ಈ ವಾರ ಕರ್ನಾಟಕ ಒಂದು ನೋಟ




— ಎಸ್.ವೈ.ಗುರುಶಾಂತ್ —

## ದೇವೇಗೌಡರ ಸ್ಪರ್ಧೆ: ಹೊಸಬೆಳವಣಿಗೆ ತಂದೀತೆ?

ಕನಕಪುರ ಲೋಕಸಭಾ ಕ್ಷೇತ್ರವೀಗ ಮೆಲ್ಲಮೆಲ್ಲನೇ ಕಾವೇರತೊಡಗಿದೆ. ಎಂ.ಪಿ.ಯಾಗಿದ್ದ ವಿ.ಚಂದ್ರಶೇಖರಮೂರ್ತಿಯವರ ನಿಧನದಿಂದ ತೆರವಾದ ಈ ಸ್ಥಾನಕ್ಕೆ ನಡೆವ ಉಪ ಚುನಾವಣೆಯಲ್ಲಿ ಮಾಜಿ ಪ್ರಧಾನಿ ದೇವೇಗೌಡರು ಸ್ಪರ್ಧಿಸುವ ಇಂಗಿತ ಹೊರ ಬೀಳುವಂತೆಯೇ ಎಲ್ಲಾ ಪಕ್ಷಗಳೂ ಚುರುಕಾದವು. ದೇವೇಗೌಡರಿಗೆ ಪೈಪೋಟಿ ನಡೆಸುವ, ಅವರನ್ನು ಸೋಲಿಸುವ ಅಭ್ಯರ್ಥಿಗಳಿಗೆ ಹಾಗೂ ಹೂಡುವ ರಾಜಕೀಯ ತಂತ್ರಗಳಿಗೆ ಹುಡುಕಾಟವೂ ಆರಂಭಗೊಂಡಿತು. ರಾಜಕೀಯವಾಗಿ ಹಾಗೂ ವೈಯಕ್ತಿಕವಾಗಿಯೂ ಬದ್ಧವೈರಿಗಳಾಗಿ ಬಣ್ಣಿಸಿಕೊಳ್ಳುತ್ತಿದ್ದ ಹೆಗಡೆಯವರು ಆಸ್ಪತ್ರೆಯಲ್ಲಿರುವಾಗಲೇ ದೇವೇಗೌಡರು ಅವರನ್ನು ಕಂಡು ಶುಭಹಾರೈಸಿದ ಘಟನೆ ಹೊಸ ಸಾಧ್ಯತೆ - ಲೆಕ್ಕಾಚಾರಗಳನ್ನು ತೆರೆದಿರಿಸಿತು. ಹಾಗೂ ಗೌಡರ ಸ್ಪರ್ಧೆ ಖಚಿತವಾಗಿಸಿತು. ಈ ಎಲ್ಲಾ ಬೆಳವಣಿಗೆಗಳ ಒಟ್ಟು ಪರಿಣಾಮವಾಗಿ ಉಭಯ ಜನತಾದಳದ ಬಣಗಳು ಒಂದು ಒಮ್ಮತಕ್ಕೆ ಬಂದಿದ್ದು ದೇವೇಗೌಡರ ಗೆಲುವಿಗೆ ಶ್ರಮಿಸಲಿವೆಯಂತೆ.

ಇತ್ತ ಈಗಾಗಲೇ ಬಿಜೆಪಿ ಮಾಜಿ ಶಾಸಕ, ಕೇಂದ್ರ ರೇಷ್ಮೆ ಮಂಡಳಿ ಅಧ್ಯಕ್ಷರಾದ ಕೆ.ಎಸ್.ಈಶ್ವರಪ್ಪನವರು ನಾಮಪತ್ರ ಸಲ್ಲಿಸಿದ್ದಾರೆ. ಕಾಂಗ್ರೆಸ್ ಇನ್ನೂ ಖಚಿತ ತೀರ್ಮಾನ ಮಾಡಿಲ್ಲ. ಆದರೆ ಕೃಷ್ಣ ಸಂಪುಟದ ಕುಖ್ಯಾತಿಯ ಡಿ.ಕೆ.ಶಿವಕುಮಾರ್ ಅಥವಾ ಡಿಕೆಶಿಯ ಆಪ್ತ



ಲಿಂಗಪ್ಪನವರಾಗಲೀ ಒಬ್ಬರು ಆಗಲಿದ್ದಾರೆ ಎಂಬ ಸುದ್ದಿಗಳು ಗಾಢವಾಗಿವೆ. ಆದರೆ ಇವರಲ್ಲದೇ ಇನ್ನೂ ಹಲವರ 'ನಾಮ'ಗಳು ಕಾಂಗ್ರೆಸ್ ವಲಯದಲ್ಲಿವೆ. ಗೌಡರನ್ನು ಮಣ್ಣು ಮುಕ್ಕಿಸುವ ಅಭ್ಯರ್ಥಿಗಾಗಿ ಕಾಂಗ್ರೆಸ್ ಹುಡುಕಾಟದಲ್ಲಿದೆಯಂತೆ!. ಕೃಷ್ಣರವರೂ ಭಾರೀ ಪ್ರತಿಷ್ಠೆಯ, ಸವಾಲಿನ ಪ್ರಶ್ನೆಯಾಗಿ ಇದನ್ನು ಪರಿಗಣಿಸಿದ್ದಾರಂತೆ. ಒಂದರ್ಥದಲ್ಲಿ 'ಒಕ್ಕಲಿಗ' ಜನಾಂಗದ ಮೇಲೆ ಯಾರು ಹಿಡಿತ ಹೊಂದಿದ್ದಾರೆಂದೂ ಸಾಬೀತು ಪಡಿಸಿಯೇ ಬಿಡುವ ಎಂಬ ಇರಾದೆಯಿದೆಯಂತೆ. ಆದಾಗ್ಯೂ ಕೆಲವು ಒಪ್ಪಂದಗಳಿಗೆ ಇವರೂ ಬರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ. ಹೀಗೆ ಅಸ್ಪಷ್ಟ ಚಿತ್ರಣವೀಗ.

ಈ ಚುನಾವಣೆಯಲ್ಲಿ ಜಾತಿಯ ಲೆಕ್ಕಾಚಾರಗಳೇ ಪ್ರಧಾನವಾಗಿ ಗೆಲುವಿನ ಹಾದಿಯಲ್ಲಿ ಪರಿಗಣಿತವಾಗುವ ಅಂಶವಾಗಿ ಬರುತ್ತಿದೆ. ಒಕ್ಕಲಿಗರನ್ನು ಓಲೈಸುವುದು ಒಂದೆಡೆ, ಇನ್ನೊಂದೆಡೆ ಲಿಂಗಾಯತರ ಓಟು ಪಡೆಯಲು ಮಠಾಧೀಶರ ಸುತ್ತ ಅಭ್ಯರ್ಥಿಗಳು ಗಿರಕಿ ಹೊಡೆಯ ತೊಡಗಿದ್ದಾರೆ, ಯಜ್ಞಯಾಗ ಮಾಡಿಸುತ್ತಿದ್ದಾರೆ. ಇದು ಉಪಶಮನವಾದರೂ ಎಗ್ಗಿಲ್ಲದೇ ಹಣ-ಹೆಂಡದ ಹೊಳೆಯಿಂದ, ಮತದಾರರನ್ನು ಮುಳುಗೇಳಿಸುವ ಬಗ್ಗೆ ಯಾರಿಗೂ ಅನುಮಾನವೇ, ಇದರೊಂದಿಗೆ ಇಲ್ಲ. ಗೂಂಡಾಗಿರಿ, ಹಿಂಸೆ ಭುಗಿಲೇಳುವ ಭಯವಂತೂ ಎಲ್ಲರನ್ನೂ ಕಾಡುತ್ತಿದೆ.

ದೇವೇಗೌಡರ ಸ್ಪರ್ಧೆ ಹಲವರಲ್ಲಿ ಪ್ರಶ್ನೆ ಹುಟ್ಟಿಸಿದೆ! ಉತ್ತರ ಪ್ರದೇಶದ ವಿಧಾನಸಭೆಯ ಚುನಾವಣೆಯಲ್ಲಿ ಬಿಜೆಪಿ ಸೋಲಿಸುವುದು ಖಚಿತವಾಗಿದ್ದು ಅದರ ಪರಿಣಾಮ ಕೇಂದ್ರದ ಮೇಲೆ ಬೀಳುವ ಎಲ್ಲಾ ಸಂಭವನೀಯತೆಯೂ ಇದೆ. ಹೀಗಾಗಿ ದೇವೇಗೌಡರ ಸ್ಪರ್ಧೆಗೆ ಮಹತ್ವ ಬಂದಿದೆ. ಹಾಗೆಯೇ ಕಾಂಗ್ರೆಸ್‌ನಲ್ಲಿ ಆತಂಕ ಹುಟ್ಟಿಸಿದೆ.

ಈ ಚುನಾವಣೆ ರಾಷ್ಟ್ರದ ರಾಜಕಾರಣದ ಮೇಲೆ ಬೀರುವ ಪರಿಣಾಮಗಳಿಗಿಂತ ರಾಜ್ಯದಲ್ಲಿ ಹೊಸ ಬೆಳವಣಿಗೆ ತರಬಹುದು. ಎನ್‌ಡಿಎ ಭಾಗಿದಾರನಾಗಿ ಮುಂದುವರೆದಿರುವ ಜನತಾದಳ(ಯು) ಈಗ ದೇವೇಗೌಡರಿಗೆ ಬೆಂಬಲಿಸಿದೆ. ಅಂದರೆ ಎನ್‌ಡಿಎ ಮೈತ್ರಿಕೂಟದ ಭಾಗೀದಾರ ಬಿಜೆಪಿ ವಿರುದ್ಧವೇ ಜೆಡಿ(ಯು) ಈಗ ಕೆಲಸ ಮಾಡ ಬೇಕಾಗಿದೆ. ಒಂದು ಹಂತದಲ್ಲಿ ಎನ್‌ಡಿಎ ಮೈತ್ರಿಕೂಟದ ಪಕ್ಷಗಳು ನಡುವಿನ ಬಿರುಕು ಸಕಾರಾತ್ಮಕ ಬೆಳವಣಿಗೆ'ಯೆಂದು ಗಣಿಸಬಹುದು. ಆದರೆ ಎನ್‌ಡಿಎ ಕೂಟದಿಂದ ಜೆಡಿ(ಯು) ಹೊರಬಾರದೇ ಅವರೊಂದಿಗೆ ವಿಲೀನ ಅಸಾಧ್ಯ ಎಂದೇ ಪ್ರಬಲವಾಗಿ ಪ್ರತಿಪಾದಿಸುತ್ತಾ ಬಂದ ಜೆಡಿ(ಎಸ್) ಮುಂದೆ ಎಂತಹ ನಿಲುವು ತಳೆಯಲಿದೆ? ಹಾಗೆಯೇ ಜೆಡಿ(ಯು)ವಿನ ಹಾದಿ ಏನು ಎಂಬುದು ರಾಜ್ಯದ ರಾಜಕೀಯದಲ್ಲಿ ಬಹಳ ಮಹತ್ವದ ವಿಷಯ. ಮುಂದೆ ಬೆಳವಣಿಗೆಗಳಿಗಾಗಿ ಕಾದು ನೋಡೋಣ.

## ಕೃಷ್ಣಾ ನೀರು : 'ಬಿ' ಸ್ಕೀಮ್ ಜಾರಿಗಾಗಿ ಹೊಸ ನ್ಯಾಯ ಮಂಡಳಿ ರಚಿಸಲು ಕೇಂದ್ರಕ್ಕೆ ದೂರು ಸಲ್ಲಿಸಲು ಸರ್ವಪಕ್ಷಗಳ ಸಭೆಯ ನಿರ್ಧಾರ

ಕೃಷ್ಣಾ ನದಿಯ ಹೆಚ್ಚುರಿ ನೀರಿನ ಹಂಚಿಕೆಗೆ ಸಂಬಂಧಿಸಿ ಹೊಸ ನ್ಯಾಯ ಮಂಡಳಿಯೊಂದನ್ನು ರಚಿಸುವಂತೆ, ಕೇಂದ್ರ ಸರ್ಕಾರಕ್ಕೆ ದೂರು ಸಲ್ಲಿಸಬೇಕೆಂದು ಸರ್ವಪಕ್ಷಗಳ ಸಭೆಯು ತೀರ್ಮಾನಿಸಿತು. ಮತ್ತು ಇದರ ಜೊತೆಯಲ್ಲಿಯೇ ಹೆಚ್ಚುವರಿ ನೀರಿನ ಹಂಚಿಕೆ ಅಂತಿಮವಾಗುವ ಮೊದಲೇ ಇದನ್ನು ಉಪಯೋಗಿಸಲು ಖಾಯಂ ನೀರಾವರಿ ಯೋಜನೆಗಳನ್ನು ನಿರ್ಮಾಣ ಮಾಡಬಹುದೆಂಬ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಉಲ್ಲಂಘಿಸಿ, ತೆಲುಗು ಗಂಗಾ ಮತ್ತು ಶ್ರೀಶೈಲ ಎಡದಂಡೆ ಯೋಜನೆಗಳನ್ನು ನಿರ್ಮಾಣ ಮಾಡುತ್ತಿರುವ ಆಂಧ್ರ ಪ್ರದೇಶ ರಾಜ್ಯ ಸರ್ಕಾರದ ಕ್ರಮವನ್ನು ತಕ್ಷಣ ನಿಲ್ಲಿಸುವಂತೆ ಕ್ರಮ ವಹಿಸಬೇಕೆಂದು ಕೇಂದ್ರ ಸರ್ಕಾರದ ಮೇಲೆ ರಾಜಕೀಯ ಒತ್ತಡವನ್ನು ತರಬೇಕೆಂದು ಸರ್ವಪಕ್ಷಗಳ ಸಭೆ ನಿರ್ಧರಿಸಿತು.

15 ಜನವರಿ 2002 ರ ಸಂಜೆ ಬೆಂಗಳೂರಿನ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ಅಧ್ಯಕ್ಷತೆಯಲ್ಲಿ ಸೇರಿದ್ದ ಸರ್ವಪಕ್ಷಗಳ ಸಭೆ ಸುದೀರ್ಘವಾಗಿ ಚರ್ಚಿಸಿ ಈ ತೀರ್ಮಾನಕ್ಕೆ ಬಂದಿತು. ಹೊಸ ನ್ಯಾಯ ಮಂಡಳಿ ರಚನೆಗೆ ಆಗ್ರಹಿಸಿ ದೂರು ಸಲ್ಲಿಸುವಾಗ, ರಾಜ್ಯದ ಅನೇಕ ಜಿಲ್ಲೆಗಳಲ್ಲಿನ ಬರಗಾಲದ ಸ್ಥಿತಿ ಮತ್ತು ಹೆಚ್ಚುವರಿ ನೀರನ್ನು ಉಪಯೋಗಿಸಿ ನೀರಾವರಿ ಮಾಡಲು ಇರುವ ಸಾಧ್ಯತೆಗಳ ಆಧಾರದಲ್ಲಿ ಬಿ.ಸಿ.ಅಂಗಡಿಯವರ ನೇತೃತ್ವದ ನೀರಾವರಿ ತಜ್ಞರ ಸಮಿತಿ ಸಿದ್ಧಪಡಿಸಿರುವ ಮಾಸ್ಟರ್ ಪ್ಲಾನ್‌ನ್ನು ಒಳಗೊಂಡಿರಬೇಕೆಂಬ, ವಿಷಯದ ಬಗ್ಗೆ ತೀವ್ರ ಚರ್ಚೆಗಳ ನಡೆದು, ಈ ಹೊಸ ಮಾಸ್ಟರ್ ಪ್ಲಾನ್‌ನಂತೆ ಹೆಚ್ಚುವರಿ ನೀರಿನ ಸಮ್ಮತಿಲು 278 [illegible]

ಮಾಸ್ಟರ್ ಪ್ಲಾನ್ ಜೊತೆಯಲ್ಲೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕೆಂದು ನಿರ್ಧರಿಸಲಾಯಿತು.

ಬಹಳ ವರುಷಗಳಿಂದ ನನೆಗುದಿಗೆ ಬಿದ್ದಿದ್ದ ಆಲಮಟ್ಟಿ ನೀರಿನ ಹಂಚಿಕೆಯ ಬಗ್ಗೆ ಸುಪ್ರೀಂ ಕೋರ್ಟ್ ಸ್ಪಷ್ಟವಾದ ತೀರ್ಮಾನ ನೀಡಿತ್ತು. ಮತ್ತು ಹೆಚ್ಚುವರಿ ನೀರಿನ ಹಂಚಿಕೆ ಬಗ್ಗೆ ಉಭಯ ರಾಜ್ಯಗಳು ಅಥವಾ ಒಂದು ರಾಜ್ಯವೇನಾದರೂ ದೂರು ನೀಡಿದಲ್ಲಿ ನ್ಯಾಯ ಮಂಡಳಿ ರಚಿಸುವ ಬಗ್ಗೆ ಪ್ರಸ್ತಾಪವನ್ನು ಮಾಡಿತ್ತು. ಈ ಹೆಚ್ಚುವರಿ ನೀರಿನ ಬಳಕೆಯ ಬಗ್ಗೆ ಅಗತ್ಯ ಯೋಜನೆ ಜಾರಿ ಸಿದ್ಧತೆ ಮಾಡಿಕೊಳ್ಳುವುದಾಗಿ ಸರ್ಕಾರ ತಿಳಿಸಿದೆ. ಈ ಒಟ್ಟು ಪ್ರಶ್ನೆಯನ್ನು ಕೇಂದ್ರದ ಸರ್ಕಾರ ರಾಜಕೀಯ ಕಾರಣಗಳಿಂದ ದೃಢವಾಗಿ ನಿರ್ವಹಿಸಿಲ್ಲ. ಈ ದಿಸೆಯಲ್ಲಿ ರಾಜ್ಯದ ಹಿತವನ್ನು ರಕ್ಷಿಸವ ಅಗತ್ಯವಿರುವ ರಾಜಕೀಯ ಒತ್ತಡವನ್ನು ರೂಪಿಸುವುದರ ಜೊತೆಯಲ್ಲಿ ಸಿಗುವ ನೀರನ್ನು ಸಮರ್ಥವಾಗಿ ಬಳಸಿಕೊಳ್ಳಲು ಸರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕಿದೆ.

## ವಿದ್ಯುತ್ ದರಹೆಚ್ಚಳ : ವಂಚನೆಯ ನಾಟಕ

ವಿದ್ಯುತ್ ಬಳಕೆಯ ಧರಗಳನ್ನು ಮತ್ತೇ ಹೆಚ್ಚಿಸುವ ಪ್ರಸ್ತಾಪವನ್ನು ಕೆಪಿಟಿಸಿಎಲ್ ಮಂಡಿಸಿದೆ. ತನ್ನ ದರ ಏರಿಕೆಯ ಪ್ರಸ್ತಾವಗಳು ಅನಿವಾರ್ಯವೆಂದು ಸಕಾರಣವಾಗಿದೆಯೆಂದು ಬಿಂಬಿಸಲು ಪ್ರಯತ್ನಗಳೂ ನಡೆದಿವೆ. ಅಂದರೆ ಕರ್ನಾಟಕ ವಿದ್ಯುತ್ ಆಯೋಗ (ಕೆಪಿಆರ್‌ಸಿ) ದ ಮುಂದೆ ಕೆಪಿಟಿಸಿಎಲ್ ತನ್ನ ವಾದ ಮಂಡಿಸುತ್ತಿದೆ. ಈ ವಾದಗಳನ್ನು ಕೆಇಆರ್‌ಸಿ ವಿಚಾರಿಸುತ್ತಿದೆ. ಈ ಪ್ರಕ್ರಿಯೆಯಲ್ಲಿ ಎರಡೂ ಸಂಸ್ಥೆಗಳ ನಡುವೆ ಬಿಕ್ಕಟ್ಟು, ಅಧಿಕಾರಿಗಳ ತರಾಟೆಯನ್ನುಆಯೋಗ ನಡೆಸಿದೆ ಎಂಬ ವರದಿಗಳಿವೆ. ಇವುಗಳನ್ನು ನೋಡುವವರಿಗೆ 'ಆಯೋಗ' ವಿದ್ಯುತ್ ಬಳಕೆದಾರರ ಬಗ್ಗೆ ಅಪಾರ ಕಾಳಜಿ, ಹೊಣೆ ವಹಿಸುತ್ತಿದೆಯೆಂದೂ, ನಿಷ್ಪಕ್ಷಪಾತವಾಗಿ ಪ್ರತಿಹಂತದಲ್ಲಿಯೂ ಎಳೆಎಳೆಯಾಗಿ ಪರಿಶೀಲಿಸಿ, ನ್ಯಾಯದ ತೀರ್ಮಾನಕ್ಕೆ ಬರಲಿದೆಯೆಂದು ಅನ್ನಿಸಬಹುದು. ಈ ದಿಕ್ಕಿನಲ್ಲಿ ಬಳಕೆದಾರರ ಇಂತಹ ಹಲವು ಸಭೆಗಳು ನಡೆದಿವೆ. ಈ ವಿವರಗಳು ಮಾಧ್ಯಮಗಳಲ್ಲಿ ಒಳ್ಳೆ ಪ್ರಚಾರವನ್ನೂ ಗಿಟ್ಟಿಸುತ್ತಿವೆ.

ಆದರೆ ನಿಜ ಸಂಗತಿ ಬೇರೆಯೇ ಇದೆ. ಈಗಾಗಲೇ ಕರ್ನಾಟಕ ರಾಜ್ಯ ಸರ್ಕಾರ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಿಸಲು ನಿರ್ಧರಿಸಿದೆ. ಆ ನಿರ್ಧಾರ ಹಿಂದೆಯೇ ಪ್ರಕಟವಾಗಿದ್ದು ಹಂತಹಂತವಾಗಿ ಈ ದಿಶೆಯಲ್ಲಿ ಹೆಜ್ಜೆ ಇರಿಸತೊಡಗಿದೆ. ಆದಷ್ಟು ಬೇಗ ಶರತ್ತುಗಳ ಜಾರಿಗೆ ವಿಶ್ವಬ್ಯಾಂಕ್ ಸತತ ಒತ್ತಡ ಹೇರುತ್ತಲೇ ಇದೆ. ಹೀಗಾಗಿ ಖಾಸಗಿ ಧಣಿಗಳಿಗೆ ಒಪ್ಪಿಸುವ ಮೊದಲು ಅವರು ನಿರೀಕ್ಷಿಸುತ್ತಿರುವಂತೆ ಪೂವಭಾವಿಯಾಗಿ ಸರ್ಕಾರ ವಿದ್ಯುತ್ ಧರಗಳನ್ನು ಆ ಹಂತದವರೆಗೆ ಹೆಚ್ಚಿಸಬೇಕಿದೆ. ಅದರ ಭಾಗವೇ ಈಗಿನ ದರಗಳ ಹೆಚ್ಚಳದ ಶಿಫಾರಸ್ಸು. ಆದರೆ ಈ ಏರಿಕೆಯ ಎಲ್ಲಾ ಹೊಣೆಯನ್ನು ಕೆಪಿಟಿಸಿಎಲ್ ಅಥವಾ ಸರ್ಕಾರವಾಗಲೀ ತಾವೇ ವಹಿಸಿಕೊಳ್ಳಲು ಸಿದ್ಧರಿಲ್ಲ. ಅದಕ್ಕಾಗಿ ಆಯೋಗದ ವಿಚಾರಣೆ ಮತ್ತು ಬಳಕೆದಾರರ ಅಹವಾಲು ಕೇಳುವ ಮೋಸದ ನಾಟಕ ಇಂತಹ ವಿಚಾರಣೆಗೆ, ಅಹವಾಲು ಕೇಳುವ ಮೊದಲು ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಆಯೋಗವು ಆಹ್ವಾನಿಸಿತ್ತು. ಆ ದಿನಾಂಕವನ್ನು ತಿಳಿಸುವುದಾಗಿಯೂ ಒಪ್ಪಿಗೆ ಪತ್ರವನ್ನೂ ಕೇಳಿತ್ತು.

ಆದರೆ ಕೊನೆಯ ಗಳಿಗೆಯವರೆಗೂ ದಿನಾಂಕ ಹಾಗೂ ಸಮಯ ನಿಗದಿಪಡಿಸದೇ ಪ್ರಾಂತ ರೈತ ಸಂಘವನ್ನು ಆಹ್ವಾನಿಸದೇ ದುರುದ್ದೇಶದಿಂದ ವಂಚಿಸಿತು. 'ಹೌದಪ್ಪ'ಗಳನ್ನು ಕರೆದು ವಿಚಾರಣೆಯ ನಾಟಕ ಮುಗಿಸಿತು. ನಾಗರೀಕರ, ರೈತರ ನಿಜವಾದ ಬವಣೆಗಳ ವಿರುದ್ಧ, ಪ್ರಾಮಾಣಿಕವಾಗಿ ಹೋರಾಟ ನಡೆಸುತ್ತಿರುವ ಜನಸಂಘಟನೆಯ ಪ್ರತಿನಿಧಿಗಳನ್ನು ಬೇಕೆಂದೇ ಹೊರಗಿಟ್ಟು ತೀರ್ಮಾನ ಕೈಗೊಳ್ಳುತ್ತಿರುವುದು ಆಯೋಗದ ನಿಜ ಬಣ್ಣವನ್ನು ಬಯಲುಗೊಳಿಸುತ್ತಿದೆ. ಆ ವಿಚಾರಣೆಯ ಸಭೆಗಳು ವಿಶ್ವಬ್ಯಾಂಕ್‌ನ ಹಣ ಪ್ರಾಯೋಜಕತೆಯಿಂದ ನಡೆಯುತ್ತಿವೆ ಎಂಬುದು ಜಗಜ್ಜಾಹೀರಾಗಿದೆ. ಅಲ್ಲಿನ ಅಧಿಕಾರಿಗಳು ಅವರ ಗುಲಾಮರು ಎಂಬುದನ್ನು ಬೇರೆ ಹೇಳಬೇಕಿಲ್ಲ. ಆದ್ದರಿಂದ ಜನತೆಯ ಇಂತಹ ಕಪಟ ನಾಟಕಗಳನ್ನು ಬಯಲಿಗೆಳೆಯಬೇಕು. ಹೋರಾಟ ತೀವ್ರಗೊಳಿಸಬೇಕಿದೆ. ರೈತ ಹಾಗೂ ಕಾರ್ಮಿಕ ಹಾಗೂ ಜನಪರ ಸಂಘಟನೆಗಳು ಈ ವಂಚನೆಯನ್ನು ಸ್ಪಷ್ಟವಾಗಿ ಅರಿತು ಪ್ರತಿಭಟನೆ ನಡೆಸಬೇಕಿದೆ.

## ಮತ್ತೆ ಕೊಡಗಿನಲ್ಲಿ ಬಜರಂಗದಳದಿಂದ ದಳ್ಳುರಿ - ಖಂಡನೀಯ

ಕಳೆದ ತಿಂಗಳು ಪ್ರಶಾಂತ ಕೊಡಗಿಗೆ ಕೊಳ್ಳಿ ಇಟ್ಟು ಕೇಕೆ ಹಾಕಿದ್ದ ಬಜರಂಗದಳ, ವಿಶ್ವಹಿಂದೂ ಪರಿಷತ್‌ನ ಚಿಡ್ಡಿ ಪಡೆ, ಇದೇ ಜನವರಿ 18 ರಂದು ಮಡಿಕೇರಿಯಲ್ಲಿ ಸಾಮರಸ್ಯ ಸಮಾವೇಶದ ಹೆಸರಿನಲ್ಲಿ ಸಭೆ ನಡೆಸಿ ದಾಂಧಲೆ, ಹಲ್ಲೆಗಳನ್ನು ಮತ್ತೆ ಹುಟ್ಟುಹಾಕಲು ಮುಂದಾಗಿದೆ. ಈ ಸಮಾವೇಶದಿಂದ ಹಿಂತಿರುಗುತ್ತಿದ್ದ ಪುಂಡರ ತಂಡ ಮಾರ್ನಾಡು ಬಳಿಯ ಹಾಯತ್ತೂರಿನ ಮಸೀದಿ ಮುಂದೆ ಸಾಗುವಾಗ ಪ್ರಚೋದನಕಾರಿ ಘೋಷಣೆ ತೂರಾಟ ನಡೆಸಿದ್ದಾರೆ. ಇದರ ನಂತರ ಹಲವು ವಾಹನಗಳಲ್ಲಿ ಬಂದವರು ಗ್ರಾಮದ ಅಲ್ಪಸಂಖ್ಯಾತರಿಗೆ ಸೇರಿದ ಅಂಗಡಿ ಆಸ್ತಿಪಾಸ್ತಿ ಹಾನಿ ಮಾಡಿ ಲೂಟಿ ಮಾಡಿದ್ದಾರೆ. ಬೆಂಕಿ ಇಟ್ಟಿದ್ದಾರೆ. ಇದು ಉಗ್ರ ಖಂಡನೀಯ.

ಈ ಕೋಮುವಾದಿಗಳ ಅಟ್ಟಹಾಸವನ್ನು ಖಂಡಿಸಿ ಡಿಸೆಂಬರ್ 27 ರಂದು ನಡೆದ ಜಾತ್ಯಾತೀತ ವೇದಿಕೆಯ ಬೃಹತ್ ಐತಿಹಾಸಿಕ ಸಮಾವೇಶಕ್ಕೆ ಪ್ರತಿಯಾಗಿ ಇಂತಹ ಆದರೆ ಸಾಮರಸ್ಯದ ಹೆಸರಿನಲ್ಲಿ ಗಲಭೆ ಸೃಷ್ಟಿಸುತ್ತಿರುವುದು ಇವರ ಹತಾಶೆಯ ಸ್ಥಿತಿ ತೋರಿಸುತ್ತಿದೆ. ಇನ್ನೊಂದೆಡೆ ಗೃಹಸಚಿವರು ಖರ್ಗೆಯವರು ಹಿಂದಿನ ಗಲಭೆಗ್ರಸ್ತ ಪ್ರದೇಶಗಳಿಗೆ ಭೇಟಿ ನೀಡಿ, ಸಿಓಡಿ ತನಿಖೆ ನಡೆಸುವ, ಹಾಗು ತಪ್ಪಿತಸ್ಥ ಗಲಭೆಕೋರರು ಮತ್ತು ಪೊಲೀಸರ ಅಧಿಕಾರಗಳ ಮೇಲೆ ಕ್ರಮ ಜರುಗಿಸುವ ಭರವಸೆ ಜಾರಿಯಾಗಿಲ್ಲದಿರುವುದು ಸಹ ಗಂಭೀರ ವಿಷಯ. ಈಗಲಾದರೂ ತಕ್ಷಣ ಕಾರ್ಯಮಗ್ನನಾಗಬೇಕಿದೆ. ಈ

# ನೀರಿನ ವ್ಯಾಪಾರಿಗಳು

**ನಿತ್ಯ ಜೀವನದ ಅಗತ್ಯ ವಸ್ತುಗಳು, ಬೆಲೆ ಏರಿಕೆ, ಆದಾಯದ ಮಿತಿಗಳಿಂದ ಬದುಕಿನ ಬಂಡಿಎಳೆಯಲು ಸಾಧ್ಯವಾಗದೇ ಎದುಸಿರಿಟ್ಟು ಏಳಿವಿಳಿ ಒದ್ದಾಡುತ್ತಿರುವ ನಾಗರೀಕರ ಗಂಟಲಲ್ಲಿ ನೀರಿನ ದರಗಳ ಹೆಚ್ಚಳದ ಬಿಲ್ಲನ್ನು ತುರುಕಿದೆ ಎಸ್.ಎಂ.ಕೃಷ್ಣರ ಸರ್ಕಾರ. ವಿಶ್ವಬ್ಯಾಂಕಿನ ಶರತ್ತುಗಳನ್ನು ಶಿರಸಾವಹಿಸಿ ಪಾಲಿಸುತ್ತಿರುವ ಈ ಹೈಟೆಕ್ ಮುಖ್ಯಮಂತ್ರಿ ಬೆಂಗಳೂರನ್ನು ಸಿಂಗಾಪೂರ ಮಾಡುವ ಮಾದರಿಯ ಶ್ಯಾಂಪಲ್ಲನ್ನು ಸ್ವಲ್ಪವೇ ಬಿಚ್ಚಿಟ್ಟಿದ್ದಾರೆ. ಇಷ್ಟಕ್ಕೇ ಹೀಗಾದರೆ ಹೇಗೆ ಎಂಬ ಸಾಂತ್ವನವನ್ನೂ ಹೇಳುತ್ತಿದ್ದಾರೆ. ಕುಡಿವ ನೀರು, ಒಳಚರಂಡಿ ವ್ಯವಸ್ಥೆ ನಿರ್ವಹಣೆಯನ್ನು ಖಾಸಗೀಕರಿಸಲು ನಿರ್ಧರಿಸಿರುವ ಸರ್ಕಾರ ಇಂತಹ ಪೂರ್ವಭಾವಿ ಕಸರತ್ತಿಗೆ ಇಳಿದಿದೆ. ಇದರ ಪರಿಣಾಮ ಏನು ಎಂಬ ಬಗ್ಗೆ ವಿಶ್ಲೇಷಿಸಿದ ಲೇಖನ.**

ಎನ್.ಪ್ರಭಾ

ರಾಜಧಾನಿಯ ನಾಗರಿಕರ ನಡುವೆ, ಇದೀಗ ಬಿಸಿಬಿಸಿ ಚರ್ಚೆಗೆ ಗ್ರಾಸವಾಗಿರುವ ವಿಷಯವೆಂದರೆ ತಣ್ಣನೆ ಹರಿಯುವ 'ನೀರು'. ಇದಕ್ಕೆ ಕಾರಣ ಇಲ್ಲದಿಲ್ಲ. ಎಸ್.ಎಂ.ಕೃಷ್ಣರ ಕೊಡುಗೆಯನ್ನು ಮರೆಯುವಂತಿಲ್ಲ.

ಪ್ರತಿ ಬಾರಿಯು ಬಿಲ್ ಕೊಡುವ ರೀತಿಯಲ್ಲಿ ಈ ತಿಂಗಳು ಬಿಲ್ ಕೊಡಲೆಂದು ನೀರು ಸರಬರಾಜು ಇಲಾಖೆಯ ನೌಕರರು ಮನೆಗಳಿಗೆ, ವಠಾರಗಳಿಗೆ, ವಸತಿ ಸಂಕೀರ್ಣಗಳಿಗೆ ಬಂದಾಗ ಮಾಮೂಲಿ ರೀತಿಯಲ್ಲಿ ವಾಪಸ್ಸಾಗಲು ಸಾಧ್ಯವಾಗಲಿಲ್ಲ. ಬಿಲ್ ಕೈಗೆ ತೆಗೆದುಕೊಂಡ ಕೂಡಲೇ ಮನೆಯಲ್ಲಿದ್ದ ಮಹಿಳೆಯರು ನೌಕರರ ಮೇಲೆ ಹೌಹಾರಿ ಬೀಳುತ್ತಿದ್ದರು. ದುಬಾರಿ ದರಗಳನ್ನು ನಿಗದಿಪಡಿಸಿದ ಬಿಲ್‌ಗಳನ್ನು ಮುಖಕ್ಕೆ ಬಿಸಾಡಿ ಶಾಪಹಾಕುತ್ತಿದ್ದರು. ಎಷ್ಟೋ ಕಡೆಗಳಲ್ಲಿ ಬೀದಿ ಕಾಳಗಗಳು ನಡೆದು ಹೋದವು. ನೌಕರರ ಮೇಲೆ ಪ್ರಯೋಗವಾದ ಈ ಸಿಟ್ಟಿಗೆ ಕಾರಣ ಕೃಷ್ಣಾರ ಸರ್ಕಾರ. ಹೊಸ ವರ್ಷಕ್ಕೆ ಬೆಂಗಳೂರಿನ ನಾಗರಿಕರಿಗೆ ಅವರು ಕೊಟ್ಟ ಉಡುಗೊರೆ.

ಇತ್ತೀಚೆಗೆ ನಡೆದ ಕಾರ್ಪೋರೇಷನ್ ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ಮತದಾರರ ಮುಂದೆ ಭರವಸೆಗಳ ಮೂಟೆಯನ್ನೇ ಸುರಿದಿತ್ತು. ಬೆಂಗಳೂರನ್ನು ಸಿಂಗಾಪೂರವನ್ನಾಗಿಸುವ, ಬೆಂಗಳೂರಿನ ನಾಗರೀಕರಿಗೆ ಹೈಟೆಕ್ ನಗರವನ್ನು ಪ್ರಾಪ್ತಿ ಮಾಡುವ ಸಾಕಷ್ಟು ಅಸ್ತ್ರಗಳು ಭರವಸೆಗಳ ಮೂಟೆಯಿಂದ ಉದುರಿದ್ದವು.

ಏನೆಲ್ಲಾ ಖರಾಮತ್ತುಗಳನ್ನು ಚಲಾಯಿಸಿದ ನಂತರ ಅಂತೂ ಕಾಂಗ್ರೆಸ್ ಮಡಿಲಿಗೆ ನಗರಪಾಲಿಕೆ ದಕ್ಕೇ ಬಿಟ್ಟಿತು. ಅಧಿಕಾರ ಸಿಕ್ಕದ್ದೇ ತಡ ಮೊದಲು ಮಾಡಿದ ಕೆಲಸವೆಂದರೆ ನೀರು ಬಳಕೆದಾರರಿಗೆ ಶೇ 71 ರಷ್ಟು ದರ ಏರಿಕೆ ಮಾಡಿ, ಮೊದಲನೆ ಅಸ್ತ್ರ ಪ್ರಯೋಗಿಸಿ ಸಿಂಗಪೂರದ ರುಚಿ ತೋರಿಸಿದ್ದು. ಇನ್ನೂ ಹಲವಾರು ಅಸ್ತ್ರಗಳು ಪ್ರಯೋಗಕ್ಕೆ ಸಿದ್ಧವಾಗಿವೆ. ತಾಲೀಮಿನ ಹಂತದಲ್ಲಿವೆ.

**ಇಳಿಕೆಯ ನಾಟಕ**

ಶೇ 71 ದರ ಏರಿಕೆ ಆದ ಕೂಡಲೇ ಬೆಚ್ಚಿಬಿದ್ದ ನಾಗರಿಕರು ಪ್ರತಿಭಟನೆ ದಾರಿ ಹಿಡಿದರು. ಹತ್ತಾರು ರೂಪದ ಪ್ರದರ್ಶನಗಳು ಪ್ರತಿರೋಧಗಳು ಬಂದ ನಂತರ ಕಾಂಗ್ರೆಸ್ ಪಕ್ಷದ ಒಳಗಿನ ಅನೇಕ ಮುಖಂಡರು ಇದನ್ನರಿತು ದರ ಏರಿಕೆಯ ವಿರೋಧ ಮಾಡುವ ನಾಟಕವಾಡಿದ ಮೇಲೆ ಹೈಟೆಕ್ ಮುಖ್ಯಮಂತ್ರಿಗಳು ದರ ಇಳಿಕೆಯ ಪ್ರಕಟಣೆ ಹೊರಡಿಸಿದರು. ದರ ಇಳಿಸಿದ ನಂತರವೂ ನೀರಿಗೆ ಕೊಡಬೇಕಾದ ಹಣವೆಷ್ಟು ಎಂಬುದನ್ನು ಅಂದಾಜು ಮಾಡಿದರೆ ಬೆಚ್ಚಿ ಬೀಳುವಂತಾಗುತ್ತದೆ.

**ಸರ್ಕಾರದ ಹಸಿಸುಳ್ಳಿನ ಕಂತೆ**

ಜನರ ಅಭಿಪ್ರಾಯಕ್ಕೆ ಮಣಿದು ದರ ಏರಿಕೆಯನ್ನು ಶೇ 50.09 ಕ್ಕೆ ಇಳಿಸಿದ್ದೇವೆಂದು ಸರ್ಕಾರ ಡಂಗೂರ ಸಾರಿತು. ಸರಿಯಾದ ಲೆಕ್ಕಾಚಾರ ಮಾಡಿದರೆ ಪ್ರಸ್ತುತ ದರ ಏರಿಕೆಯ ಪ್ರಮಾಣ ಶೇ 136. ಈ ಹಿಂದೆ 25 ಸಾವಿರ ಲೀಟರಿನವರೆಗೆ ಮೊದಲನೇ ಹಂತ (1st Slab)ವನ್ನು ನಿಗದಿಪಡಿಸಿ 65 ರೂಪಾಯಿಗಳಷ್ಟು ಸಂಗ್ರಹ ಮಾಡುತ್ತಿದ್ದರು. ಆದರೆ ಈಗ ಮೊದಲನೇ ಹಂತವನ್ನು 15,000 ಲೀಟರುಗಳಿಗೆ ನಿಗದಿಪಡಿಸಿ 100 ರೂಪಾಯಿಗಳನ್ನು ಸಂಗ್ರಹಮಾಡಲಾಗುತ್ತಿದೆ. ಹಾಗೆಯೇ 15 ಸಾವಿರದಿಂದ 25 ಸಾವಿರ ಲೀಟರುಗಳವರೆಗೆ ಎರಡನೇ ಹಂತವನ್ನು (II Slab) ನಿಗದಿಪಡಿಸಿ 165 ರೂ. ದರ ಹೇರಲಾಗಿದೆ. ಈ ರೀತಿಯಾದ್ದರಿಂದಾಗಿ ನೀರಿನ ದರ ಏರಿಕೆಯ ಪ್ರಮಾಣ ಶೇ 136. (ಪ್ರತಿ ಒಂದು ಸಾವಿರ ಲೀಟರಿಗೆ 3.50 ರೂಪಾಯಗಳಷ್ಟಿದ್ದ ನೀರಿನ ದರ ಈಗ 6.50 ರೂಪಾಯಿಗಳಿಗೆ ಏರಿದೆ). ದರ ಏರಿಕೆಯ ಪ್ರಮಾಣ 71 ರಿಂದ 50.9 ಇಳಿದಿದೆಯೆನ್ನುವ ಸರ್ಕಾರದ ಹೇಳಿಕೆ ಬರೀ ಬೊಗಳೆ.

ಇನ್ನೂ ಬೆಚ್ಚಿ ಬೀಳಿಸುವ ಸಂಗತಿಯೆಂದರೆ ಬಿಲ್‌ಗಳು ಪಾವತಿಯಾದಾಗ ದರ ಏರಿಕೆಯ ಪ್ರಮಾಣ ಕೆಲವೆಡೆ 5 ಪಟ್ಟು ಹೆಚ್ಚಾಗಿದ್ದದ್ದು.

ಬಿಲ್‌ಗಳು ಬಂದಾಗ ಕರೆಂಟ್ ಶಾಕ್ ಕೊಟ್ಟಂತಾಯಿತೆಂದು ಹೇಳಿದವರು 'ಕುಮಾರಸ್ವಾಮಿ ಲೇಔಟ್'ನ ಮಧ್ಯಮ ವರ್ಗಕ್ಕೆ ಸೇರಿದ ಶ್ರೀಮತಿ ಸುಕುಮಾರ್‌ರವರು.

70 ರಿಂದ ಆರಂಭವಾಗಿ ಗರಿಷ್ಟವೆಂದರೆ 90 ರೂಪಾಯಿ ಗಳು ಬಿಲ್ ಬರುತ್ತಿದ್ದ ಜಾಗದಲ್ಲಿ ಏಕದಂ 340 ರೂಪಾಯಿಗಳ ಬಿಲ್ ಬಂದಿತೆಂದು 'ದಂ' ಕಟ್ಟಿದ ಶ್ರೀಮತಿ ಸುಕುಮಾರ್ ಬಿಲ್ ಕೊಡಲು ಬಂದಿದ್ದ ನೌಕರನ ಮೇಲೆ ಲಡಾಯಿ ಮಾಡಲು ಹೋಗಿದ್ದರಂತೆ. ಈಗ ನೀವೇ ಲೆಕ್ಕ ಹಾಕಿ ವಾಸ್ತವದಲ್ಲಿ ಏರಿಕೆಯ ದರ ಏಷ್ಟಾಗಿದೆ?

ಗರಿಷ್ಟ 105 ರೂಪಾಯಿಗಳ ಬಿಲ್ ಪಡೆಯುತ್ತಿದ್ದ ಶ್ರೀರಾಮಪುರದ ನಿವಾಸಿ ಜಯಲಕ್ಷ್ಮಿಯವರಿಗೆ ಬಂದ ಹೊಸ ದರ 215 ರೂಪಾಯಿಗಳಷ್ಟು.

8 ಕುಟುಂಬಗಳಿಂದ ಕೂಡಿದ ಲಕ್ಕಸಂದ್ರದ ವಠಾರದ ನಿವಾಸಿ ಸುವರ್ಣಾ ಪ್ರಕಾಶ್‌ರವರ ಕುಟುಂಬ ಪ್ರತಿತಿಂಗಳು ಪಾವತಿಸುತ್ತಿದ್ದದ್ದು ತಮ್ಮ ಪಾಲಿನ 100 ರೂಗಳನ್ನು ಈ ಬಾರಿ ಅವರು ಕೊಡಬೇಕಾಗಿ ಬಂದ ಹಣ 240 ರೂ. ಗಳು.

ಕನಿಷ್ಟ ದರ 100 ರೂ. ಎನ್ನುವ ಸರ್ಕಾರದ ಪ್ರಕಟಣೆ ವಾಸ್ತವದಲ್ಲಿ ಎಲ್ಲೂ ಕಾಣುತ್ತಿಲ್ಲ. 140-150 ರೂಪಾಯಿಗಳಿಂದಲೇ ಕನಿಷ್ಟ ಪ್ರಾರಂಭವೆನ್ನುತ್ತಿದ್ದಾರೆ ಅನೇಕ ನಾಗರೀಕರು.

ಸರ್ಕಾರದ ಇಂಥ ಉಡುಗೊರೆಗಳನ್ನು ಬಿಲ್ಲಿನ ರೂಪದಲ್ಲಿ ತಂದ ನೌಕರರು ಹೀಗಾಗಿಯೇ ಸಾರ್ವಜನಿಕರ ಸಿಟ್ಟಿಗೆ ಸಹಜವಾಗಿ ಗುರಿಯಾದದ್ದು.


ವಿವಿಧ ಹಂತಗಳಲ್ಲಿ ನೀರಿನ ದರ ಏರಿಕೆಯಾಗಿದ್ದರೂ ಬೆಂಗಳೂರಿನ ಬಹುಸಂಖ್ಯಾತ ಜನ ಒಂದು ಮತ್ತು ಎರಡನೇ ಹಂತದ ಬಳಕೆದಾರರೇ ಆಗಿದ್ದು ಈಗಿನ ನೂತನ ಬಿಲ್‌ಗಳು ಗಾಬರಿ ಮತ್ತು ಭಯ ಹುಟ್ಟಿಸುತ್ತಿವೆ. ಬಡ ಮತ್ತು ಮಧ್ಯಮವರ್ಗದ ಜನತೆಗೆ ಇದರಿಂದಾಗಿ ಬಲವಾದ ಹೊಡೆತ ಬಿದ್ದಂತಾಗಿದೆ. ಜಲಮಂಡಳಿಯಲ್ಲಿ ಆಗುತ್ತಿರುವ ದುಂದುವೆಚ್ಚ, ಭ್ರಷ್ಟಾಚಾರ ಮತ್ತು ನೀರು ಸೋರಿಕೆಯನ್ನು ತಪ್ಪಿಸುವುದರಿಂದಲೇ ನಿಭಾಯಿಸಬಹುದಾಗಿದ್ದ ಜಲಮಂಡಳಿ ದುಬಾರಿ ದರಗಳನ್ನು ನಿಗದಿಪಡಿಸಿ ಬಡವರ ಮೇಲೆ ಎಳೆದಿದೆ.

**ವಿದ್ಯುತ್ ದರ ಏರಿಸುವ ಪೂರ್ವ ಸೂಚನೆ**

ಏಳು ವರ್ಷಗಳ ಕಾಲ ನೀರಿನ ದರಗಳನ್ನು ಏರಿಸುವ ಪ್ರಯತ್ನವನ್ನೇ ಮಾಡಿರಲಿಲ್ಲವೆಂಬ ಮತ್ತೊಂದು ಹಸಿ ಸುಳ್ಳನ್ನು ಸರ್ಕಾರ ಹೇಳಿದೆ. 1997, 98, 99 ರಲ್ಲಿ ವಿದ್ಯುತ್ ದರಗಳು ಏರಿದಾಗ ಅದನ್ನು ನೆಪಮಾಡಿ ನೀರಿನ ದರಗಳನ್ನು ಸಹ ಏರಿಸಿದ್ದನ್ನು ಮರೆತದ್ದಾದಾರೂ ಏಕೋ ಕಾಣೆವು?

ಆಗೆಲ್ಲಾ ವಿದ್ಯುತ್ ದರ ಏರಿಕೆಯ ನಂತರ ನೀರಿನ ದರ ಏರಿತ್ತು. ಆದರೆ ಈಗ ಬಹಳ ಸ್ಪಷ್ಟವಾಗಿ ಕಾಣುವುದೇನೆಂದರೆ ದುಬಾರಿ ದರಗಳನ್ನು ಮೊದಲು ನೀರಿಗೆ ನಿಗದಿ ಮಾಡಿ ಆ ನಂತರ ವಿದ್ಯುತ್ ವಲಯಕ್ಕೆ ಕೈ ಹಾಕುವುದು. ಹಾಗಿದ್ದ ಮೇಲೆ ವಿದ್ಯುತ್ ದರಗಳು ಎಷ್ಟು ಪಟ್ಟು ಏರಬಹುದು ಊಹಿಸಲು ಸಾಧ್ಯವೇ?

ವಿದ್ಯುತ್ ಖಾಸಗೀಕರಣ ಹಾಗೂ ಬೆಲೆ ಏರಿಕೆ ವಿಷಯಗಳು ಆಗಾಗ ಸರ್ಕಾರದ ಪುಂಗಿಯಿಂದ ಉದುರತ್ತಲೇ ಇರುತ್ತವೆ. ಅವಕಾಶ ಸಿಕ್ಕಾಗಲೆಲ್ಲಾ ಸರ್ಕಾರ ಪೂರ್ವಸೂಚನೆ ನೀಡುತ್ತಲೇ ಇದೆ. ವಿದ್ಯುತ್ ಸಂಬಂಧಿ ಅಸ್ತ್ರ ಯಾವಾಗ ಬೇಕಾದರೂ ಪ್ರಯೋಗವಾಗಬಹುದು. ಎಷ್ಟು ರಕ್ತ ಬೇಕಾದರೂ ಕುಡಿಯಬಹುದು. ನೀರಿನ ದರ ಏರಿಕೆ ವಿರುದ್ಧ ವ್ಯಾಪಕ ಹೋರಾಟ ಬೆಳೆಯದೇ ಹೋದರೆ ವಿದ್ಯುತ್ ದರ ಏರಿಕೆಯ ತೀರ್ಮಾನ ಸರ್ಕಾರಕ್ಕೆ ನೀರು ಕುಡಿದಷ್ಟೇ ಸಲೀಸಾಗುವುದರಲ್ಲಿ ಆಶ್ಚರ್ಯವೇ ಇಲ್ಲ. ವಿದ್ಯುತ್ ದರ ಏರಿಕೆಗೆ ಪೂರಕವಾಗಿಯೂ ಮುಂದಿನ ದಿನಗಳಲ್ಲಿ ಖಾಸಗೀಕರಿಸುವ ಕಾರಣದಿಂದಾಗಿಯು ಸರ್ಕಾರ, 'ನೀರನ್ನು' ಸರಕಾಗಿಸಿ ವ್ಯಾಪಾರಕ್ಕಿಟ್ಟಿರುವುದು. ಆ ಮೂಲಕ ಬಡವರ ಪಾಲಿಗೆ ಭೋಗವಸ್ತುವನ್ನಾಗಿಸ ಹೊರಟಿರುವುದು, 'ಕನ್ನಡಿಯೊಳಗೆ ಮುಖ



ವಿದ್ಯುತ್ ನಿಯಂತ್ರಣ ಪ್ರಾಧಿಕಾರದಂತೆ ಜಲ ನಿಯಂತ್ರಣ ಪ್ರಾಧಿಕಾರ ರಚಿಸುವುದಾಗಿ ಸರ್ಕಾರ ಹೇಳಿದೆ. ಜನರ ಭಾದ್ಯತೆಗೆ ಹೊಣೆಯಾಗದ ಈ ಪ್ರಾಧಿಕಾರಗಳಿಂದ ಜನರಿಗೆ ಭಾದಯೇ ಹೆಚ್ಚು ಎಂಬುದನ್ನು ಅರಿಯಬೇಕಿದೆ.

**ವಿಶ್ವಬ್ಯಾಂಕ್ ಷರತ್ತು**

ಬೆಂಗಳೂರಿನಲ್ಲಿ ಈಗ ವಿಶ್ವ ಬ್ಯಾಂಕ್ ಸಾಲದ ಹಣದ ಭರಾಟೆ ನಡೆಯುತ್ತಿದೆ. ಸಾಲನೀಡುವ ಸೋಗಿನಲ್ಲಿ ವಿಶ್ವಬ್ಯಾಂಕ್ ವಿಧಿಸುವ ಎಲ್ಲ ಷರತ್ತುಗಳನ್ನು ಶಿರಸಾವಹಿಸಿ ಪಾಲಿಸಲು ಕಷ್ಣ ಸರ್ಕಾರ ಸಜ್ಜಾಗಿ ನಿಂತಿದೆ. ಹೀಗಾಗಿ ಎಲ್ಲಾ ಅಗತ್ಯ ವಸ್ತುಗಳು ಖಾಸಗಿಯವರ ವ್ಯಾಪಾರಕ್ಕೆ ಮುಕ್ತವಾಗಿ ತೆರೆದುಕೊಂಡಿವೆ.

ದರ ಏರಿಕೆ ಖಂಡಿಸಿ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯು ಜನವರಿ 16 ರಿಂದ 24 ರವರೆಗೆ ಪ್ರಚಾರಾಂದೋಲನವನ್ನು 24 ರಂದು ನಗರದ ನಾಲ್ಕು ಪ್ರದೇಶಗಳ ಜಲಮಂಡಳಿ ಕಛೇರಿಗಳೆದುರು ಪಿಕೆಟಿಂಗ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

- ಐದು ಮಿಲಿಯನ್‌ಗಿಂತ ಹೆಚ್ಚುಜನ ಪ್ರತಿವರ್ಷ ಜಗತ್ತಿನಾದ್ಯಂತ ಮಾನವ ರಕ್ಷಿತವಲ್ಲದ ಕುಡಿಯುವ ನೀರಿನ ಕಾರಣದಿಂದಾಗಿ ಬರುವ ಖಾಯಿಲೆಗಳಿಂದ ಸಾಯುತ್ತಿದ್ದಾರೆ. ವಿಶೇಷವಾಗಿ ಮಕ್ಕಳು ಎಂಬುದನ್ನು ಗಮನಿಸಬೇಕು.
- ಮಾನವರಿಂದ ಬಳಕೆಯಾಗುವ ನೀರಿನಲ್ಲಿ ಶೇ 65 ರಷ್ಟು ಪ್ರಮಾಣದ ನೀರು ಕೃಷಿ ಚಟುವಟಿಕೆಗಳಿಗೂ ಶೇ 25 ರಷ್ಟು ಕೈಗಾರಿಕೆಗಳ ಬಳಕೆಗೂ ಶೇ 10 ಮನೆ ಬಳಕೆ ಹಾಗೂ ಮುನಿಸಿಪಾಲಿಟಿಗಳಿಗೂ ಖರ್ಚಾಗುತ್ತಿದೆ.
- 70 ರ ದಶಕದಲ್ಲಿ 9.000 ಮಿಲಿಯನ್ ಲೀಟರ್ ನೀರನ್ನು ಬಾಟಲಿಗಳ ಮೂಲಕ ಮಾರಾಟ ಮಾಡಲಾಗಿದೆ.
- 80 ರ ದಶಕದಲ್ಲಿ 19.000 ಮಿಲಿಯನ್ ಲೀಟರ್ ನೀರು ಬಾಟಲಿ ಗಳ ಮೂಲಕ ವಹಿವಾಟಾದರೆ ಕಳೆದ ದಶಕದ ಅಂತ್ಯದ ವೇಳೆಗೆ 6 ಬಿಲಿಯನ್ ಲೀಟರು ನೀರು ಪ್ರತಿವರ್ಷ ಬಾಟಲಿಗಳ ಮೂಲಕ ಜಗತ್ತಿನೆಲ್ಲೆಡೆ ಮಾರಾಟಗೊಂಡಿದೆ.
- ನೈಸರ್ಗಿಕ ಸಂಪನ್ಮೂಲಗಳ ರಕ್ಷಣಾ ಸಮಿತಿ (ಎನ್‌ಆರ್‌ಡಿಸಿ) ನಡೆಸಿದ ಸಮೀಕ್ಷೆಯ ಪ್ರಕಾರ ಬಾಟಲಿಗಳಲ್ಲಿ ತುಂಬಿ ಮಾರಾಟ ಮಾಡುವ ನೀರು ನಲ್ಲಿ ನೀರಿಗಿಂತ ಕಡಿಮೆ

## ನೀರಿನ ಸಲುವಾಗಿ ಈವರೆಗೆ ಹರಿದುಬಂದ ವಿದೇಶಿ ಹಣ

| ಯೋಜನೆಯ ಹೆಸರು | ಅನುದಾನ ನೀಡಿದ ಸಂಸ್ಥೆ | ಹಣದ ಮೊತ್ತ |
|---|---|---|
| 1. ಸಮಗ್ರ ಜಲಾನಯನ ಅಭಿವೃದ್ಧಿಯೋಜನೆ | ವಿಶ್ವಬ್ಯಾಂಕ್ | ಒಂದು ಕೋಟಿ |
| 2. ಸಮಗ್ರ ಗ್ರಾಮೀಣ ನೀರು ಸರಬರಾಜು ಪರಿಸರ ಮತ್ತು ಶೌಚಾಲಯ | ವಿಶ್ವಬ್ಯಾಂಕ್ | 100.79 ಕೋಟಿ |
| 3. ಸಮಗ್ರ ಗ್ರಾಮೀಣ ನೀರು ಸರಬರಾಜು ಪರಿಸರ ಮತ್ತು ಶೌಚಾಲಯ - 2ನೇ ಹಂತ | ಡಾನಿಡ | 10.67 ಕೋಟಿ |
| 4. ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಶೌಚಾಲಯ | ನೆದರ್ ಲ್ಯಾಂಡ್ | 7.54 ಕೋಟಿ |
| 5. ಕಾವೇರಿ ನೀರು ಸರಬರಾಜು ಯೋಜನೆ ನಾಲ್ಕನೇ ಹಂತ | ಜೆಬಿಐಸಿ | 251 ಕೋಟಿ |
| 6. ಬೆಂಗಳೂರು ನಗರ ನೀರು ಸರಬರಾಜು ಮತ್ತು ಶೇಖರಣಾ ಅಭಿವೃದ್ಧಿ ಯೋಜನೆ | ಫ್ರಾನ್ಸ್ | 5 ಕೋಟಿ |



# ಮುಷರ್ರಫ್ ಭಾಷಣ ಒಂದು ಹೊಸ ಆರಂಭದ ನಿರೀಕ್ಷೆ

ಹರ್ಕಿಶನ್ ಸಿಂಗ್ ಸುರ್ಜಿತ್

***ಪಾಕಿಸ್ತಾನೀ ಅಧ್ಯಕ್ಷ ಜನರಲ್ ಪರ್ವೇಜ್ ಮುಷರ್ರಫ್‌ರವರು ತಮ್ಮ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣ ಇಡೀ ಜಗತ್ತಿಗೆ ಆಶ್ಚರ್ಯ ತಂದಿದೆ. ಭಾರತದ ಉಪಖಂಡದಲ್ಲಿ ಪರಿಸ್ಥಿತಿಯನ್ನು ಸುಧಾರಿಸುವ ಸಾಧ್ಯತೆಗಳುಳ್ಳ ಈ ಭಾಷಣಕ್ಕೆ ವಿಶ್ವಾದ್ಯಂತ ಅನುಕೂಲಕರ ಪ್ರತಿಕ್ರಿಯೆ ಬಂದಿದೆ.***

ಈ ಭಾಷಣದ ಬಗ್ಗೆ ಗಮನಿಸಲೇಬೇಕಾದ ಮೊದಲ ಸಂಗತಿಯೆಂದರೆ ಇದುವರೆಗೆ ದೇಶದೊಳಗೆ, ಹೊರಗೆ ಮೂಲಭೂತವಾದಿ ಹಾಗೂ ಉಗ್ರಗಾಮಿ ಗುಂಪುಗಳಿಗೆ ಸಕಲಬೆಂಬಲ ನೀಡುತ್ತಿದ್ದ ಒಬ್ಬ ವ್ಯಕ್ತಿ ಅದೇ ಗುಂಪುಗಳ ವಿರುದ್ಧ ದೃಢ ಕ್ರಮ ಕೈಗೊಳ್ಳುವ ಆಶಯ ವ್ಯಕ್ತಪಡಿಸಿದ್ದಾರೆ. ಘಟನಾವಳಿಗಳು ಮುಷರ್ರಫ್‌ರನ್ನು ಎಂತಹ ಸ್ಥಿತಿಗೆ ತಂದವೆಂದರೆ ಒಂದೆಡೆ ವಿಶ್ವ ಸಾರ್ವಜನಿಕ ಅಭಿಪ್ರಾಯ, ಇನ್ನೊಂದೆಡೆ ಮೂಲಭೂತವಾದಿ ಗುಂಪುಗಳ ನಡುವೆ ಅಪ್ಪಚ್ಚಿಯಾಗುವ ಪರಿಸ್ಥಿತಿಯಲ್ಲಿ ಮುಷರ್ರಫ್‌ಗೆ ಆಯ್ಕೆ ಕಠಿಣವಾಗಿತ್ತು. ಏನೇ ಆಗಲಿ, ಅವರೀಗ ಒಂದು ಸರಿಯಾದ ಆಯ್ಕೆಯನ್ನೇ ಮಾಡಿದ್ದಾರೆನ್ನಬಹುದು. ಪಾಕಿಸ್ತನದ ದೈನಿಕ 'ಜಂಗ್'ನ ಒಬ್ಬ ಟಿಪ್ಪಣಿಗಾರರು ಇದು "ಝಿಯಾರ" ಪರಂಪರೆಗೊಂದು ಬಲವಾದ ಏಟು ಎಂದು ಹೇಳಿದ್ದಾರೆ. ಅದೇ ರೀತಿ ಟೈಮ್ಸ್ ಆಫ್ ಇಂಡಿಯಾದ ಸಂಪಾದಕೀಯ "ಝಿಯಾ ಉಲ್ ಹಕ್ ನಂತರದ ಮೊದಲ ತದ್ವಿರುದ್ಧ ತಿರುವು" ಎಂದು ಇದನ್ನು ವರ್ಣಿಸಿದೆ. ಭಯೋತ್ಪಾದಕ ಗುಂಪುಗಳಿಗೆ ತರಬೇತಿ, ಶಸ್ತ್ರಾಸ್ತ್ರಗಳನ್ನು ನೀಡಿ ಅವನ್ನು ಬಳಸಿಕೊಳ್ಳುವ ದಾರಿಯನ್ನು ಆರಂಭಿಸಿದ್ದು ದಿವಂಗತ ಝಿಯಾ ಉಲ್ ಹಕ್ ಎಂಬುದನ್ನು ಗಮನಿಸಬೇಕು. ಮೊದಲ ಅಫಘಾನಿಸ್ತಾನದ ಪಿಡಿಪಿಎ ಆಡಳಿತದ ವಿರುದ್ಧ ಅದನ್ನು ಬಳಸಿದ ಆತ ನಂತರ ಭಾರತದ ವಿರುದ್ಧ ಒಂದು ಪರೋಕ್ಷ ಯುದ್ಧ ನಡೆಸಲು ಅದೇ ತಂತ್ರ ಬಳಸಿದರು.

ಅಫಘಾನಿಸ್ತಾನದಲ್ಲಿ ಪಾಕಿಸ್ತಾನೀ ಆಳರಸರ ಅನಗತ್ಯ ಮಧ್ಯಪ್ರವೇಶದಿಂದ ಏನೂ ದಕ್ಕಲಿಲ್ಲ, ಅದೇ ರೀತಿ ಭಾರತದ ವಿರುದ್ಧ ಪರೋಕ್ಷ ಯುದ್ಧದಿಂದಲೂ ಏನೂ ಆಗದು ಎಂದು ಪಾಕಿಸ್ತಾನದ ಜನತೆ ಕೂಡಾ ಅರಿಯುತ್ತಿರುವಂತೆ ಕಾಣುತ್ತದೆ. ಪಾಕಿಸ್ತಾನೀ ಮಾಧ್ಯಮದಿಂದ ಇದು ಸ್ಪಷ್ಟವಾಗಿ ಕಾಣಬರುತ್ತದೆ.

**ಭಾರತದ ಜವಾಬ್ದಾರಿ**

ಭಾರತೀಯ ಉಪಖಂಡದಲ್ಲಿ ಯುದ್ಧದ ಕಾರ್ಮೋಡಗಳು ಆವರಿಸಿರುವ ಸಂದರ್ಭದಲ್ಲಿ ಈ ಪ್ರಕಟಣೆಗಳು ಬಂದಿವೆ. ಇದರಿಂದ ಪರಿಸ್ಥಿತಿ ಸಂಪೂರ್ಣವಾಗಿ ಸುಧಾರಿಸಿದೆ ಎಂದೇನೂ ಹೇಳುವಂತಿಲ್ಲವಾದರೂ ಪರಿಸ್ಥಿತಿಯನ್ನು ತಿಳಿಗೊಳಿಸಲು ಆಧಾರಗಳನ್ನು ಒದಗಿಸಿವೆ ಎನ್ನಬಹುದು. ಭಾರತ ಸರಕಾರ ಇದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಬೇಕಾಗಿದೆ.

ಇದುವರೆಗೆ ಭಾರತ ಸರಕಾರಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಎಂದು ಅರ್ಥವಾದಂತಿಲ್ಲ. ಅದು ಕಾದು ನೋಡುವ ನಿಲುವು ತಳೆದಿವೆ. ಪಾಕಿಸ್ತಾನ ತನ್ನ ಹೇಳಿಕೆಗಳನ್ನು ಕಾರ್ಯರೂಪದಲ್ಲಿ ತಂದು ತೋರಿಸಲಿ ಎಂದು ಅದು ಹೇಳುತ್ತಿದೆ. ಭಾರತೀಯ ಮಾಧ್ಯಮದಲ್ಲೂ ಒಂದು ಸಣ್ಣ ವಿಭಾಗ ಮುಷರ್ರಫ್‌ರವರ ಹೇಳಿಕೆಗಳನ್ನು ನಂಬುವಂತಿಲ್ಲ. ಮೊದಲು ತಮ್ಮ ಮಾತನ್ನು ಅವರು ಕೃತಿಗಿಳಿಸಲಿ ಎಂದು ಹೇಳುತ್ತಿದೆ. ಇದು ಆರೋಗ್ಯಕರ ನಿಲುವಂತೂ ಖಂಡಿತಾ ಅಲ್ಲ. ನಿಜ, ಯಾವುದೇ ಹೇಳಿಕೆಯನ್ನು ಅದನ್ನು ಕಾರ್ಯರೂಪಕ್ಕೆ ತಂದಾಗಲೇ ಸ್ವೀಕರಿಸಬೇಕು. ಆದರೆ ಮುಷರ್ರಫ್‌ರವರ ಹೇಳಿಕೆಗಳನ್ನು ರಾತ್ರಿ ಬೆಳಗಾಗುವಷ್ಟರಲ್ಲೇ ಕಾರ್ಯರೂಪಕ್ಕೆ ತರಲು ಸಾಧ್ಯವೂ ಇಲ್ಲ ಎಂಬುದೂ ಅಷ್ಟೇ ನಿಜ. ಆತನಿಗೆ ಇದಕ್ಕೆ ಸಮಯಕೊಡಬೇಕಾಗಿದೆ ಎಂಬುದು ವಿಶ್ವ ಜನಾಭಿಪ್ರಾಯ ಕೂಡಾ ಎಂಬುದು ವಿಶ್ವದ ಹಲವೆಡೆಗಳಿಂದ ಬರುತ್ತಿರುವ ಹೇಳಿಕೆಗಳಿಂದ ಅನಿಸುತ್ತಿದೆ.

ಒಂದು ಅಂಶ ಗಮನಾರ್ಹ. ಪ್ರಜಾಪ್ರಭುತ್ವ ಇನ್ನೂ ಬೇರು ಬಿಡದ ದೇಶ ಪಾಕಿಸ್ತಾನ. ಬಹಳ ವರ್ಷಗಳಿಂದ ಮೂಲಭೂತವಾದಿಗಳ ಪ್ರಭಾವ ಅಲ್ಲಿ ಬಹಳ. ಮಿಲಿಟರಿ ಮತ್ತು ಐಎಸ್‌ಐ ಕೂಡಾ ತಾವು ನೇರ ಆಳ್ವಿಕೆಯಲ್ಲಿಲ್ಲದ್ದಾಗಲೂ ಚುನಾಯಿತ ಸರಕಾರಗಳಿಗೆ ಆದೇಶ ನೀಡುವ ಸ್ಥಿತಿ ಅಲ್ಲಿದೆ. ಭಾರತದ ವಿರುದ್ಧ ಗಲಭೆ ಎಬ್ಬಿಸುವುದು ಅದಕ್ಕೆ ಬೇಕಾಗಿದೆ. ಆದ್ದರಿಂದ ಮುಷರ್ರಫ್ ತನ್ನ ಹೇಳಿಕೆಗಳನ್ನು ಕಾರ್ಯರೂಪಕ್ಕೆ ಇಳಿಸುವಾಗ ಬಹಳಷ್ಟು ವಿರೋಧ ಎದುರಿಸಬೇಕಾಗುತ್ತದೆ. ಅವರೊಂದು ಕಠಿಣ ಸ್ಥಿತಿಯಲ್ಲಿದ್ದಾರೆ. ಪ್ರಜಾಪ್ರಭುತ್ವವು ಬೇರು ಬಿಟ್ಟ ಭಾರತದಲ್ಲಿ ಮೂಲಭೂತವಾದಿಗಳು ಎಷ್ಟೊಂದು ಗಲಭೆ ಎಬ್ಬಿಸಬಹುದಾದರೆ ಪಾಕಿಸ್ತಾನದಲ್ಲಿನ ಪರಿಸ್ಥಿತಿ ಹೇಗಿರಬಹುದು, ಮುಷರ್ರಫ್‌ರ ಸ್ಥಿತಿಯೇನು ಎಂಬುದನ್ನು ನಾವು ಊಹಿಸಬಹುದಾಗಿದೆ. ಒಂದು ಸಂತಸದ ವಿಷಯವೇನೆಂದರೆ ಒಟ್ಟಾರೆಯಾಗಿ ಪಾಕಿಸ್ತಾನದ ಜನತೆ ಈ ಪ್ರಕಟಣೆಗಳನ್ನು ಸ್ವಾಗತಿಸಿರುವಂತಿದೆ. ದೊಡ್ಡ ಪ್ರತಿಭಟನೆಯೇನೂ ಇದುವರೆಗೆ ಕಂಡುಬಂದಿಲ್ಲ. ಮುಷರ್ರಫ್ ಸೇನಾ ಪಡೆಗಳ ಮೇಲೂ ಸದ್ಯ ಹತೋಟಿ ಹೊಂದಿರುತ್ತಾರೆ. ನಿಜ, ಮುಂದೇನು ಎಂದು ಹೇಳುವಂತಿಲ್ಲ.

ಸಹಜವಾಗಿಯೇ, ಇಂತಹ ಸಂದರ್ಭದಲ್ಲಿ ಭಾರತ ಸರಕಾರದ ಒಂದು ಸಕಾರಾತ್ಮಕ ಸ್ಪಂದನೆ ಮುಷರ್ರಫ್ ತನ್ನ ಪ್ರಕಟಣೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಆತನಿಗೆ ಬಲ ನೀಡಬಲ್ಲದು. ಕಾದು ನೋಡೋಣ ಎಂಬ ಧೋರಣೆ ಭಾರತಕ್ಕೆ ಫಲ ನೀಡಲಿಕ್ಕಿಲ್ಲ. "ಮುಷರ್ರಫ್ ತಮ್ಮ ಮನೆಯನ್ನು ಓರಣಗೊಳಿಸುವ ಮಾತು ಕೊಟ್ಟಿದ್ದಾರೆ ಎಂಬ ಕಾರಣಕ್ಕಾಗಿಯಾದರೂ ವಾಜಪೇಯಿಯವರು ಅವರನ್ನು ಭೇಟಿ ಮಾಡಲು ಅರ್ಧ ದಾರಿ ನಡೆದುಹೋಗಬೇಕು. ಇದರಿಂದ ಭಾರತೀಯ ಉಪಖಂಡ ಇನ್ನೂ ಸ್ವಚ್ಛವಾಗಿ, ಸಂತೋಷಕರವಾಗಿ, ಸುರಕ್ಷಿತವಾಗಿರಬಹುದು" ಎಂದು ಟೈಮ್ಸ್ ಆಫ್ ಇಂಡಿಯಾ ಸಂಪಾದಕೀಯ ಟಿಪ್ಪಣಿ ಮಾಡಿದೆ.

ಭಾರತ ಸರಕಾರ ಈ ಉಪಖಂಡದಲ್ಲಿ ತನ್ನ ಜವಾಬ್ದಾರಿ ನಿರ್ವಹಿಸಬೇಕು ಎಂಬುದು ಭಾರತೀಯ ಮಾಧ್ಯಮದಲ್ಲಿನ ಒಟ್ಟಾರೆ ದನಿ ಎಂದು ಹೇಳಬಹುದು.

**ಕಾಶ್ಮೀರ ಪ್ರಶ್ನೆ**

ಜನರಲ್ ಮುಷರ್ರಫ್‌ರ ಪ್ರಕಟಣೆಗಳಲ್ಲಿ ಕಳವಳ ಮೂಡಿಸುವ ಒಂದೇ ಸಂಗತಿಯೆಂದರೆ ಕಾಶ್ಮೀರದ ಬಗ್ಗೆ ಅವರ ಮಾತು. ಕಾಶ್ಮೀರ ಸ್ವಂತ ಇಚ್ಛೆಯಿಂದ ಭಾರತದಲ್ಲಿ ಸೇರ್ಪಡೆಯಾದದ್ದು, ನಂತರ ಅಲ್ಲಿಯ ಜನತೆ ಆ ನಿರ್ಣಯವನ್ನು, ಕೈಯಲ್ಲಿ ಬಂದೂಕು ಹಿಡಿದು ಸಮರ್ಥಿಸಿಕೊಂಡದ್ದು, ಯಾವ 'ಎರಡು ರಾಷ್ಟ್ರ' ಸಿದ್ಧಾಂತದ ಆಧಾರದ ಮೇಲೆ ಪಾಕಿಸ್ತಾನವು ಕಾಶ್ಮೀರ ತನ್ನದೆನ್ನುತ್ತದೋ ಆ ಸಿದ್ಧಾಂತವನ್ನು ಕಾಶ್ಮೀರದ ಜನತೆಯೊಂದಿಗೆ ಬಾಂಗ್ಲಾ ದೇಶದ ಜನತೆಯೂ ಸಂಪೂರ್ಣವಾಗಿ ಹೂತು ಬಿಟ್ಟಿರುವುದು ಈಗ ಇತಿಹಾಸದ ಸಂಗತಿ. ಇಲ್ಲಿಯೇ "ಕಾಶ್ಮೀರ ನಮ್ಮ ರಕ್ತದಲ್ಲಿದೆ. ಯಾವುದೇ ಪಾಕಿಸ್ತಾನೀ ಕಾಶ್ಮೀರದೊಂದಿಗೆ ತನ್ನ ಸಂಪರ್ಕವನ್ನು ಕಡಿದುಕೊಳ್ಳುವುಗದಿಲ್ಲ" ಎಂಬ ಅವರ ಮಾತು ಅಸಂಬದ್ಧ ಎನಿಸುವುದು. ಸ್ವಾತಂತ್ರ್ಯ ಬಂದ ಕೂಡಲೇ ಪಾಕಿಸ್ತಾನೀ ಆಕ್ರಮಣಕಾರರು ಹರಿಸಿದ್ದು ಈ ಕಾಶ್ಮೀರಿ ರಕ್ತವನ್ನೇ. ಈಗ ಒಂದೂವರೆ ದಶಕದಿಂದ ಭಯೋತ್ಪಾದಕರು ನಿಷ್ಕರುಣೆಯಿಂದ

ಪುಟ 10 ಕ್ಕೆ

## ಮುಷರ್ರಫ್ ಪ್ರಕಟಿಸಿದ ಕ್ರಮಗಳೇನು?

ಮೊದಲನೆಯದಾಗಿ, ಭಯೋತ್ಪಾದನೆ ಮತ್ತು ಉಗ್ರಗಾಮಿತ್ವ ಪಾಕಿಸ್ತಾನಕ್ಕೇ ಒಡ್ಡಿರುವ ಅಪಾಯ ಅವರ ಅರಿವಿಗೆ ಬಂದಂತೆ ಕಾಣುತ್ತದೆ. ಸಂಕುಚಿತ ಹಿಂಸಾಚಾರ ಬಹಳ ಜನಗಳಿರುವ ಆ ದೇಶವನ್ನು ಪೀಡಿಸುತ್ತಿದೆ. ಕೆಲವು ತಿಂಗಳ ಹಿಂದಷ್ಟೇ ಬಹಾವುಲ್‌ಪುರದ ಒಂದು ಚರ್ಚಿನ ಹೊರಗೆ ಹಲವಾರು ಕ್ರಿಶ್ಚಿಯನ್ನರನ್ನು ಸಾಯಿಸಲಾಯಿತು. "ಕಲಾಷ್ನಿಕೋವ್ ಸಂಸ್ಕೃತಿ" ಈ ರೀತಿ ಪಾಕಿಸ್ತಾನದ ಬದುಕನ್ನು ತಟ್ಟಿದ್ದು. "ನಮ್ಮಲ್ಲಿ ಪ್ರತಿಯೊಬ್ಬರಿಗೂ ಇಂತಹ ಸಾಕಪ್ಪಾ ಸಾಕು ಎನಿಸಿದೆ..... ಜಿಗುಪ್ಸೆ ಎನಿಸುತ್ತಿದೆ" ಎಂದು ಪಾಕಿಸ್ತಾನದ ಈ ಸೇನಾಧಿಪತಿ ಇಂತಹದ್ದರಿಂದ ಹಿಂಸಾಚಾರದಲ್ಲಿ ಪಾತ್ರವಿದೆಯೆನ್ನಲಾದ ಲಷ್ಕರ್- ಎ-ತೊಯಿಬಾ ಮತ್ತು ಸಿಪಹ್-ಎ-ಮುಹಮ್ಮದ್‌ನಂತಹ ಸಂಘಟನೆಗಳನ್ನು ನಿಷೇಧಿಸಿದರೂ ಪರಿಸ್ಥಿತಿ ಸುಧಾರಿಸಲಿಲ್ಲ. ಇಂತಹ ಹಿಂಸಾಚಾರಗಳ ವಿರುದ್ಧ ದೃಢ ಕ್ರಮ ಕೈಗೊಳ್ಳುವುದಾಗಿ ಮುಷರ್ರಫ್ ಹೇಳಿದ್ದಾರೆ.

ಎರಡನೆಯದಾಗಿ, ಜೆಹಾದ್ ಎಂದರೇನು ಎಂದು ಮರುನಿರ್ವಚನೆ ಮಾಡಲು ಆತ ಪ್ರಯತ್ನಿಸಿದ್ದಾರೆ. ಈಗ ಇದರ ಅರ್ಥ ಮಿಲಿಟರಿ ಹೋರಾಟಕ್ಕಿಂತ ಹೆಚ್ಚಾಗಿ "ನಿರಕ್ಷರತೆ, ಬಡತನ, ಹಿಂದುಳಿಕೆ ಮತ್ತು ಹಸಿವಿನ" ವಿರುದ್ಧ ಹೋರಾಟ ಎಂದಾಗಿದೆ. "ಇದು ಒಂದು ದೊಡ್ಡ ಜೆಹಾದ್. ನನ್ನ ಅಭಿಪ್ರಾಯದಲ್ಲಿ ಈ ದುಷ್ಟತೆಗಳ ವಿರುದ್ಧ ಪಾಕಿಸ್ತಾನ ಹೋರಾಡಬೇಕಾಗಿದೆ" ಎಂದಿದ್ದಾರೆ ಮುಷರ್ರಫ್. ಇದು ಕೂಡಾ ಪಾಕಿಸ್ತಾನದಲ್ಲಿ ಒಂದು ಪಿಡುಗಾಗಿ ಪರಿಣಮಿಸಿರುವ ಧಾರ್ಮಿಕ ಮೂಲಭೂತವಾದಾದದ ಮೇಲಿನ ಧಾಳಿಯೇ.

ಮೂರನೆಯದಾಗಿ ಅವರು ಐದು ಭಯೋತ್ಪಾದಕ ಸಂಘಟನೆಗಳನ್ನು ನಿಷೇಧಿಸಿದ್ದಾರೆ. ಅವೆಂದರೆ ಜೈಶ್-ಎ-ಮೊಹಮ್ಮದ್, ಲಷ್ಕರ್-ಎ-ತೋಯಿಬಾ, ಸಿಪಹ್-ಎ-ಸಾಹಬಾ, ಟಿಎನ್‌ಎಸ್‌ಎಮ್ ಮತ್ತು ಟಿಜೆಪಿ. ಎರಡು ಸಂಘಟನೆಗಳನ್ನು ಹಿಂದೆಯೇ ನಿಷೇಧಿಸಲಾಗಿತ್ತು. ಇವುಗಳಲ್ಲಿ ಮೊದಲೆರಡು ಡಿಸೆಂಬರ್ 13ರ ಭಾರತದ ಸಂಸತ್ ಭವನದ ಮೇಲಿನ ಧಾಳಿಯಲ್ಲಿ ಇದ್ದವು ಎಂದು ಹೇಳಲಾಗಿದೆ. ಸುನ್ನಿ ತೆಹರೀಕ್‌ನಂತಹ ಇತರ ಸಂಘಟನೆಗಳ ಮೇಲೂ ನಿಕಟ ನಿಗಾ ಇಡಲಾಗುತ್ತದೆ ಎಂದೂ ಅವರು ಹೇಳಿದರು. ಈ ಸಂಘಟನೆಗಳು ಹೆಸರು ಬದಲಿಸಿಕೊಂಡರೂ ನಿಷೇಧ ಮುಂದುವರೆಯುತ್ತದೆ ಎಂದು ಜನವರಿ 15ರಂದು ಇನ್ನೊಂದು ಪ್ರಕಟಣೆಯೂ ಬಂದಿದೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ 'ಸರಕಾರ'ವೆಂಬುದು ಕೂಡಾ ತನ್ನ ಪ್ರದೇಶದಲ್ಲಿ ಈ ನಿಷೇಧಗಳನ್ನು ಜ್ಯಾರಿ ಮಾಡುವುದಾಗಿ ಹೇಳಿದೆ.

ನಾಲ್ಕನೆಯದಾಗಿ, ಮದರಸಾಗಳನ್ನು (ಧಾರ್ಮಿಕ ಪಾಠಶಾಲೆಗಳನ್ನು) ಆಧುನೀಕರಿಸಲಾಗುತ್ತದೆ, ನಿಯಂತ್ರಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ. ಇವು ತಾಲೀಬಾನ್‌ನ ಸೃಷ್ಟಿಯಲ್ಲಿ ವಹಿಸಿದ ಪಾತ್ರದ ಹಿನ್ನೆಲೆಯಲ್ಲಿ ಈ ಪ್ರಕಟಣೆ ಮಹತ್ವಪೂರ್ಣ. ಈ ಶಿಕ್ಷಣ ಸಂಸ್ಥೆಗಳನ್ನು ಸರಕಾರದ ಹತೋಟಿಗೆ ತರುವ ಆಶಯ ಇಲ್ಲದಿದ್ದಲ್ಲಿ ಅವರು "ರಾಜಕೀಯ ಮತ್ತು ಸಂಕುಚಿತ ಪೂರ್ವಾಗ್ರಹಗಳನ್ನು" ಪೋಷಿಸಲು ಬಿಡುವುದಿಲ್ಲಎಂದು ಮುಷರ್ರಫ್ ಹೇಳಿದರು. ಈ ದಿಕ್ಕಿನಲ್ಲಿ ಒಂದು ಕ್ರಮವಾಗಿ ಮಾರ್ಚ್ 23ರೊಳಗೆ ಎಲ್ಲಾ ಮದರಸಾಗಳನ್ನು ರಿಜಿಸ್ಟರ್ ಮಾಡಲಾಗುವುದು ಹಾಗೂ ಸರಕಾರದ ಪರವಾನಿಗೆ ಇಲ್ಲದೆ ಹೊಸ ಮದರಸಾಗಳನ್ನು ತೆರೆಯಲು ಅವಕಾಶವಿಲ್ಲ. ಮಸೀದಿಗಳೂ ನಿಯಮಾವಳಿಗಳನ್ನು ಪಾಲಿಸಬೇಕಾಗುತ್ತದೆ. ಮಸೀದಿ ಆವರಣದಿಂದ ಯಾವುದೇ ಭಯೋತ್ಪಾದಕ ಚಟುವಟಿಕೆ ನಡೆದರೆ ಆ ಮಸೀದಿಯ ನಿರ್ವಹಣೆ ನಡೆಸುವವರು ಅದಕ್ಕೆ ಜವಾಬುದಾರರಾಗುತ್ತಾರೆ. ಈ ಉದ್ದೇಶಕ್ಕಾಗಿ ಒಂದು ಹೊಸ ಮದರಸಾ ಧೋರಣೆಯನ್ನು ರೂಪಿಸಲಾಗುವುದು ಎಂದ ಮುಷರ್ರಫ್ ಪಾಕಿಸ್ತಾನವನ್ನು ಒಂದು ಬಲಿಷ್ಠ, ಚೈತನ್ಯಶಾಲಿ, ಪ್ರಗತಿಪರ, ಪ್ರಜಾಸತ್ತಾತ್ಮಕ ಇಸ್ಲಾಮೀ ದೇಶವಾಗಿ ಮಾಡುವ ಮಾತನಾಡಿದರು.

ಕೊನೆಯದಾಗಿ, ಈಗಿನ ನಿರ್ದಿಷ್ಟ ಸಂದರ್ಭದಲ್ಲಿ ಅತ್ಯಂತ ಮಹತ್ವದ ಒಂದು ವಿಷಯವೆಂದರೆ ಕಾಶ್ಮೀರ ಪ್ರಶ್ನೆಯನ್ನು ಭಯೋತ್ಪಾದನೆಯ ಪ್ರಶ್ನೆಯಿಂದ ಪ್ರತ್ಯೇಕಿಸಿದ್ದು. ಕಾಶ್ಮೀರದ ಹೆಸರಿನಲ್ಲಿ ಯಾವುದೇ ಭಯೋತ್ಪಾದ ಚಟುವಟಿಕೆಗೆ, ಭಯೋತ್ಪಾದಕ ಚಟುವಟಿಕೆಗಳಿಗೆ ನಿಧಿ ಸಂಗ್ರಹಣೆ ಅವಕಾಶ ನೀಡುವುದಿಲ್ಲ ಎಂದು ಮುಷರ್ರಫ್ ಹೇಳಿದ್ದಾರೆ.

# ಘೋರ 'ಪೋಟೋ
# ಕ್ರೂರ 'ಕೋ



ಸೆಪ್ಟೆಂಬರ್ 11ರಂದು ಅಮೇರಿಕಾದ ಮೇಲೆ ಭಯೋತ್ಪಾದಕರ ದಾಳಿ.. ಭಯೋತ್ಪಾದನೆ ವಿರುದ್ಧ ಅಮೇರಿಕಾ ಸಮರ ಸಾರಿ ಅಫಘಾನಿಸ್ತಾನದ ಮೇಲೆ ಯುದ್ಧವನ್ನೆ ನಡೆಸಿ, ಇನ್ನೂ ಒಸಾಮಾನಿಗಾಗಿ ಶೋಧ ನಡೆಸಿ ಇದೆ. ಇದರ ಜೊತೆಯಲ್ಲೆ ಅಮೇರಿಕಾ ಭಯೋತ್ಪಾದನೆ ನಿಗ್ರಹ ಕಾಯ್ದೆಯನ್ನು ಒಕ್ಕೊರಲಿನಿಂದ ತನ್ನ ಸಂಸತ್ತಿನಲ್ಲಿ ಅಂಗೀಕರಿಸಿತು. ತದನಂತರ ಬಹುತೇಕ ಅಮೇರಿಕಾದ ಬಾಲಬಡುಕ ರಾಷ್ಟ್ರಗಳು, ಇಂತಹುದೇ ಕಾನೂನುಗಳನ್ನು ರೂಪಿಸಿ ಜಾರಿಗೆ ತರುತ್ತಿವೆ ಎಂಬ ಸುದ್ದಿ ಎಲ್ಲೆಡೆ ಇದೆ.

ಇತ್ತ ನಮ್ಮ ದೇಶದಲ್ಲಿ, ಭಯೋತ್ಪಾದನೆ ಕಳೆದೆರಡು ದಶಕಗಳಿಂದ, ತನ್ನ ಅಟ್ಟಹಾಸ ಮೆರೆಸಿದೆ, ಸಾವಿರಾರು ಮುಗ್ಧರು ಅದಕ್ಕೆ ಬಲಿಯಾಗಿದ್ದಾರೆ. ಭಯೋತ್ಪಾದನೆ ನಿಗ್ರಹದ ಹೆಸರಲ್ಲಿ ಬಂದ ಟಾಡಾ (ಭಯೋತ್ಪಾದಕ ಚಟುವಟಿಕೆಗಳು ಹಾಗು ವಿಚ್ಛಿದ್ರಕಾರಿ ಚಟುವಟಿಕೆಗಳ ನಿಗ್ರಹ ಕಾಯ್ದೆ) ಹತ್ತು ವರ್ಷದ ತನ್ನ ಜೀವಾವಧಿಯಲ್ಲಿ, ಭಯೋತ್ಪಾದಕರಿಗಿಂತ, ಅಮಾಯಕರ ಮೇಲೆ, ವಕ್ಕರಿಸಿಕೊಂಡಿರುವ ಉದಾಹರಣೆಗಳೆ ಹೆಚ್ಚು. 1994'ರ ವೇಳೆಗೆ ಟಾಡಾ ಅಡಿ ಬಂಧನಕ್ಕೊಳಗಾಗಿದ್ದ, 76,036 ಜನರಲ್ಲಿ, ಶೇ. 99 ರಷ್ಟು ಅಥವ 75,200 ಜನರ ಮೇಲಿನ ಮೊಕದ್ದಮೆಗಳು ಇನ್ನೂ ಕೋರ್ಟಿನ ವಿವಿಧ ಹಂತಗಳಲ್ಲಿವೆ ಅಥವ ಕೋರ್ಟ್‌ಗೆ ಇನ್ನೂ ಬಂದೆ ಇಲ್ಲ ಎಂಬ ಅಂಶ, ಟಾಡಾದ ಭೀಕರತೆಯ ಸೂಚಕವಾಗಿದೆ. ಕೇವಲ ಪಂಜಾಬ ರಾಜ್ಯ ಒಂದರಲ್ಲಿ ಮಾತ್ರ ಟಾಡಾ ದಡಿ ಬಂಧನಕ್ಕೊಳಗಾಗಿದ್ದ 15,000 ಜನರಲ್ಲಿ ಶಿಕ್ಷೆಗೆ ಒಳಪಟ್ಟಿರುವರ ಪ್ರಮಾಣ ಶೇ. 2 ರಷ್ಟು ಮಾತ್ರ. ಭಯೋತ್ಪಾದನೆಯು ಸೊಂಕರಿಯುದ ಗುಜರಾತ್‌ನಲ್ಲಿ ಟಾಟಾದಡಿ ಬಂಧನಕ್ಕೊಳಗಾದವರ ಸಂಖ್ಯೆ 18,000 ಜನ ಪಂಜಾಬ್-ಕಾಶ್ಮೀರಕ್ಕಿಂದ ಹೆಚ್ಚು. ಅದರ ದುರುಪಯೋಗ ಎಷ್ಟರ ಮಟ್ಟಿಗಿದೆ ಎಂಬುದಕ್ಕೆ, ಮೈಸೂರು ಜೈಲಿನಲ್ಲಿರುವ, ಮಲೆಮಹದೇಶ್ವರ ಬೆಟ್ಟದ ಸುತ್ತಲ ಸೋಲಿಗರೆ ಸಾಕ್ಷಿ. (ವೀರಪ್ಪನಿಗೆ ಸಹಾಯ ಮಾಡಿರುವವರು ಬೀಡಿ, ಊಟ, ತಿಂಡಿ ಒದಗಿಸಿದ ಆರೋಪದ ಮೇಲೆ ಟಾಡಾ ದಡಿ ಬಂದಿತರಾಗಿರುವ ಸುತ್ತಮುತ್ತಲ ಹಳ್ಳಿಗಳ ಅಮಾಯಕರು)

ಸುದಾರಿತ ಟಾಡಾ, ರೂಪದ ಭಯೋತ್ಪಾದನೆ ನಿಗ್ರಹ ಕಾಯ್ದೆ ಜಾರಿಗೆ ತಂದು, ಭಯೋತ್ಪಾದನೆಯ ಹುಟ್ಟಡಗಿಸಬೇಕೆಂಬ ಆಶಯದೊಂದಿಗೆ, ತರುತ್ತಿದ್ದೇವೆ ಎಂದು ವಾದಿಸುತ್ತಾ ಕೇಂದ್ರದ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಪೋಟೋ (ಭಯೋತ್ಪಾದನೆ ನಿಯಂತ್ರಣ ಸುಗ್ರೀವಾಜ್ಞೆ) ವನ್ನು ಹೊರಡಿಸಿತು. ಸಂಸತ್ತಿನ ಉಭಯ ಸದನಗಳು ಪ್ರಾರಂಭವಾಗುವ ಸುಮಾರು 4 ವಾರಗಳ ಮೊದಲು, ಈ ಸುಗ್ರಿವಾಜ್ಞೆಯನ್ನು ತರಾತುರಿಯಲ್ಲಿ ಹೊರಡಿಸಿತು. ರಾಷ್ಟ್ರದ ಪ್ರಮುಖ ವಿರೋಧ ಪಕ್ಷಗಳು, ಪ್ರಜಾಪ್ರಭುತ್ವ ಚಳುವಳಿಗಳು, ಸುಗ್ರಿವಾಜ್ಞೆಯ ಔಚಿತ್ಯ, ಅದರೊಳಗಿನ ಪ್ರಜಾಪ್ರಭುತ್ವ ವಿರೋಧಿ ಅಂಶಗಳನ್ನು ಸಾರಾಸಗಟಾಗಿ ವಿರೋಧಿಸಿದವು. ರಾಜ್ಯ ಸಭೆಯಲ್ಲಿ ಬಹುಮತ ಪಡೆಯಲು ಅಸಾಧ್ಯವೆಂಬ ಸತ್ಯವನ್ನರಿತ ಸರ್ಕಾರ ಜಂಟಿ ಅಧಿವೇಶನದ ಮೂಲಕ ಅಂಗೀಕಾರ ಪಡೆಯುವ ಮಾತುಗಳನ್ನು ತನ್ನ ಪ್ರಧಾನಿಯವರ ಬಾಯಿಂದಲೆ ಹೊರಗೆಡವಿಸಿತು. POTO ವಿರೋಧಿಸಿದವರು ಭಯೋತ್ಪಾದನೆಗೆ ಬೆಂಬಲ ನೀಡುವವರು, ಎಂದು ತನ್ನ ದಾಳಿಯನ್ನು ಹರಿಬಿಟ್ಟ ಸರ್ಕಾರದ ರುವಾರಿಗಳು, POTO ವಿರೋಧಿಸುವವರ ರಾಷ್ಟ್ರ ಪ್ರೇಮವನ್ನೇ ಪ್ರಶ್ನಿಸುವ ಆಕ್ರಮಣಶೀಲತೆಯನ್ನು ತೋರಿದರು. ಕೊನೆಗೂ ಸಂಸತಿನಲಿ ಮಂಡಿಸದೆ, [illegible] ಬದಲಾವಣೆ ತಂದು POTO-II ಅನ್ನು ಮತ್ತೆ ಸುಗ್ರೀವಾಜ್ಞೆಯಾಗಿ ಹೊರಡಿಸಿದೆ.

**POTO ಹೇಳುವುದೇನು?**

POTO ಭಯೋತ್ಪಾದಕ ಕೃತ್ಯವನ್ನು ಪರಿಭಾಷಿಸುತ್ತದೆ. ಭಯೋಧನೆಯನ್ನಲ್ಲ. ಭಯೋತ್ಪಾದಕ ಕೃತ್ಯದ ಪರಿಭಾಷೆ, ಜನ ಸಾಮಾನ್ಯರ ನ್ಯಾಯಯುತ ಬೇಡಿಕೆ ಆಧಾರಿತ ಹೋರಾಟಗಳನ್ನು ಚಳುವಳಿಗಳನ್ನು ಆ ಮೂಲಕ, ಅದರ ನೇತೃತ್ವದಲ್ಲಿರುವ ಸಂಘಟನೆಗಳನ್ನು ತನ್ನ ವ್ಯಾಪ್ತಿಗೆ ತರುವಷ್ಟು ವಿಶಾಲತೆಯನ್ನು ಒಳಗೊಂಡಿದೆ.

ಒಮ್ಮೆ ಒಂದು ಸಂಘಟನೆ ಭಯೋತ್ಪಾದಕ ಸಂಘಟನೆಯೆಂದು ಘೋಷಿಸಲ್ಪಟ್ಟಲ್ಲಿ, ಅದನ್ನು ಪ್ರಶ್ನಿಸುವ ಹಕ್ಕು ಸಂಘಟನೆಯವರಿಗೆ ಖಾತ್ರಿಯಿಲ್ಲ. ಮತ್ತೇ ಅವರು, ಸಂಬಂಧಿತ ಸರ್ಕಾರಕ್ಕೆ ಅರ್ಜಿ ಸಲ್ಲಿಸಬೇಕು. ಸರ್ಕಾರ ತಿರಸ್ಕರಿಸಿದಲ್ಲಿ, ಸರ್ಕಾರವೇ ರಚಿಸುವ ನ್ಯಾಯಮಂಡಳಿಯ ಮೊರೆ ಹೊಕ್ಕಬೇಕು. ನ್ಯಾಯಮಂಡಳಿಯಲ್ಲಿ ಸರ್ಕಾರ ನೇಮಿಸುವ ಇಬ್ಬರ ಜೊತೆಯಲ್ಲಿ ಮತ್ತೊಬ್ಬ ಹಾಲಿ ಅಥವ ಮಾಜಿ ಉಚ್ಚನ್ಯಾಯಾಲಯದ ನ್ಯಾಯಾಧೀಶರು, ಮುಖ್ಯಸರಾಗಿರುತ್ತಾರೆ. ನ್ಯಾಯಮಂಡಳಿಯ ತೀರ್ಮಾನ ಮತ್ತೆ ಬಹುತೇಖ ಸರ್ಕಾರದಿಂದ ನೇಮಿಸಲ್ಪಟ್ಟ ಆ ಇಬ್ಬರು ಸದಸ್ಯರ ಅಭಿಪ್ರಾಯದ ಮೇಲೆ ಅವಲಂಬಿತ ಹೇಗಿದ್ದರು ಬಹುಮತದ ತೀರ್ಮಾನವಲ್ಲವೇ! ಇದರರ್ಥ ಒಮ್ಮೆ ಸರ್ಕಾರದ ಕೆಂಗಣ್ಣ ಒಂದು ಸಂಘಟನೆಯ ಮೇಲೆ ಬಿತ್ತೆಂದರೆ ಮುಗಿಯಿತು, ಮತ್ತೆ ಸರ್ಕಾರ ಮನಸ್ಸು ಮಾಡುವವರೆಗೆ, ಅದು ಭಯೋತ್ಪಾದಕ ಸಂಘಟನೆಯೆ!

ಈ POTO ದಡಿ, ಬಂಧನಕ್ಕೊಳಗಾದ ವ್ಯಕ್ತಿಗೆ ಜಾಮೀನು ಮರೀಚಿಕೆಯೆ ಸರಿ. ಪಬ್ಲಿಕ್ ಪ್ರಾಸಿಕ್ಯೂಟರ್ ವಿರೋಧಿಸದಿದ್ದರೆ, ನ್ಯಾಯಾಲಯಕ್ಕೆ ಆರೋಪಿ, ಭಯೋತ್ಪಾದಕ ಕೃತ್ಯದಲ್ಲಿ ಭಾಗಿಯಾಗಿಲ್ಲವೆಂದು ತೃಪ್ತಿದಾಯಕವಾಗಿ ಮನವರಿಕೆಯಾದಲ್ಲಿ ಮಾತ್ರ ಜಾಮೀನು! ಅದು ಒಂದು ವರ್ಷದ ನಂತರ! ಅಂದರೆ, ಒಂದು ವರ್ಷದವರೆಗೆ, ಅವನು ಅಪರಾಧಿ ಅಲ್ಲದಿದ್ದರೂ, ಜೈಲಿನಲ್ಲೊ, ಪೊಲಿಸ್ ಠಾಣೆಯಲ್ಲೊ, ಪೊಲಿಸರ ಕೃಪೆಯಿಂದಾಗಿ ಬದುಕುಳಿಯಬೇಕು. ಆರೋಪಿಗಳ್ಯಾರು? ಭಯೋತ್ಪಾದಕ ಸಂಘಟನೆಯೆಂದು ಘೋಷಿಸಲ್ಪಟ್ಟ ಸಂಘಟನೆಯ ಸಾಮಾನ್ಯ ಸದಸ್ಯರು, ಅವರ ಸಭೆಗಳಲ್ಲಿ ಎಂದೋ ಯಾವಾಗಲೋ ಭಾಗವಹಿಸಿರುವವರು, ಆ ಸಂಘಟನೆಯ ಸಭೆಗಳಿಗೆ ಅನುವುಗೊಳಿಸಿದವರು, ಹಣ ನೀಡಿದವರು- ನೀಡಿಸಿದವರು ಅಂತಹ ಆರೋಪಿಗಳ (ಗಂಡ- ಹೆಂಡತಿಯನ್ನು ಹೊರತುಪಡಿಸಿ) ಮನೆಯವರು, ತಂದೆ-ತಾಯಿ ಅಣ್ಣ-ತಮ್ಮ ಅಕ್ಕ-ತಂಗಿ, ಎಲ್ಲಾ ಆರೋಪಿಗೆ ಆಶ್ರಯ ನೀಡಿದವರೆಂಬ ಹೆಸರಿನಲ್ಲಿ ಆರೋಪಿಗಳೆ, ಅವರಿಗೂ ಶಿಕ್ಷೆ- ದಂಡ, ಮಾತ್ರವಲ್ಲ ಅವರಿಗೂ ಜಾಮೀನು ಮೇಲೆ ಹೇಳಿದಂತೆಯೆ ಸರಿ.

ಇಷ್ಟೆ ಅಲ್ಲಾ, ಭಯೋತ್ಪಾದಕ ಸಂಘಟನೆ, ಚಟುವಟಿಕೆ ಇತ್ಯಾದಿ ಬಗ್ಗೆ ಮಾಹಿತಿಯುಳ್ಳ, [illegible] ಕರೆದಾಗ ಬರಬೇಕು, ಮಾಹಿತಿ ನೀಡಬೇಕು, ಇಲ್ಲವಾದರೆ 3 ವರ್ಷ ಜೈಲು - ದಂಡ ಸಹಿತ. ಹೇಗಿದೆ ನೋಡಿ ಪರಿ! ಪೋಲಿಸರಿಗೆ POTO ನೀಡುವ ಅಧಿಕಾರ, ನಮ್ಮ ಕೆಲಸ ನೀವು ಮಾಡಿ ಇಲ್ಲದಿದ್ದರೆ POTO ದಡಿ ಭಯೋತ್ಪಾದಕರಾಗಿ ಜೈಲಿಗೆ ನಡೀರಿ, ಗೊತ್ತಲ್ಲ ಒಂದು ವರ್ಷ ಜಾಮೀನಿಲ್ಲ" ಎಂದು ಕೆಲವು ಶಾಸನಾತ್ಮಕ ಭಯೋತ್ಪಾದಕರು ಹಾಗೂ ಪೊಲಿಸರು ಬೆದರಿಕೆಯೊಡ್ಡಲು ಎಂತಹ ಅಸ್ತ್ರ ಪೋಟೋ ಕಾನೂನು!

ಆರೋಪಿಗಳ ಆಸ್ತಿ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬಹುದು. ನೆಪಕ್ಕೆ ಕೆಲವು ರಕ್ಷಣೆಗಳನ್ನು ಜನಸಾಮಾನ್ಯರಿಗೆ ಮಾಧ್ಯಮದ ಪತ್ರಿಕೆಯ ಗೆಳೆಯರಿಗೆ ನೀಡಲಾಗಿದೆ, ಎಂಬ ಅಂಶವನ್ನು POTO IIರ ಮೂಲಕ ಕೇಂದ್ರ ಸರ್ಕಾರ ಹೇಳುತ್ತಿದೆ.

ಡಿಸೆಂಬರ್ 13'ರ "ಸಂಸತ್ತಿನ ಮೇಲೆ ಭಯೋತ್ಪಾದಕ ದಾಳಿಯ" ನಂತರವಂತು, ಭಾವನಾತ್ಮಕವಾಗಿ POTO ಜಾರಿಗೆ ತನ್ನಿ" ಎಂಬ ವಾದವನ್ನು ಗಟ್ಟಿಗೊಳಿಸಲಾಗುತ್ತಿದೆ. ಆದರೆ POTO ಜಾರಿಯಲ್ಲಿದ್ದಾಗಲೇ ಸಂಸತ್ ಭವನದ ಮೇಲೆ ದಾಳಿ ನಡೆದಿದೆ, ಎಂಬ ಅಂಶವನ್ನು ಮರೆಮಾಚಲಾದೀತ?

## ನುಸುಳಿ ಬರುತ್ತಿರುವ ತುರ್ತುಪರಿಸ್ಥಿತಿ

ಜಿ.ಎನ್.ನಾಗರಾಜ್

ಭಾರತ ಸ್ವಾತಂತ್ರ್ಯ ಬಂದು 25-26 ವರ್ಷಗಳಾಗಿದ್ದವು. ಬಡತನ, ನಿರುದ್ಯೋಗಗಳ ಬೇಗೆ, ಬೆಲೆಯೇರಿಕೆಯ ಉರಿ ಮುಗಿಲು ಮುಟ್ಟುತ್ತಿತ್ತು. ಆಗ ಭಾರತದ ಹಲವು ಕಡೆ ಜನರ ಚಳುವಳಿ ಭುಗಿಲೆದ್ದಿತು. ಈ ಚಳುವಳಿಗಳು ಅತ್ಯಂತ ಹೆಚ್ಚು ಬಹುಮತ ಹೊಂದಿದ್ದ ಇಂದಿರಾಗಾಂಧಿಯವರ ಸರ್ಕಾರವನ್ನೇ ಗರೀಬಿ ಹಟಾವೋ ಅಲುಗಾಡಿಸಲಾರಂಬಿಸಿದವು.

ಆಗ ಆಳುವ ಪಕ್ಷಕ್ಕೆ, ಆಳುವ ವರ್ಗಗಳಿಗೆ ಅಧಿಕಾರವುಳಿಸಿಕೊಳ್ಳಲು ತೋಚಿದ್ದು ಒಂದೇ ಮಾರ್ಗ. ಅದರ ಫಲವೇ ದಿಢೀರನೆ ಬಂದೆರಗಿದ ತುರ್ತುಪರಿಸ್ಥಿತಿ. ರಾತ್ರೋರಾತ್ರಿ ರಾಜಕೀಯ ನಾಯಕರೆಲ್ಲರ ಬಂಧನ. ಮರುದಿನದ ಪತ್ರಿಕೆಗಳಲ್ಲಿ ಪುಟಗಟ್ಟಲೇ ಖಾಲಿಜಾಗ, ಪ್ರಶಾರ್ಥಕ ಚಿಹ್ನೆಗಳು. ಇಡೀ ದೇಶದಲ್ಲಿ ಸ್ಮಶಾನ ಮೌನ. ಹೀಗೆ ಸರ್ಕಾರ ಒಂದೆರೆಡು ವರ್ಷ ತುಟ್ಟಿಭತ್ಯೆ, ಬೋನಸ್ ಮತ್ತು ಅವುಗಳಿಗೆ ಚಳುವಳಿ ಮಾಡುವುದರಿಂದ ಹಿಡಿದು ಎಲ್ಲಾ ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘಟನಾ ಸ್ವಾತಂತ್ರ್ಯಗಳನ್ನು ಕಿತ್ತುಕೊಳ್ಳಲಾಯಿತು.

ಇಂದು ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ವಿಶ್ವದ ದಬ್ಬಾಳಿಕೆಯಡಿ ಕೋಟಿಗಟ್ಟಲೆ ಜನರ ನೋವು, ಸಂಕಟಗಳು ಬಾಯಿ ಬಿಡುತ್ತಿವೆ. ಈ ವಿಶ್ವಬಂಡವಾಳಶಾಹಿಗಳ ಮೇಳ ವಿಶ್ವದಲ್ಲಿ ಎಲ್ಲಿ, ಯಾವುದೇ ರೂಪದಲ್ಲಿ ಸೇರಿದರೂ ಸಭೆ ನಡೆಸಲಾಗದ ಸ್ಥಿತಿ ಬಂದೊದಗಿದೆ. ಈ ಸ್ಥಿತಿ ಕೇವಲ ಆರಂಭ ಮಾತ್ರ. ಮುಂದೆ ವಿಶ್ವದಲ್ಲಿ ಪುಟಿದೇಳಲಿರುವ ಮಹಾಸ್ಫೋಟಗಳ ಮುನ್ಸೂಚನೆ ಎಂದು ಈ ಸಾಮ್ರಾಜ್ಯಶಾಹಿಗಳಿಗೆ ಅರಿವಾಗಿದೆ. ಇದನ್ನು ದಮನ ಮಾಡುವುದು ಹೇಗೆ?

'ಅರಸುತನದ ನೂರಾರು ಕೈಗಳೋಡಿದವು ಮಿಂಚಿನಂತೆ' ಜಗತ್ತಿನ ಹಲವಾರು ದೇಶಗಳಲ್ಲಿ ಕಾನೂನುಗಳು ರಚನೆಯಾದವು. ಭಾರತ ಸರ್ಕಾರವೂ ಈ ಸರಣಿಗೆ ಸೇರಿತು. ಗೃಹಮಂತ್ರಿ ಅರ್ಥಾತ್ ಪೋಲಿಸು ಮಂತ್ರಿ ಅಡ್ವಾಣಿಯವರ ನೇತೃತ್ವದಲ್ಲಿ ಭಾರತದಲ್ಲಿ ಸಂಘಟಿತ ಅಪರಾಧಗಳನ್ನು ತಡೆಯುವ ಕಾನೂನುಗಳನ್ನು ರಚಿಸಲು ಹಲವು ಸಭೆಗಳು ನಡೆದವು. ಎಲ್ಲ ರಾಜ್ಯಗಳ ಪೋಲೀಸು ಇಲಾಖೆಯ ಅಧಿಕಾರಿಗಳು ಮಂತ್ರಾಲೋಚನೆ ನಡೆಸಿದರು. ಅನೇಕ ರಾಜ್ಯಗಳಲ್ಲಿ ಕಾನೂನುಗಳು ರಚನೆಯಾಗಿ ಅಂಗೀಕಾರದ ಹಾದಿಯನ್ನು ಕಾಯುತ್ತಾ ಕುಳಿತವು. ಮಹಾರಾಷ್ಟ್ರ, ಕರ್ನಾಟಕಗಳಲ್ಲಿ ಅಂಗೀಕಾರವಾಗಿಯೇ ಬಿಟ್ಟಿತು. ಅಖಿಲ ಭಾರತ ಮಟ್ಟದ ಕಾನೂನೊಂದು ಸಿದ್ಧವಾಯಿತು. ಅದನ್ನು ಸಂಸತ್ತು ಅಂಗೀಕರಿಸುವಂತೆ ಮಾಡುವುದು ಹೇಗೆ? ಎಂದು ಚಿಂತನ-ಮಂಥನ ಆರಂಭವಾಯಿತು.

ಸೆ. 11 ರ ಭಯೋತ್ಪಾದನೆ ಜಗತ್ತನ್ನು ತಲ್ಲಣಿಸಿತು. ಅದೊಂದು ನೆಪ ಸಾಕಾಯಿತು. ಈ ಕಾನೂನುಗಳ ಘೋರ ಸರ್ಪಗಳನ್ನು ಅವುಗಳನ್ನಿಟ್ಟ ಬುಟ್ಟಿಯಿಂದ ಹೊರತೆಗೆಯಲಾಯಿತು. ಸರಸರನೆ ಕಾನೂನುಗಳು, ಸುಗ್ರೀವಾಜ್ಞೆಗಳಾದವು. ಈಗ ಹೆಡೆಯಾವಾಗ ಎತ್ತುವುದು? ಯಾರನ್ನು ಎಲ್ಲಿ ನುಂಗುವುದು, ಮತ್ಯಾರನ್ನು ನುಂಗುವುದು ಎಂದು ಕಾಯುತ್ತಾ ಕುಳಿತಿವೆ.

ಸಂವಿಧಾನ ಪರಾಮರ್ಶೆಯ ಮೂಲಕ, ಅಮೆರಿಕದ ಮಿಲಿಟರಿಯೊಡನೆ ಗಾಢ ಸಂಬಂಧದ ಮೂಲಕ, ಭಾರತದಲ್ಲಿ ಅಮೆರಿಕದ ಪೋಲಿಸ್ ಎಫ್‌ಬಿಐ ಕಛೇರಿ ಆರಂಭ ಮಾಡುವ ಮೂಲಕ, ಭಾರತದ ಪೋಲೀಸರಿಗೆ ಇಸ್ರೇಲ್, ಅಮೆರಿಕದಿಂದ ತರಬೇತಿ ಪಡೆಯುವ ಮೂಲಕ, ಪೋಲೀಸ್ ಆಧುನೀಕರಣಕ್ಕೆ ವಿಶ್ವ ಬ್ಯಾಂಕ್ ಸಾಲದ ಮೂಲಕ, ವಿದ್ಯಾರ್ಥಿ ಸಂಘಟನೆ, ವಿಶ್ವವಿದ್ಯಾಲಯಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಪ್ರಜಾಸತ್ತೆಯನ್ನು ತುಳಿಯುವ ಮೂಲಕ ಅಂದು ಒಮ್ಮೆಲೇಎರಗಿದ್ದ ತುರ್ತುಪರಿಸ್ಥಿತಿ ಇಂದು ಹೆಜ್ಜೆ ಹೆಜ್ಜೆಯಾಗಿ ನಮ್ಮನ್ನು ಆವರಿಸುತ್ತಿದೆ.


'ಅರಸುತನದ ನೂರಾರು ಕೈಗಳೋಡಿದವು
ಮಿಂಚಿನಂತೆ
ಘೋರ ಶಾಸನದ ಜಾಲ ಮುಸಗಿತೋ
ಇಂದ್ರಜಾಲದಂತೆ
ನೆಲವೇ ಬಾಯಿಬಿಟ್ಟಂತೆ ತೆರೆದ ಸೆರೆಮನೆಯ
ನರಕಲೋಕ
ನುಂಗಿತೋ ತುತ್ತಾಗಿ ನಮ್ಮ ಕಣ್ಣಾಗಿ ನಿಂತ ಜನವ"

ಘೋರ ಶಾಸನಗಳು ಮುಸಗಿ ಕಾದು ನಿಂತಿವೆ. ಅವು ನಮ್ಮನ್ನು ಹಿಡಿದು ನುಂಗುವ ಮೊದಲೇ ನಾವು ಅವುಗಳ ಕತ್ತು ಹಿಚುಕಬೇಕಾಗಿದೆ.

"ಬಂತು ಸೋಲುಬಹುದೆಂದು ಸೋಲು ಎದೆ
ಗೆಟ್ಟುವುದಿಲ್ಲ ಜನತೆ
ಅಧಿಕಾರ ಬಲದ ಮದಗಜದ ತುಳಿತಕೂ
ಎದೆಯನೊಡ್ಡಿ ನಗುತೆ"

ಈ ಘೋರ ಕಾನೂನುಗಳ ಇಂದ್ರಜಾಲವನ್ನು ನಾಡಿನ ಪ್ರಜಾಸತ್ತಾತ್ಮಕ ಜನ ಚಳುವಳಿ ಭೇದಿಸಬೇಕು.

# ೆ ಮರಿ




ಕೆ.ಎನ್.ಉಮೇಶ್

**ಇರುವ ಕಾನೂನುಗಳು, ಕಾಯ್ದೆಗಳು ಸಾಲದೇ?**

POTOದ ವಿನಹ ಅನ್ಯ ಮಾರ್ಗವಿಲ್ಲ ಎಂದು ಕೇಂದ್ರ ಸರ್ಕಾರ, ಹಾಗು ಅದರ ಆಧಾರಗಳಾದ ಸಂಘ ಪರಿವಾರದ, ಚೆಡ್ಡಿದಾರಿಗಳು ಬೊಬ್ಬೆ ಹೊಡೆಯುತ್ತಿರುವಾಗಲೇ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (NHRC) POTOದ ಅಗತ್ಯವಿಲ್ಲ ಎಂದು ಹೇಳಿದೆ. ಆಯೋಗದ ಅಧ್ಯಕ್ಷರು, ಸರ್ವೋಚ್ಚನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಾಧೀಶರು ಆದ ನ್ಯಾಯಮೂರ್ತಿ ಜೆ.ಎಸ್. ವರ್ಮಾರವರು, ಇರುವ ಕಾನೂನುಗಳನ್ನು ಸಮರ್ಪಕ ಜಾರಿಯಿಂದಲೆ, ಭಯೋತ್ಪಾದನೆ ನಿಗ್ರಹಿಸಬಹುದು ಎಂದು ಹೇಳಿದ್ದಾರೆ. TADAದ ಕರಾಳ ಅನುಭವ, POTO ದಮನಿಸಬಹುದಾದ ಮಾನವ ಹಕ್ಕುಗಳ ಕುರಿತು ಎಚ್ಚರಿಸುತ್ತದೆ ಎಂದಿದ್ದಾರೆ. ಮತ್ತೊಬ್ಬ ಆಯೋಗದ ಸದಸ್ಯರು, ನಿವೃತ್ತ ನ್ಯಾಯಮೂರ್ತಿಗಳು ಶೇ. 100 ರಷ್ಟು ದುರುಪಯೋಗ ಖಾತ್ರಿ ಎಂಬ ಟ್ಯಾಗ್‌ನೊಂದಿಗೆ POTOವನ್ನು ಜಾರಿಗೊಳಿಸಬೇಕಾಗುತ್ತದೆಂದು ಗಂಭೀರವಾಗಿ ವ್ಯಾಖ್ಯಾನಿಸಿದ್ದಾರೆ.

ಸರ್ವೋಚ್ಚ ನ್ಯಾಯಾಲಯದ ಹಿರಿಯ ವಕೀಲರಾದ ಶ್ರೀ ರಾಜೀವ್ ಧವನ್, ಈಗಾಗಲೇ ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ" ಹಾಗು ಭಾರತ ದಂಡ ಸಂಹಿತೆ (IPC) ಯ ಕಾನೂನುಗಳೆ, ಸಮರ್ಪಕವಾಗಿ ಜಾರಿಗೆ ತಂದಲ್ಲಿ ಭಯೋತ್ಪಾದನೆ ನಿಗ್ರಹಿಸಬಹುದು ಎನ್ನುತ್ತಾರೆ. ಐ.ಪಿ.ಸಿ.ಯಲ್ಲಿ ಕಲಂ 124 ಬಿ ಸೇರಿಸಿ ಅದರಲ್ಲಿ ಭಯೋತ್ಪಾದನೆಯನ್ನು ಎಂದರೇನೆಂದು ಖಚಿತಾಗಿ ವಿವರಿಸಿ ಅದಕ್ಕೆ ಶಿಕ್ಷೆ ವಿಧಿಸುವ ಕಲಂಗಳನ್ನು ಸೇರಿಸಿದರೆ, ಇರುವ ಕಾನೂನುಗಳು ಕಾಯ್ದೆಗಳೆ ಸಾಕು ಎನ್ನುತ್ತಾರೆ.

POTO ವನ್ನು ವಿರೋಧಿಸುವಲ್ಲಿ ವಿರೋಧ ಪಕ್ಷಗಳೆಲ್ಲಾ ಒಂದಾಗಿ ನಿಂತವು. ಅಂತಹ ವಿರೋಧವನ್ನು ವ್ಯಕ್ತಪಡಿಸಿದ ಕಾಂಗ್ರೆಸ್‌ನ ಹಿರಿಯ ಮುಖಂಡ ಪ್ರಣಬ್ ಮುಖರ್ಜಿ "TADA ವನ್ನು ವಿರೋಧ ಪಕ್ಷಗಳ ಉಗ್ರ ವಿರೋಧದ ನಡುವೆಯೆ ಜಾರಿಗೆ ತಂದ ನಮಗೆ (ಕಾಂಗ್ರೆಸ್‌ನವರಿಗೆ), TADA ದಿಂದ ಕೆಟ್ಟ ಅನುಭವವಾಗಿದೆ". ಈ ದೇಶವನ್ನು ಹೆಚ್ಚು ವರ್ಷಗಳು ಆಳಿದ ನಮ್ಮ ಅನುಭವದಿಂದಾದರೂ ಪ್ರಸಕ್ತ ಬಿಜೆಪಿ ನೇತೃತ್ವದ NDA ಸರ್ಕಾರ ಪಾಠ ಕಲಿಯಬೇಕು" ಎಂದಿದ್ದಾರೆ. ಆದರೆ ಅವರದೇ ಪಕ್ಷ ಆಡಳಿತದಲ್ಲಿರುವ ಕರ್ನಾಟಕದಲ್ಲಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮತ್ತು ಅವರ ಮಂತ್ರಿ ಮಂಡಳ, ಒಂದೆಡೆ ಕೇಂದ್ರದ POTO ವನ್ನು ವಿರೋಧಿಸುವಾಗಲೇ, POTO ಜಾರಿಗೆ ಕ್ರಮವಹಿಸುತ್ತಿದೆ. ತಯಾರಿ ನಡೆಸಿದೆ, ಮತ್ತೊಂದೆಡೆ ಅಷ್ಟೆ ಭೀಕರವಾದ KOCA-ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ಅಧಿನಿಯಮ 2000, ( THE KARNATAKA CENTRAL OF ORGANIZED CRIME ACT-2000 ನ್ನು 2002ರ ಕರ್ನಾಟಕದ ಪ್ರಥಮ ಅಧಿನಿಯಮವಾಗಿ 2002ರ ಜನವರಿ 2 ರಿಂದ ಜಾರಿಗೆ ತಂದಿದೆ.

**KOCA ಕೋಕಾ ಹೇಳುವುದೇನು?**

ರಾಜ್ಯದಲ್ಲಿ ಹೆಚ್ಚುತ್ತಿರುವ ಅಪರಾಧಗಳು, ಸುಲಿಗೆ, ದರೋಡೆ, ಕೊಲೆ, ಸುಲಿಗೆಯಂತಹ ಪಾತಕಿ ಕೃತ್ಯಗಳನ್ನು ಸದೆಬಡಿಯಬೇಕು, ಕಾರಣೀಭೂತವಾಗಿರುವ ವ್ಯವಸ್ಥಿತ- ಸಂಘಟಿತ ಅಪರಾಧಗಳನ್ನು ನಿಯಂತ್ರಿಸುವ ಉದ್ದೇಶದೊಂದಿಗೆ ಕೋಕಾ ರೂಪಿಸಲಾಗಿದೆ ಎಂಬುದು ಸರ್ಕಾರದ ವಾದ.

ಮೇಲ್ನೋಟಕ್ಕೆ ಇದು ಸರಿಯಲ್ಲವೇ? ಏಕೆ ವಿರೋಧ ಎಂಬ ಅಭಿಪ್ರಾಯ ಸಾಮಾನ್ಯವಾಗಿ ಜನ ಸಾಮಾನ್ಯರು ಅಭಿಮತ ಪಡುವುದು ಸಹಜವೇ. ಆದರೆ ಇದ್ದಕ್ಕಿದ್ದ ಹಾಗೆ 51 ವರ್ಷದ ನಂತರ ಎಲ್ಲಿಂದ, ಏಕೆ? ಹೇಗೆ? ಈ ವ್ಯವಸ್ಥಿತ ಅಪರಾಧದ ಕಲ್ಪನೆ ಮೂಡಿತು ಎಂಬುದು ಸಹಾ ಅಷ್ಟೆ ಸಹಜ ಪ್ರಶ್ನೆ. ಜನಸಾಮಾನ್ಯರ ಸಹಜ ಅಭಿಪ್ರಾಯ ಅಂತೆಯೆ ಅವರ ಸಹಜ ಪ್ರಶ್ನೆಗಳಿಗೆ ಉತ್ತರ ಬೇಕಾದಲ್ಲಿ ಕೋಕಾದ ಒಟ್ಟಾರೆ ತಿರುಳನ್ನು

THE KARNATAKA
CONTROL OF
ORGANIZED
CRIME ACT, 2000
(KARNATAKA ACT No. 1 OF 2002)

2002

SUN PUBLICATIONS
BANGALORE - 560 040

ಅರಿಯಬೇಕು.

**30 ಕಲಂಗಳ ಪುಟ್ಟ ಕಾಯ್ದೆ ಕೋಕಾ;** ಕೇವಲ 30 ಕಲಂಗಳನ್ನು ಉಳ್ಳ ಕೋಕಾ, ವ್ಯವಸ್ಥಿತ ಅಪರಾಧ, ವ್ಯವಸ್ಥಿತ ಅಪರಾಧಿಗಳ ಕೂಟ, ಮುಂದುವರಿಯುತ್ತಿರುವ ಕಾನೂನು ಬಾಹಿರ ಚಟುವಟಿಕೆ, ದುಷ್ಪ್ರೇರಿಸು, ಎಂಬಿತ್ಯಾದಿ ಪರಿಕಲ್ಪನೆಗಳಿಗೆ ವಿವರಣೆ ನೀಡುತ್ತಾ ಅವುಗಳ ನಿಯಂತ್ರಣಕ್ಕೆ ವಿಶೇಷ ನ್ಯಾಯಾಲಯ ರಚನೆ, ಅದರ ಅಧಿಕಾರ, ಈ ಅಪರಾಧಗಳಿಗೆ ಶಿಕ್ಷೆ ಇತ್ಯಾದಿ ಮಾತುಗಳನ್ನು ಕಾನೂನನ್ನಾಗಿಸಿದೆ.

**ಒಡನಾಟ-ಸಂಪರ್ಕವೇ ಅಪರಾಧ.**

ಕೋಕಾ ತನ್ನ ಪರಭಾಷೆಗಳ ಕಲಂ 2 ರಲ್ಲಿ ವ್ಯವಸ್ಥಿತ ಅಪರಾಧಿಗಳ ಕೂಟಕ್ಕೆ ಯಾರಾದರೂ ನೆರವು ನೀಡುತ್ತಿದ್ದಾರೆ, ಎಂಬ ತಿಳುವಳಿಕೆ ಅಥವ ಭಾವಿಸಲು ಸಾಧ್ಯ ಇದ್ದು, ಅಂತಹ ವ್ಯಕ್ತಿಗಳ ಜೊತೆ ಸಂಪರ್ಕ ಅಥವಾ ಒಡನಾಟ ಹೊಂದಿರುವುದೇ ದುಷ್ಪ್ರೇರಿಸುವ ಅಪರಾಧವಾಗುತ್ತದೆ.

ಹಾಗು ಯಾವುದೇ ಕಾನೂನು ಬದ್ಧ ಅಧಿಕಾರವಿಲ್ಲದೆ ವ್ಯವಸ್ಥಿತ ಅಪರಾಧಿಗಳ ಕೂಟಕ್ಕೆ ಮಾಹಿತಿಯನ್ನು ನೀಡುವುದಿರಲಿ, ಪ್ರಕಟಿಸುವುದು ಮತ್ತು ಅಂತಹ ಕೂಟದಿಂದ ಪಡೆದ ಮಾಹಿತಿಯನ್ನು, ದಾಖಲೆ, ಅಥವ ವಿಷಯವನ್ನು ನೀಡುವುದು ಪ್ರಕಟಿಸುವುದು ಅಥವ ಹಂಚುವುದು ಸಹಾ ದುಷ್ಪ್ರೇರಿಸುವ ಅಪರಾಧವಾಗುತ್ತದೆ.

ಅಂತೆಯೆ ಅಂತಹ ಕೂಟಕ್ಕೆ ಆರ್ಥಿಕವಾಗಿಯಾಗಲಿ ಅಥವಾ ಇತರ ರೀತಿಯಲ್ಲಿಯಾಗಲಿ ಯಾವುದೇ ಸಹಾಯ ನೀಡುವುದು ಸಹಾ ದುಷ್ಪ್ರೇರಿಸುವ ಅಪರಾಧ.

ಸಹಜವಾಗಿ ನಿರ್ದಿಷ್ಟವಾದ ಅಪರಾಧ ಎಸಗುವಂತೆ, ಪ್ರೇರೇಪಿಸುವುದು, ಉತ್ತೇಜಿಸುವುದು, ಅದಕ್ಕೆ ಸಹಕಾರ ನೀಡುವುದನ್ನು ಭಾರತ ದಂಡ ಸಂಹಿತೆ (ಐಪಿಸಿ) ದುಷ್ಪ್ರೇರಣೆ ಎಂಬ ಅಪರಾಧವೆಂದು ಪರಿಭಾಷಿಸಿದೆ. ಆದರೆ ಅದಕ್ಕೆ ಭಿನ್ನವಾಗಿ, ವ್ಯವಸ್ಥಿತ ಅಪರಾಧವೆಸಗುವ ಕೂಟದ ಯಾವುದೇ ಸದಸ್ಯರೊಂದಿಗೆ, ಕೇವಲ ಸಂಪರ್ಕ ಒಡನಾಟವೇ ಕೋಕಾ ಪ್ರಕಾರ ದುಷ್ಪ್ರೇರಣೆಯ ಅಪರಾಧವೆಂದರೆ ಗಂಡನ ಜೊತೆ ಅವನೆಂತವನಾದರೂ ಹೆಂಡತಿ ಬಾಳಲೇ ಬೇಕಲ್ಲವೇ. ಆ ಸಂಪರ್ಕ, ಒಡನಾಟ, ಅಂತೆಯೆ ಹೆಂಡತಿಯ ಜೊತೆ ಗಂಡನ, ಮಕ್ಕಳ ಜೊತೆ ತಂದೆ ತಾಯಿ ಅಣ್ಣ-ತಮ್ಮ ಅಕ್ಕ-ತಂಗಿ, ಮನೆಯವರು, ಕುಟುಂಬದವರು, ಅಕ್ಕಪಕ್ಕ, ನೆರೆ-ಹೊರೆಯ ಜನರ ಸಂಪರ್ಕ ಒಡನಾಟ ಎಲ್ಲವು ದುಷ್ಪ್ರೇರಿಸುವ ಅಪರಾಧವಾದೀತು! ಎಂತಹ ಭಯಾನಕ ದುಷ್ಪ್ರೇರಣೆಯ ಪರಿಕಲ್ಪನೆ ಈ ಕೋಕಾದಲ್ಲಿರುವುದು!.

ಅಷ್ಟಕ್ಕೆ ನಿಲ್ಲದೆ, ವ್ಯವಸ್ಥಿತ ಅಪರಾಧಿಗಳ ಕೂಟಕ್ಕೆ ಮಾಹಿತಿ ನೀಡುವ, ಮಾಹಿತಿ ರವಾನಿಸುವ ಕ್ರಮಗಳನ್ನು ಮಾತ್ರ ಅಪರಾಧವೆಂದು ಭಾವಿಸದೆ, ಪ್ರಕಟಿಸುವ ಹಂಚುವ ಕ್ರಮಗಳನ್ನು ಸಹಾ 'ದುಷ್ಪ್ರೇರಿಸು' ಎಂಬ ಅಪರಾಧದಡಿ ಪರಿಭಾಷಿಸಲಾಗಿದೆ. ಯಾವುದಾದರು ಅಪರಾದವೆಸಗುವ ಮಂದಿ, ಪ್ರಕಟಿಸಿ, ಹಂಚಿ, ಪ್ರಚಾರ ಪಡಿಸಿ, ಅಪರಾಧವೆಸಗುತ್ತಾರೆಯೇ? ಕನ್ನ ಹಾಕುವ ಮುನ್ನ, ಕನ್ನ ಹಾಕುವ ಕುರಿತು ಡಂಗೂರ ಸಾರಿ ಕನ್ನ ಹಾಕುತ್ತಾರೆಯೆ ಹಾಗೆಂದೇನಾದರೂ, ಭಾವಿಸಿ ಇದನ್ನು ರೂಪಿಸಿದ್ದರೆ ಇವರಿಗಿಂತ ಮುಗ್ದರು ಬೇರ್‍ಯಾರು ಇರಲಾರರು! ಆದರೆ, ಆ ಉದ್ದೇಶದಿಂದಲ್ಲ ಈ ಪರಿಬಾಷೆ ಮೂಡಿರುವುದು ಬದಲಾಗಿ, ಯಾವುದಾದರು ಚಳುವಳಿ, ಹೋರಾಟ, ಪ್ರತಿಭಟನೆಗೆ ಕರಪತ್ರ ಹಾಕುವುದಿಲ್ಲವೇ? ಹಂಚುವುದಿಲ್ಲವೇ? ಜನಸಾಮಾನ್ಯರು ಭಾಗವಹಿಸಲು ಕರೆ ಕೊಡುವುದಿಲ್ಲವೇ? ಇವುಗಳು ಈ ಕಲಂ 2 (I) (A) ನ ಒಳ ಉದ್ದೇಶ ಅಂತೆಯೇ ಮೇಲಿನ ಸಂಪರ್ಕ ಒಡನಾಟ, ಒಂದು ಸಂಘಟನೆಯ ಸದಸ್ಯರಲ್ಲದೆ, ಹೋರಾಟಗಾರರ ಜೊತೆ ಸಂಪರ್ಕ, ಒಡನಾಟವಷ್ಟೆ- 'ದುಷ್ಪ್ರೇರಿಸುವ' ಅಪರಾಧವಾಗುತ್ತದೆ. ಇದರ ಜೊತೆಯಲ್ಲೆ ಚಳುವಳಿಗಳ ಪತ್ರಿಕೆಗಳು, ಚಳುವಳಿ ಸಮಸ್ಯೆ ಹೋರಾಟ ಕುರಿತು ವರದಿ ಲೇಖನಗಳನ್ನು ಪ್ರಕಟಿಸುವುದಿಲ್ಲವೇ? ಅಂತಹ ಪತ್ರಿಕೆಗಳ ಹಂಚಿಕೆ ಸಹಾ ದುಷ್ಪ್ರೇರಕರಾಗಬಹುದು ಮಾತ್ರವಲ್ಲ ಆ ಪತ್ರಿಕೆ ಕೊಂಡು ಓದುವ ಮಂದಿಯನ್ನು ಸಹಾ "ವ್ಯವಸ್ಥಿತ ಅಪರಾಧ ತಂಡಕ್ಕೆ" ಸಹಾಯ ಆರ್ಥಿಕವಾಗಿ ಪತ್ರಿಕೆ ಕೊಳ್ಳುವ ಮೂಲಕ ಮಾಡಿದರೆಂದು 'ದುಷ್ಪ್ರೇರಕ'ರೆಂದು ಭಾವಿಸಿ ಆರೋಪಿಗಳನ್ನಾಗಿಸಬಹುದು!.

**ಮುಂದುವರಿಯುತ್ತಿರುವ ಕಾನೂನು ಬಾಹಿರ ಚಟುವಟಿಕೆ :**

ಕೋಕಾದ ಪರಿಭಾಷೆಗಳು ಕಲಂ 2(1)ರ (ಡಿ)ಯಲ್ಲಿ ಮುಂದುವರಿದು ಮುಂದುವರಿಯುತ್ತಿರುವ ಕಾನೂನು ಬಾಹಿರ ಚಟುವಟಿಕೆಯನ್ನು ಪರಿಭಾಷಿಸುತ್ತದೆ. ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯ ಒಂಟಿಯಾಗಿ ಅಥವ ಇತರರೊಡನೆ ಸೇರಿ ಅಥವ ಅಂತಹವರ ಮೇಲೆ ಕಳೆದ 10 ವರ್ಷಗಳಲ್ಲಿ ಒಂದಕ್ಕಿಂತ ಹೆಚ್ಚು ಚಾರ್ಜ್ ಶೀಟುಗಳನ್ನು ಸಲ್ಲಿಸಿದ್ದರೆ, ಸಮಕ್ಷಮ ನ್ಯಾಯಾಲಯ ಅದನ್ನು ಪರಿಗಣಿಸಿದ್ದರೆ, ಅಂತಹವರು ಮೂರು ವರ್ಷಗಳಿಗಿಂತ ಹೆಚ್ಚಿನ ಅವಧಿಯ ಕಾರಾವಾಸ ವಿಧಿಸುವ ಸಂಜ್ಞೇಯ ಅಪರಾಧ, (COGNIZABLE OFFENCE) ಅಥವಾ ತಾತ್ಕಾಲಿಕವಾಗಿ ಕಾನೂನು ನಿಷೇಧಿಸಿರುವ ಚಟುವಟಿಕೆಗಳಲ್ಲಿ ತೊಡಗಿದ್ದರೆ, ಅಂತಹ ಚಟುವಟಿಕೆಗಳನ್ನು ಮುಂದುವರಿಯುತ್ತಿರುವ ಕಾನೂನು ಬಾಹಿರ ಚಟುವಟಿಕೆ ' ಎಂದು ಪರಿಭಾಷಿಸಿದೆ.

**ವ್ಯವಸ್ಥಿತ ಅಪರಾಧ**

ಈ ಎಲ್ಲಾ ಪರಿಬಾಷೆಗಳಿಗೆ ಮುಖ್ಯವಾಗಿ ಪರಿಭಾಷಿಸಬೇಕಾದ ಪರಿಕಲ್ಪನೆ ಎಂದರೆ "ವ್ಯವಸ್ಥಿತ ಅಪರಾಧ" ಯಾವುದನ್ನು ಸದೆಬಡಿಯಲೆಂದು ಇಡೀ ಕಾಯ್ದೆಯನ್ನು ರೂಪಿಸಲಾಗಿದೆಯೋ ಅದು. ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯನಾಗಿಯಾಗಲಿ ಅಥವಾ ಅಂತ ಕೂಟದ ಪರವಾಗಿಯಾಗಲಿ ಒಬ್ಬನೇ ಅಥವ ಜಂಟಿಯಾಗಿ ತನಗಾಗಿ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಅಥವಾ ದಂಗೆಯನ್ನು ಉತ್ತೇಜಿಸುವುದಕ್ಕಾಗಿ ಆರ್ಥಿಕ ಪ್ರಯೋಜನವನ್ನು ಪಡೆಯುವ ಅಥವಾ ಅನುಚಿತ ಹಣಕಾಸಿನ ಇಲ್ಲವೇ ಇತರೆ ಅನುಕೂಲತೆಗಳನ್ನು ಪಡೆಯುವ ಉದ್ದೇಶದಿಂದ ಹಿಂಸೆಯ ಬಳಕೆಯ ಮೂಲಕ ಅಥವ ಹಿಂಸೆಯ ಬೆದರಿಕೆಯ ಮೂಲಕ ಅಥವಾ ಭಯೋತ್ಪಾದನೆ ಅಥವಾ ಬಲಾತ್ಕಾರ ಇಲ್ಲವೇ ಇತರೆ ಕಾನೂನು ಬಾಹಿರ ವಿಧಾನಗಳ ಮೂಲಕ ಒಬ್ಬ ವ್ಯಕ್ತಿಯು ಕೈಗೊಳ್ಳುವ ಮುಂದುವರಿಯುತ್ತಿರುವ ಯಾವುದೇ ಕಾನೂನು ಬಾಹಿರ ಚಟುವಟಿಕೆಯನ್ನು ವ್ಯವಸ್ಥಿತ ಅಪರಾಧವೆಂದು ಪರಿಭಾಷಿಸಲಾಗಿದೆ.

ಈ ವ್ಯವಸ್ಥಿತ ಅಪರಾಧ' ದ ಪರಿಭಾಷೆಯ ವೈಶಾಲತೆ ಏನನ್ನೆಲ್ಲಾ ತನ್ನ ತೆಕ್ಕೆಗೆ ಹಾಕಿಕೊಳ್ಳಲಿದೆ ಎಂಬುದನ್ನು ಅರಿಯಬೇಕಾದರೆ, ಮೇಲಿನ ಪರಿಬಾಷೆಯ ಸಾಲುಗಳ ಮಧ್ಯದ ಅರ್ಥವನ್ನು ಅರಿಯಬೇಕು (READING BETWEEN THE LINES) ಈ ಪರಿಬಾಷೆಯಲ್ಲಿ ಎಲ್ಲಿ ಹುಡುಕಿದರೂ ಸಹಾ ವ್ಯವಸ್ಥಿತ ಎಂಬ ಪದದ ಅರ್ಥ ಕಾಯ್ದೆ ರೂಪಿಸಿದವರ ಉದ್ದೇಶಿತ ಅರ್ಥ ಸಿಗದು. ಅಪರಾಧವೆಂದರೆ ಭಾರತ ದಂಡ ಸಂಹಿತೆಯಲ್ಲಿ ಬಹಳಷ್ಟು ಅಪರಾಧಗಳನ್ನು ಪಟ್ಟಿಮಾಡಲಾಗಿದೆ, ಅಂತೆಯೇ ಮುಂದುವರಿಯುತ್ತಿರುವ ಕಾನೂನು ಬಾಹಿರ ಚಟುವಟಿಕೆಯ ಪರಿಭಾಷೆಯೊಳಕ್ಕೆ ಅದರ ಅರ್ಥ ಸೇರ್ಪಡೆಯಾಗುತ್ತದೆ. ಆದರೆ ಇಷ್ಟು ವಿಶಾಲ ಪರಿಭಾಷೆ, ತಮ್ಮ ಹಕ್ಕುಗಳಿಗಾಗಿ ಹೋರಾಡುವ ಜನ ಸಮೂಹಗಳನ್ನು ಅವರ ಪ್ರತಿನಿಧಿಕ ಸಂಘಟನೆ ಚಳುವಳಿಗಳನ್ನು ಒಳಗೊಳ್ಳದೆಂಬ ಖಾತ್ರಿಯಂತೂ ಇಲ್ಲ! **"ಆರ್ಥಿಕ ಪ್ರಯೋಜನವನ್ನು ಪಡೆಯುವ ಅಥವ ಇತರೇ ಅನುಕೂಲತೆಗಳನ್ನು ಪಡೆಯುವ ಉದ್ದೇಶದೊಂದಿಗೆ...... ಕಾನೂನು ಬಾಹಿರ ವಿಧಾನಗಳ ಮೂಲಕ"** ಎಂಬ ಸಾಲು ಕಾರ್ಮಿಕರ ಹಕ್ಕುಗಳಿಗಾಗಿ, ವೇತನ, ಬೋನಸ್, ನ್ಯಾಯಯುತ ಬೆಲೆಗಳಿಗಾಗಿ ರೈತರ, ಸೌಲಭ್ಯಗಳಿಗಾಗಿ ವಿದ್ಯಾರ್ಥಿ..... ಇತರೆ ವಿಭಾಗಗಳ

# .....ಕ್ರೂರ 'ಕೋಕಾ'

ಹೋರಾಟಗಳನ್ನು ಒಳಗೊಳ್ಳದೆ ಇರಲು. ಸಾಧ್ಯವಿದೆಯೇ.... ಒಳಗೊಳಿಸಲೇ ಬೇಕೆಂದು ಉದ್ದೇಶಿಸಿದಲ್ಲಿ ಇಂತಹ ಹೋರಾಟಗಳಿಗೆ ರಕ್ಷಣೆ ಅಥವ ಕೋಕಾದಿಂದ ರಿಯಾಯಿತಿ ಇದೆಯೇ? ಇದ್ದಿದಲ್ಲಿ ಸ್ಪಷ್ಟವಾಗಿ ನಮೂದಿಸಬಹುದಿತ್ತಲ್ಲ ಎಂಬ ಸಂಶಯಗಳು, ಪ್ರಜ್ಞಾವಂತರನ್ನು ಕಾಡದೆ ಇರವು.

ದುರುದ್ದೇಶದಿಂದ ಈ ಪರಿಭಾಷೆಯಡಿ ಸಂಘಟಿತ ಹೋರಾಟಗಳನ್ನು ತರಲು ಯತ್ನಿಸುವ ಅಧಿಕಾರಿಗಳ ಮೇಲೆ ಕ್ರಮ ಹಾಗು ಅದರಿಂದ ಅನ್ಯಾಯಕ್ಕೊಳಗಾಗುವ ಸಂಘಟನೆಗಳಿಗೆ ಸಂರಕ್ಷಣೆ ರಿಯಾಯಿತಿ ಸೂಚಿಸಬೇಕಿದ್ದ ಕಾಯ್ದೆ, ಅಂತಹ ಕಾರ್ಯಕ್ಕೆ ಇಳಿದಿಲ್ಲ. ಬದಲಾಗಿ ತನ್ನ ಕಲಂ 27ರಲ್ಲಿ ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆಯನ್ನು ಸಂಬಂಧಿತ ರಾಜ್ಯ ಸರ್ಕಾರ, ಅಧಿಕಾರಿಗಳಿಗೆ ಹಾಗು ಪ್ರಾಧಿಕಾರಿಗೆ ನೀಡಿದೆ.

ಒಮ್ಮೆ ಈ ಕಾಯ್ದೆಯ ವ್ಯವಸ್ಥಿತ ಅಪರಾಧದ ಕಲಂ 2(1)(ಇ) ವ್ಯಾಪ್ತಿಗೆ ಒಂದು ಜನ ಸಮೂಹದ ಹೋರಾಟವನ್ನು ಚಳುವಳಿಯನ್ನು ತಂದರೆ ಮುಗಿಯಿತು, ಆ ಹೋರಾಟಕ್ಕೆ ಕರೆ ಕೊಟ್ಟ ನೇತೃತ್ವ ನೀಡಿದ ಸಂಘಟನೆಗಳೆಲ್ಲಾ ವ್ಯವಸ್ಥಿತ ಅಪರಾಧಿಗಳ ಕೂಟ ತಂಡ"ದ ಕಲಂ 2(1) ಎಫ್ ವ್ಯಾಪ್ತಿಗೆ ಬರುತ್ತವೆ ಎಷ್ಟು ಸಲೀಸು ನೋಡಿ ಒಂದು ಸಂಘಟನೆಯನ್ನು ಕಾನೂನಿನ ಮೂಲಕವೇ ಬಗ್ಗುಬಡಿಯುವುದು, ಅದರಿಂದಲೇ ಕೋಕಾ ಸರ್ಕಾರಕ್ಕೆ ಅನಿವಾರ್ಯವಾಗಿರಬಹುದು!

**ಕೋಕಾ ಕಾಯ್ದೆಗೆ ವಿಶೇಷ ನ್ಯಾಯಾಲಯ.**

ಈ ಕೋಕಾ ಕಾಯ್ದೆಯಡಿಯ ಮೊಕದಮೆಗಳನ್ನು ವಿಲೇವಾರಿ ಮಾಡಲು ವಿಶೇಷ ನ್ಯಾಯಾಲಯ" ರಚನೆಯನ್ನು ಕಾಯ್ದೆ ಸೂಚಿಸಿದೆ. ಕಲಂ '9(2)ರಲ್ಲಿ ಅದಿವಿಚಾರಣೆಗೆ ಸಂಬಂಧ ಪಟ್ಟಂತೆ ದಂಡ ಪ್ರಕ್ರಿಯಾ ಸಂಹಿತೆ (1973)ರ ಕಲಂ 260(1) ಹಾಗು 262ರ ನಿಯಮಾವಳಿಗಳಿಂದ ವಿನಾಯ್ತಿ ನೀಡಿ ಸಂಕ್ಷಿಪ್ತ ರೀತಿಯಲ್ಲಿ ಅಧಿವಿಚಾರಣೆ ನಡೆಸಲು ಅನುಮತಿಸಿದೆ. ದಂಡ ಪ್ರಕ್ರಿಯಾ ಸಂಹಿತೆ 1973, ಸ್ಪಷ್ಟವಾಗಿ ಜೀವಾವಧಿ ಶಿಕ್ಷೆ ಅಥವ ಮರಣ ದಂಡನೆ ಶಿಕ್ಷೆ; ಅಥವ 2 ವರ್ಷಕ್ಕಿಂತ ಮೇಲ್ಪಟ್ಟ ಕಾರಾಗೃಹವಾಸ ವಿಧಿಸುವ ಯಾವುದೇ ಅಪರಾಧದ ಅದಿವಿಚಾರಣೆಯನ್ನು ಸಂಕ್ಷಿಪ್ತ ರೀತಿಯಲ್ಲಿ ಮಾಡಬಾರದೆಂದು ಹೇಳುತ್ತದೆ, ಆದರೆ, ಕೋಕಾ ನ್ಯಾಯಾಲಯ ಅಗತ್ಯವೆಂದು ಭಾವಿಸಿದಲ್ಲಿ ಎಲ್ಲಾ ಅಧಿವಿಚಾರಣೆಗಳನ್ನು ಸಂಕ್ಷಿಪ್ತವಾಗಿ ನಡೆಸಬಹುದೆಂದು ಅನುಮತಿಸುತ್ತದೆ.

ಯಾವುದೇ ವ್ಯಕ್ತಿಯ ಜೀವ ತೆಗೆಯಲು, ಜೀವಮಾನವಿಡಿ ಅವನ ಸ್ವತಂತ್ರಹರಣ ಮಾಡಿ, ಜೈಲಿಗೆ ತಳ್ಳಬೇಕಾಗಿ ಬಂದಲ್ಲಿ ಅಂತಹ ಅದಿವಿಚಾರಣೆಯನ್ನು ಸವಿವರವಾಗಿ ನಡೆಸಿ ಸಾಧಕ - ಭಾದಕಗಳನ್ನು ಪರಿಗಣಿಸಬೇಕೆಂಬ ಅಪರಾಧ ನ್ಯಾಯಶಾಸ್ತ್ರ (CRIMINAL JURISPRUDENCE) ದ ತಳಹದಿಯ ಮೇಲೆ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕ್ರಿಯೆಗಳು ಮಾನವ ಹಕ್ಕುಗಳ ಸಂರಕ್ಷಣೆಯ ಹಿನ್ನೆಲೆಯಲ್ಲಿ ರೂಪಿತವಾಗಿದ್ದವು, ಎಂಬುದನ್ನು ಇಲ್ಲಿ ಅರಿಯಬೇಕು.

**ಸಾಕ್ಷ್ಯಾಧಾರಗಳ ಕುರಿತು ವಿಶೇಷ ನಿಯಮಾವಳಿಗಳು.**

ದಂಡ ಪ್ರಕ್ರಿಯಾ ಸಂಹಿತೆ 1973ರ ನಿಯಮಾವಳಿಗಳಿಂದ ವಿಶೇಷ ರಿಯಾಯಿತಿಗಳನ್ನು ನೀಡಿರುವಂತೆಯೆ, ಕಲಂ (18)(1) ಮತ್ತಷ್ಟು ಅಪಾಯಕಾರಿ ರಿಯಾಯಿತಿಗಳನ್ನು ನೀಡಿದೆ. ಯಾವುದೇ ಕೋಕಾದಡಿಯ ಆರೋಪಿ ಈ ಹಿಂದೆ ಏನಾದರೂ, ದಂಡ ಪ್ರಕ್ರಿಯೆ ಸಂಹಿತೆಯ ಕಲಂ 110 ಹಾಗೂ 107ರ ಪ್ರಕಾರ ಯಾವುದೇ ನ್ಯಾಯಾಲಯಕ್ಕೆ ಉತ್ತಮ ನಡವಳಿಕೆಗಾಗಿ ಭದ್ರತಾ ಬಾಂಡ್(Suirty) ನೀಡಿದ್ದರೆ, ಅಥವ ಸಮಾಜದ ಶಾಂತಿ ಕಾಪಾಡಲು ಭದ್ರತಾ ಬಾಂಡ್ ನೀಡಿದ್ದರೆ, ಮುಂಜಾಗ್ರತಾ ಬಂಧನದ ಕಲಂನಡಿ ಬಂದಿಸಲ್ಪಟ್ಟಿದ್ದರೆ, ಅಥವ ಕೋಕಾ ವಿಶೇಷ ನ್ಯಾಯಾಲಯದಲ್ಲಿ ಹಿಂದೆಂದಾದರೂ, ಶಿಕ್ಷಿಸಲ್ಪಟ್ಟಿದ್ದರೆ, ಅದಷ್ಟೆ ಸಾಕು, ಅವಡನ್ನು ಅಪರಾಧಿಯೆಂದು ಪರಿಗಣಿಸಲು ಅಂತಹವು ಪ್ರಮಾಣೀಕರಣ ಮೌಲ್ಯ ಹೊಂದಿರುವ ಸಾಕ್ಷ್ಯಗಳೆಂದು ಪರಿಗಣಿಸಬಹುದೆಂದು ಕೋಕಾ ಹೇಳುತ್ತದೆ. ಮಾತ್ರವಲ್ಲ ಇಂತಹ ಪರಿಗಣನೆಗೆ ಭಾರತ ಸಾಕ್ಷ ಅಧಿನಿಯಮ 1872, ಅಥವ ದಂಡ ಪ್ರಕ್ರಿಯಾ ಸಂಹಿತೆಯ ಯಾವುದೇ ನಿಯಮಾವಳಿಗಳು ಅಡ್ಡಿಯಾಗಲಾರವೆಂದು ಸೂಚಿಸಿದೆ.

ಅಂತೆಯೇ ಅಂತಹ ವ್ಯಕ್ತಿಗೆ ಸಂಬಂಧಪಟ್ಟ ಆಸ್ತಿಯನ್ನು ವ್ಯವಸ್ಥಿತ ಅಪರಾಧದಿಂದ ಪಡೆದಿದ್ದೆಂದು ಭಾವಿಸಿ ಮುಟ್ಟುಗೋಲು ಹಾಕಿಕೊಳ್ಳಬಹುದು. ಒಂದು ವೇಳೆ ಏನಾದರೂ ಆರೋಪಿ ಯಾರನ್ನಾದರು ಅಪಹರಿಸಿದ್ದರೆ, ಅಬಡಕ್ಸ್ ಮಾಡಿದ್ದರೆ, ಅದರ ಉದ್ದೇಶ ಹಣಕ್ಕಾಗಿ ಎಂದು ಭಾವಿಸಬಹುದು.

ಒಟ್ಟಾರೆ ಸಾಕ್ಷ್ಯಗಳು ಅಪರಾಧದ ಉದ್ದೇಶವನ್ನು ಸಾಬೀತು ಪಡಿಸಬೇಕೆಂಬ ಅಪರಾಧ ನ್ಯಾಯಶಾಸ್ತ್ರದ ಪರಿಕಲ್ಪನೆಗಳಿಗೆ ತಿಲಾಂಜಲಿ ಹೇಳಿ, ಉದ್ದೇಶಗಳನ್ನು ನ್ಯಾಯಾಲಯವೇ ಭಾವಿಸಬಹುದು, ಅದರಾಧಾರದಲ್ಲಿ ನಿಷ್ಕರ್ಶಿಸಬಹುದು ಎಂಬುದಕ್ಕೆ ಇದು ಅನುವುಗೊಳಿಸಿದೆ. ನಾನು ಕೋಕಾದಡಿ ಅಪರಾಧಿಯಲ್ಲಾ ಎಂದು ವಾದಿಸಿ ಸಾಧಿಸಬೇಕಾದ ಹೊರೆ (BURDEN OF PROOF) ಯನ್ನು ಆರೋಪಿಯ ಮೇಲೆ ಕೋಕಾ ಹೊರಿಸಿದೆ. ಆದರೆ ಇತರೆ ಅಪರಾಧಗಳಲ್ಲಿ ಸಾಮಾನ್ಯವಾಗಿ ಆರೋಪಿಯು ಅಪರಾಧಿ ಎಂದು ಸಾಭೀತು ಪಡಿಸುವ ಹೊರೆ ಸರ್ಕಾರದ (ಪಬ್ಲಿಕ್ ಪ್ರಾಸಿಕ್ಯೂಟರ್) ಮೇಲೆ ಇರುತ್ತದೆ.

ಕೋಕಾದ ಕಲಂ 20(3) ಸಾರ್ವಜನಿಕ ಹಿತಾಸಕ್ತಿಯ ಹೆಸರಿನಲ್ಲಿ ಕೋಕಾದಡಿಯ ಅಧಿವಿಚಾರಣೆಗಳನ್ನು ಅದರ ವಿವರ ಮಾಹಿತಿಗಳನ್ನು ಪ್ರಕಟಿಸುವುದನ್ನು ನಿಷೇಧಿಸುತ್ತದೆ, ನ್ಯಾಯಾಲಯ ಈ ನಿಟ್ಟಿನಲ್ಲಿ ಆಜ್ಞೆಹೊರಡಿಸಬಹುದೆಂದು ಸೂಚಿಸುತ್ತದೆ. ಇದರ ಉಲ್ಲಂಘನೆ ಒಂದು ವರ್ಷ ಜೈಲು ಹಾಗು 1000 ರೂಪಾಯಿ ದಂಡವನ್ನು ಅಕರ್ಷಿಸುತ್ತದೆ ಎಂದು ಹೇಳುತ್ತದೆ.

ಕೋಕಾದ ಕಲಂ 19, ಪೊಲಿಸರ ಮುಂದೆ ನೀಡಲಾಗುವ ತಪ್ಪೋಪ್ಪಿಗೆಯನ್ನು ವಿಶೇಷ ನ್ಯಾಯಾಲಯ ಪರಿಗಣಿಸಬಹುದು. ಪೋಲಿಸರ ಏರೋಪ್ಲೇನ್, ಇತರೆ ಅಸ್ತ್ರಗಳು ಹೇಗೆಲ್ಲಾ ಅಮಾಯಕರನ್ನು ತಪ್ಪೋಪ್ಪಿಗೆಯ ಕೂಪಕ್ಕೆ ತಳ್ಳಬಹುದೆಂದು ಊಹಿಸಬೇಕಿದೆ.

**ಪೋಲಿಸರ ಕೃಪೆಯಲ್ಲಿ ಆರೋಪಿಗಳು ;**

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 167 ಹಾಗೂ 167(2) ಹೇಗೆ ಬಂದಿತ ವ್ಯಕ್ತಿಯೊಂದಿಗೆ ವ್ಯವಹರಿಸಬೇಕು, ಹೇಗೆ ಅವನ ಮೂಲಭೂತ ಹಾಗೂ ಮಾನವ ಹಕ್ಕುಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ವ್ಯವಹರಿಸಬೇಕೆಂಬ ನಿಯಮಾವಳಿಗಳನ್ನು ರೂಪಿಸಿದೆ. ಆದರೆ ಕೋಕಾದ ಕಲಂ 22(2) ಅದಕ್ಕೆ ಬದಲಾವಣೆಗಳನ್ನು ಮಾಡಿದೆ. ಸಂಹಿತೆಯ ಕಲಂ 57ರ ಪ್ರಕಾರ ಯಾವುದೇ ಬಂದಿತ ವ್ಯಕ್ತಿಯನ್ನು 24 ಗಂಟೆಗಳೊಳಗಾಗಿ ನ್ಯಾಯಾಲಯದ ಮುಂದು ಹಾಜರುಪಡಿಸಬೇಕು, ಒಂದು ವೇಳೆ ಸಾಧ್ಯವಾಗದಿದ್ದಲ್ಲಿ ಕಲಂ 167 ಅನ್ನು ಪಾಲಿಸಬೇಕೆಂದು ಕಟ್ಟುಪಾಡನ್ನು ವಿಧಿಸುತ್ತದೆ.

ಒಂದು ವೇಳೆ ಪೋಲಿಸರ ತನಿಖೆ 24 ಗಂಟೆಗಳೊಳಗೆ ಮುಗಿಯದಿದ್ದಲ್ಲಿ, ಪೋಲಿಸರ ಅರ್ಜಿ ಮೇರೆಗೆ, ನ್ಯಾಯಾಲಯ 15 ದಿನಕ್ಕಿಂತ ಹೆಚ್ಚು ಕಾಲ ಪೋಲಿಸರ ಕಸ್ಟಡಿಗೆ ಆರೋಪಿಯನ್ನು ನೀಡಬಾರದೆಂದು, ಹಾಗೂ ಜೀವಾವದಿ ಶಿಕ್ಷೆ, ಗಲ್ಲು ಶಿಕ್ಷೆ ಅಥವ 10 ವರ್ಷಕ್ಕಿಂತ ಹೆಚ್ಚು ಶಿಕ್ಷೆ ಆಕರ್ಷಿಸುವ ಅಪರಾಧಗಳಾಗಿದಲ್ಲಿ, 90 ದಿನ ಮೀರದಂತೆ ಹಾಗೂ ಇತರೆ ಎಲ್ಲಾ ಅಪರಾಧಗಳಲ್ಲಿ 60 ದಿನಕ್ಕೆ ಮೀರದಂತೆ ಪೊಲಿಸರ ವಶಕ್ಕೆ ತನಿಖೆಗಾಗಿ ಆರೋಪಿಗಳನ್ನು ನೀಡಬಹುದೆಂದು ಪ್ರಕ್ರಿಯಾ ಸಂಹಿತೆಯ ಕಲಂ 167(2) ಸೂಚಿಸುತ್ತದೆ. ಆದರೆ ಕೋಕಾ ಈ 15 ದಿನಗಳ ಗಡುವನ್ನು 60 ದಿನಕ್ಕೆ ಹಾಗೂ 60 ದಿನಗಳ ಗಡುವನ್ನು 90 ದಿನಗಳಿಗೆ ವಿಸ್ತರಿಸಿದೆ. ಅಂದರೆ ಮೊದಲ 60 ದಿನಗಳ ಕಾಲ, ಅನಂತರ 90 ದಿನಗಳ ಕಾಲ ಆರೋಪಿ ಪೊಲಿಸರ ಕೃಪೆಯಲ್ಲೆ ಬದುಕಿ ಬರಬೇಕು ಮಾತ್ರವಲ್ಲ, ಪಬ್ಲಿಕ್ ಪ್ರಾಸಿಕ್ಯೂಟರ್‌ನ ಅರ್ಜಿ ಮೇರೆಗೆ (ಅರ್ಥಾಥ್ ಪೋಲಿಸರ ಇಚ್ಛೆಮೇರೆಗೆ) ನ್ಯಾಯಾಲಯವು ಈ ಕಾಲಾವಧಿಯನ್ನು 180 ದಿನಗಳಿಗೆ ವಿಸ್ತರಿಸಬಹುದು.

ಎಲ್ಲಾ ಅಪರಾಧಗಳೂ "ಸಂಜ್ಞೆಯ ಮೊಕದ್ದಮೆ"ಗಳೇ (COGNIZABLE OF- [illegible]

ಇಲ್ಲದೆ ಪೋಲೀಸರೇ ಬಂಧಿಸಬಹುದು। ಪ್ರಕ್ರಿಯಾ ಸಂಹಿತೆಯ ಕಲಂ 2(C) ಕೋಕಾಗೆ ಅನ್ವಯವಾಗದು. (Cogniable Offence ಪರಿಭಾಷಿಸುವ ಕಲಂ)

**ಜಾಮೀನು ಕಷ್ಟ - ನಿರೀಕ್ಷಣಾ ಜಾಮೀನು**



**ಕೋಕಾಗೆ ಗೊತ್ತೆ ಇಲ್ಲ:**

ಕೋಕಾದಡಿಯ ಆರೋಪಿಗಳಿಗೆ ಜಾಮೀನು ಸಿಗುವುದು ಕಷ್ಟವೇ. ಕೋಕಾದ ಕಲಂ 22(4) ಹೇಳುವ ಪ್ರಕಾರ, ಪಬ್ಲಿಕ್ ಪ್ರಾಸಿಕ್ಯೂಟರ್ ವಿರೋಧಿಸದಿದ್ದರೆ, ನ್ಯಾಯಾಲಯಕ್ಕೆ ಆರೋಪಿಯು ಅಪರಾಧವೆಸಗಿಲ್ಲ ಅಥವಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ ಅಪರಾಧವೆಸಗುವುದಿಲ್ಲಾ ಎಂದು ಮನದಟ್ಟಾದರೆ ಮಾತ್ರ ಜಾಮೀನು. ಅಂದರೆ ಅವನು ಖುಲಾಸೆ ಆಗುವವರೆಗೆ ಜಾಮೀನೇ ಇಲ್ಲ ಎಂದಲ್ಲವೇ ಅರ್ಥ!. ಒಂದು ವೇಳೆ ಅಪರಾಧ ನಡೆದ ದಿನವೇನಾದರೂ, ಆರೋಪಿಯು ಕೋಕಾ ಅಥವಾ ಇತರೆ ಯಾವುದೇ ಕಾಯ್ದೆಯಡಿ ಜಾಮೀನಿನ ಮೇಲೆ ಇದ್ದಾನೆಂದರಂತೂ ಜಾಮೀನು ಇಲ್ಲವೇ ಇಲ್ಲ ಬಿಡಿ - ಹೇಗಿದೆ ನೋಡಿ ಮೂಲಭೂತ ಹಕ್ಕುಗಳ - ಮಾನವ ಹಕ್ಕುಗಳ ದಮನದ ಪರಿ.

ಚಳುವಳಿ ಹೋರಾಟ-ಪ್ರತಿಭಟನೆಗಳಲ್ಲಿ ತೊಡಗಿರುವ ಸಂಘಟನೆಗಳ ಮುಖಂಡರುಗಳ ಮೇಲೆ ಎಷ್ಟು ಮೊಕದ್ದಮೆಗಳನ್ನು ಇರುವ ಕಾನೂನಿನ ಅಡಿ ಜಡಿದಿರಬಹುದು ಈ ಪೋಲೀಸರು? ಏನಿಲ್ಲಾವೆಂದರೆ ಕನಿಷ್ಟ ಒಂದು ಮೊಕದ್ದಮೆಯಲ್ಲಾದರೂ, ಪ್ರತಿಯೊಬ್ಬ ಸಂಘಟನೆಯ ಮುಖಂಡರು, ಜಾಮೀನಿನ ಮೇಲೆ ಇದ್ದೇ ಇರುತ್ತಾರೆ - ಇದ್ದಾರೆ. ಅವರನ್ನು ಮುಗಿಸಬೇಕೆಂದರೆ ಒಂದೇ ಒಂದು ಸಾರಿ ಕೋಕಾದಡಿ ಬಂಧಿಸಿದರೆ ಸಾಕು, ನಿರ್ದೋಷಿಯೆಂದು ಸಾಬೀತಾಗುವವರೆಗೆ ಜೈಲಿನಲ್ಲಿಯೇ ಅವರ ವಾಸ! ಹೇಗಿದೆ ಕೋಕಾ?

ಒಮ್ಮೆ ಜಾಮೀನು ಅರ್ಜಿ ತಿರಸ್ಕೃತಗೊಂಡರೆ, 60 ದಿನದ ನಂತರವೇ ಮತ್ತೆ ಜಾಮೀನಿಗೆ ಅರ್ಜಿ, ಆವಾಗಲೂ ತಿರಸ್ಕೃತಗೊಂಡರೆ ಮತ್ತೆ 90 ದಿನಗಳ ನಂತರ, ಆವಾಗಲೂ ತಿರಸ್ಕೃತವಾದರೆ ಮತ್ತೆ 180 ದಿನಗಳ ನಂತರ, ಅಂದರೆ 6 ತಿಂಗಳು ಜಾಮೀನೇ ಇಲ್ಲ!

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 438 ನಿರೀಕ್ಷಣಾ ಜಾಮೀನು ನೀಡುವ ಕುರಿತು ಮಾತನಾಡಿದೆ, ಹಾಗಾಗಿ ಕೋಕಾದ ಕಲಂ22(ಬಿ) ಸ್ಪಷ್ಟವಾಗಿ ಈ ಕಲಂ 438 ಕೋಕಾದಡಿಯ ಆರೋಪಿಗೆ ಅನ್ವಯಿಸದೆಂದಿದೆ, ಅಂದರೆ ಒಟ್ಟಾರೆ ಕೋಕಾ ಆರೋಪಿಗಳಾಗುವವರಿಗೆ ನಿರೀಕ್ಷಣಾ ಜಾಮೀನಿನ ಸೌಲಭ್ಯವಿಲ್ಲ.

**ಕೋಕಾದಡಿಯ ಆದೇಶಗಳು ಪ್ರಶ್ನಾತೀತ.**

ಕೋಕಾದ ಕಲಂ 26, ಕೋಕಾದಡಿಯ [illegible]

## ಎಲ್ಲಾ ಫೋನ್‌ಗಳಿಗೂ ಕಳ್ಳಗಿವಿ

ಕೋಕಾದ ಭಯಾನಕ ಅಂಶವೆಂದರೆ ಯಾವುದೇ ವ್ಯವಸ್ಥಿತ ಅಪರಾಧಿಗಳ ಕೂಟಕ್ಕೆ ಅನುವು ಆಗುವ ಮಾಹಿತಿ-ಸಂಭಾಷಣೆ ಯಾವುದೇ ಫೋನ್, ಮೊಬೈಲ್ ಮೂಲಕ ನಡೆಯುತ್ತಿದೆ ಎಂದರೆ ಅಂತಹ ಸಾಧಾರಣ ಅನುಮಾನ ಬಂದರೆ ಸಾಕು ಸಂಬಂಧಿತ ಪೋಲೀಸ್ ತನಿಖಾಧಿಕಾರಿ - ಸಂಬಂಧಿತರ ಫೋನ್‌ಗಳನ್ನು ಟ್ಯಾಪ್ ಮಾಡಬಹುದು - ಕಾನೂನು ಬದ್ಧವಾಗಿ ಎಂದು ಕೋಕಾದ ಕಲಂ 14 ಹೇಳುತ್ತದೆ.

ಯಾರ ಫೋನನ್ನು ಬೇಕಾದರೂ, ಕಾನೂನು ಬದ್ಧವಾಗಿಯೇ 60 ದಿನಗಳವರೆಗೆ ಆ ಫೋನ್‌ಗಳಿಗೆ ಕಳ್ಳಗಿವಿ ಅಳವಡಿಸಿ ಆಲಿಸಬಹುದು, ದಾಖಲು ಮಾಡಬಹುದು. ಅದನ್ನು ಸಾಕ್ಷ್ಯವಾಗಿ ನೀಡಬಹುದು. ಅದರ ಪ್ರಿಂಟ್‌ಔಟ್ ತೆಗೆಸಬಹುದು. ಸೆಲ್ಯೂಲರ್ ಫೋನ್‌ಗಳನ್ನು ನಿಷ್ಕ್ರಿಯಗೊಳಿಸಬಹುದು.

ಇಂತಹ ಕ್ರಮಗಳಿಗೆ ಅನುಮತಿಸಲು ಸರ್ಕಾರಿ ಅಭಿಯೋಜಕರೊಬ್ಬರಿರುತ್ತಾರೆ - ಸರ್ಕಾರದಿಂದ ನೇಮಿಸಲ್ಪಟ್ಟವರು, ಅವರ ಅನುಮತಿ ಮೇರೆಗೆ ಇದನು ಅನಾಯಾಸವಾಗಿ ನಡೆಸಬಹುದು. ಆದರೆ ಅಭಿಯೋಜಕರ ಕ್ರಮ ಪರಿಶೀಲನೆಗೆ ಮುಖ್ಯಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ, ಗೃಹ ಕಾರ್ಯದರ್ಶಿ ಹಾಗೂ ಕಾನೂನು ಕಾರ್ಯದರ್ಶಿಗಳನ್ನೊಳಗೊಂಡ ಪರಿಶೀಲನಾ ಸಮಿತಿ ರಚನೆ. ಅವರ ತೀರ್ಪೇ ಅಂತಿಮ. ವರ್ಷಕ್ಕೊಮ್ಮೆ ಹಣಕಾಸು ವರ್ಷದ ಅಂತ್ಯದ ನಂತರ ಮೂರು ತಿಂಗಳೊಳಗಾಗಿ, ಸರ್ಕಾರ ಈ ಆಲಿಸಲಾಗಿರುವ ಕರೆಗಳ ಕುರಿತು ವರದಿಯನ್ನು ಶಾಸನ ಸಭೆಯ ಎರಡು ಸದನಗಳಿಗೆ ನೀಡಬೇಕು ಎಂದು ಕೋಕಾ ಹೇಳುತ್ತದೆ. ಶಾಸ್ತ್ರಕ್ಕೆ ಈ ರೀತಿ ಹೇಳಿದರೂ, ಆ ಮಾಹಿತಿ ಬಹಿರಂಗ ಪಡಿಸುವ ಮೂಲಕ ರಾಜ್ಯದ-ದೇಶದ ಭದ್ರತೆ-ಐಕ್ಯತೆಗೆ ಧಕ್ಕೆ ಇದೆ ಎಂದಾದರೆ, ಅಂತಹ ವಿವರ ಹೊರತುಪಡಿಸಿ ಸರ್ಕಾರ ವರದಿ ನೀಡಬಹುದು.

ಫೋನ್ ಕದ್ದಾಲಿಕೆ ಪ್ರಕರಣದ ಪರಿಣಾಮವಾಗಿ ಮುಖ್ಯಮಂತ್ರಿಯೋರ್ವರು ರಾಜಿನಾಮೆ ನೀಡಿದ ಉದಾಹರಣೆ ಇರುವ ಕರ್ನಾಟಕದಲ್ಲಿ ಫೋನ್ ಕದ್ದಾಲಿಕೆಗೆ - ಶಾಸನ ಬದ್ಧ ರಕ್ಷಣೆ ನೀಡಿ, ಅದನ್ನು ನ್ಯಾಯ ಸಮ್ಮತಗೊಳಿಸಲು ಕೋಕಾ - ಹೇಗಿದೆ? -ಹೈಟೆಕ್ ದರ್ಬಾರಿನ ಹೈಟೆಕ್ ಕದ್ದಾಲಿಕೆಯ ಅಸ್ತ್ರ!

# ಚೀನಾ ಪ್ರಧಾನಿ ಭಾರತದ ಭೇಟಿ: ಅತ್ಯಂತ ಮಹತ್ವಪೂರ್ಣ

ಚೀನಾ ಪ್ರಧಾನಿ ಝೂ ರೊಂಗ್ಜಿಯಾರವರ 6 ದಿನಗಳ ಪ್ರವಾಸ ಮುಕ್ತಾಯಗೊಂಡು ಅದು ಅನೇಕ ರೀತಿಯಲ್ಲಿ ಮಹತ್ವ ಪಡೆದಿದೆ. ಎರಡು ದೇಶಗಳ ನಡುವೆ ಭಯೋತ್ಪಾದಕ ವಿರೋಧಿ ಕ್ರಮಗಳನ್ನು ಚರ್ಚಿಸುವುದರ ಜೊತೆಗೆ ಅನೇಕ ಮಹತ್ವದ ಒಪ್ಪಂದಗಳಿಗೆ ಸಹಿ ಮಾಡಲಾಗಿದೆ. ಈ ಒಪ್ಪಂದಗಳಲ್ಲಿ ಪ್ರವಾಸೋದ್ಯಮ, ಅಂತರಿಕ್ಷ ವಿಜ್ಞಾನ ತಂತ್ರಜ್ಞಾನ ಮತ್ತು ವೈಜ್ಞಾನಿಕ ವ್ಯಕ್ತಿ ಮತ್ತು ಜಲಮಾಹಿತಿಗಳ ವಿನಿಮಯಗಳು ಸೇರಿವೆ. ಮೊದಲಿನವು ದೆಹಲಿ ಮತ್ತು ಬೀಜಿಂಗ್ ನಡುವೆ ಸಂಬಂಧಗಳನ್ನು ಸುಧಾರಿಸಿದರೆ ಕೊನೆಯದು ಲಕ್ಷಾಂತರ ಈಶಾನ್ಯ ಭಾರತದ ಜನರು ನಿರಂತರ ತೊಂದರೆಗೊಳಗಾಗುತ್ತಿರುವ ಬ್ರಹ್ಮಪುತ್ರ ಪ್ರವಾಹವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.



ಈಗಿರುವ ವರದಿಗಳಂತೆ, ಚೀನಾ ಮತ್ತು ಭಾರತ ಎರಡೂ ದೇಶಗಳು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಸರಿಯಾಗಿ ನಿರ್ವಹಿಸಿಕೊಂಡು, ಬಹುಮುಖೀಯ ಸಂಬಂಧಗಳನ್ನು ಬೆಸೆಯುವ ಸೂಚನೆ ನೀಡಿವೆ. ಸಂಬಂಧಗಳನ್ನು ಮತ್ತಷ್ಟು ಮುಂದೆ ಕೊಂಡೊಯ್ಯದಿರಲು ಯಾವುದೇ ಕಾರಣವು ಎರಡೂ ದೇಶಗಳಿಗೆ ಕಂಡಿಲ್ಲ. ಚೀನಾ ದೇಶವು ಭಾರತ ಮತ್ತು ಪಾಕಿಸ್ತಾನ ವಿಷಯದಲ್ಲಿ ತಟಸ್ಥವಾಗಿದ್ದು ಎರಡೂ ದೇಶಗಳು ಚರ್ಚೆಯ ಮೂಲಕ ಭಿನ್ನಾಭಿಪ್ರಾಗಳನ್ನು ಬಗೆಹರಿಸಿಕೊಳ್ಳಬೇಕೆಂಬ ನಿಲುವಿಗೆ ಬದ್ಧವಾಗಿದೆ.

**ಹಲವಾರು ಒಪ್ಪಂದಗಳು**

ಇದರಲ್ಲಿ ಅತ್ಯಂತ ಮುಖ್ಯವಾದ ವಿಚಾರವೆಂದರೆ, ಚೀನಾ ಪ್ರಧಾನಿಯವರೊಡನಿದ್ದ 25 ಸದಸ್ಯರ ವ್ಯಾಪಾರಿ ಪ್ರತಿನಿಧಿಗಳು ಮತ್ತು ಭಾರತದ ವ್ಯಾಪಾರಿ ಸಂಸ್ಥೆಗಳ ನಡುವೆ ಆದ ಲಕ್ಷಾಂತರ ಡಾಲರುಗಳ ವ್ಯಾಪಾರ ಒಪ್ಪಂದಗಳು. ಈಗ ಮೂಡಿಬಂದ ಮತ್ತೊಂದು ಗಮನಾರ್ಹ ಅಂಶವೆಂದರೆ ವ್ಯಾಪಾರ ಸಂಬಂಧಗಳನ್ನು ಗಟ್ಟಿಗೊಳಿಸುವುದು ಮತ್ತು ಹಲವಾರು ವಿಷಯಗಳಿಗೆ ಸಂಬಂಧಿಸಿ ಡಬ್ಲ್ಯುಟಿಓನಲ್ಲಿ ಪರಸ್ಪರ ಸಹಕರಿಸುವುದು ಎಂಬುದು ಗುಣಾತ್ಮಕ ಬೆಳವಣಿಗೆಗಳು.

**ಮಾಧ್ಯಮಗಳ ಡೋಂಗಿ ವರ್ತನೆ**

ಆದರೆ ಈ ಭೇಟಿಗೆ ಮಾಧ್ಯಮಗಳ ಸ್ಪಂದನೆ ಅತ್ಯಂತ ದುರದೃಷ್ಟಕರವಾದುದು. ಟೈಮ್ಸ್ ಆಫ್ ಇಂಡಿಯಾದ ಪತ್ರಿಕೆ ತನ್ನ ಸಂಪಾದಕೀಯದಲ್ಲಿ "ಚೀನಾ ಪ್ರಧಾನಿಯ ಭೇಟಿಯ ಬಗ್ಗೆ ಮಾಧ್ಯಮಗಳಲ್ಲಿ ಅಲೆ ಎದ್ದಿದೆ. ಕೆಲವು ಸಾಮಾನ್ಯ ಸಚಿವ ಮಟ್ಟದ ಹೇಳಿಕೆಗಳನ್ನು ಬಿಟ್ಟರೆ ಅವರ ಪ್ರವಾಸ ಒಂದು ಖಾಸಗೀ ಪ್ರವಾಸದಂತಿದೆ. ಆರ್ಥಿಕ ಮತ್ತು ಇತರೆ ಪ್ರಮುಖ ವಿಚಾರಗಳಲ್ಲಿ ಬೀಜಿಂಗ್ ಪ್ರಧಾನ ಪಾತ್ರ ವಹಿಸುತ್ತಿದೆ. 20ನೇ ಶತಮಾನ ಪೂರ್ತಿ ಅಮೇರಿಕಾಕ್ಕೆ ಸೇರಿದ್ದರೆ, ಹೊಸ ಸಹಸ್ರಮಾನ ಏಷಿಯಾದ ವಿಷ ಸರ್ಪಕ್ಕೆ ಸೇರುತ್ತದೆ" ಎಂದಿದೆ. ಹಾಗೆಯೇ ಕನ್ನಡದ ಮಾಧ್ಯಮಗಳೂ ಸಹ ಜೊಂಗ್ಜಿಯವರ ಭೇಟಿಯನ್ನು ಗೌಣವಾಗಿಯೇ ಕಂಡಿವೆ. ವಿಜಯಕರ್ನಾಟಕ ಒಂದು ಕೊಳಕು ಲೇಖನವನ್ನು ಪ್ರಕಟಿಸಿದೆ. ಅಮೆರಿಕಾ ಅಧ್ಯಕ್ಷ ಕ್ಲಿಂಟನ್‌ನಂಥವರು ಬೆಂಗಳೂರಿಗೆ ಬರದೇ ಇದ್ದರೂ ತಿಂಗಳಾದ್ಯಂತ ಟನ್‌ಗಳನ್ನು ಬರೆದು ಯಜಮಾನರ ಸೇವೆ ಮಾಡಿದವುಎಂಬುದು ಗಮನಾರ್ಹ. ಇದೇ ಸಂಪಾದಕೀಯ ಮುಂದುವರೆದು ಈ ಎರಡೂ ದೇಶಗಳ ನಡುವೆ ಇನ್ನೂ ಗಟ್ಟಿಯಾದ ಬಾಂಧವ್ಯ ಬೆಳೆಯಬೇಕೆಂದು ಬರೆಯುತ್ತದೆ.

ಆದರೆ ಈ ಸರ್ಕಾರಕ್ಕೆ ಸಂಬಂಧಗಳನ್ನು ಉತ್ತಮಪಡಿಸಿಕೊಳ್ಳುವ ಯೋಗ್ಯತೆ ಮತ್ತು ಕಣ್ನೋಟ ಇದೆಯೇ ಎಂಬ ಪ್ರಶ್ನಾರ್ಥಕ ಚಿಹ್ನೆ ನಮ್ಮ ಮುಂದಿದೆ. ಏಕೆಂದರೆ ಆರ್.ಎಸ್.ಎಸ್. ಮುಖ್ಯಸ್ಥರು ರಕ್ಷಣಾ ಸಚಿವರ ಚೀನಾ ವಿರೋಧಿ ಧೋರಣೆಗಳಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ವಾಜಪೇಯಿ ಸರ್ಕಾರದ ಒಳ್ಳೆತನದ ನಡವಳಿಕೆಗಳ ಬಗ್ಗೆ ಎಚ್ಚರಿಸುತ್ತಾ ನಮ್ಮ ರಕ್ಷಣೆಯನ್ನು ಬಲಗೊಳಿಸಲು ಎಚ್ಚರಿಕೆ ನೀಡಿದ್ದಾರೆ. ಆರ್.ಎಸ್.ಎಸ್. ತನ್ನ ರಾಜಕೀಯ ಅಂಗ ಬಿಜೆಪಿಗೆ ಚೀನಾದೊಡನೆ ಶತ್ರುತ್ವವನ್ನು ಹೆಚ್ಚಿಸಲು ಸಲಹೆ ನೀಡಿ, ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡಿದೆ. ಇಂತಹ ಸಮಯದಲ್ಲಿ, ಆರ್.ಎಸ್.ಎಸ್. ನಾಚಿಕೆಯಿಲ್ಲದೆ ಅಮೇರಿಕನ್ ಸಾಮ್ರಾಜ್ಯಶಾಹಿಗೆ ಸೇವಕನಂತೆ ವರ್ತಿಸುತ್ತಾ, ನಮ್ಮ ದೇಶದ ಮೇಲಿನ ಸಾಮ್ರಾಜ್ಯಶಾಹಿಗಳ ಕಪಿಮುಷ್ಠಿಯನ್ನು ಬಿಗಿಗೊಳಿಸಲು ಯತ್ನಿಸಿದೆ.

*ಭಾರತದ ಹಿತಾಸಕ್ತಿಗೆ ವಿರುದ್ಧವಾಗಿ ಚೀನಾದೊಂದಿಗೆ ಶತೃತ್ವ ಹೆಚ್ಚಿಸಲು ಕೆಲಸ ಮಾಡುತ್ತಿರುವ ಆರ್.ಎಸ್.ಎಸ್. ನಾಚಿಕೆಯಿಲ್ಲದೇ ಅಮೆರಿಕನ್ ಸಾಮ್ರಾಜ್ಯಶಾಹಿಯ ಸೇವಕನಂತೆ ವರ್ತಿಸುತಿದೆ.*

---

→

ಜಾರಿಯಲ್ಲಿರುವ ಇತರೇ ಯಾವುದೇ ಕಾನೂನುಗಳಿಗೆ ಅಸಂಗತವಾಗಿದ್ದರೆ, ಆದರಿಂದೇನು ಪರಿಣಾಮವಾಗದು ಎಂಬ ಅಧ್ಯಾರೋಹಿ ಪರಿಣಾಮಗಳ (Overiding effects) ಸೂಚಿಸಿದೆ. ಅಂದರೆ ಕೋಕಾದಡಿಯ ಆದೇಶಗಳು ಇತರೆ ಕಾನೂನುಗಳಿಂದ ಪ್ರಶ್ನೆಗೊಳಪಡಲಾರವು ಅಂದರೆ ಪ್ರಶ್ನಾತೀತ.

**ಸರ್ಕಾರಿ ನೌಕರರಿಗೆ ದಂಡನೆ (Public Servant)**

ಇತ್ತೀಚೆಗೆ ಕರ್ನಾಟಕ ವಿ.ವಿ. ಮಸೂದೆ - 2000 ವಿರೋಧಿಸಿ ಬೆಂಗಳೂರಿನ ಕೆ.ಆರ್.ಸರ್ಕಲ್‌ನಲ್ಲಿ ಎಸ್‌ಎಫ್‌ಐ ಪ್ರತಿಭಟನೆ ನಡೆಸಿತ್ತು. ಪೋಲೀಸರು ಕಲಂ 144 ರ ಅನ್ವಯ ನಿಷೇಧಾಜ್ಞೆ ಹೇರಿದ್ದ ಕಾರಣ, ಅಲ್ಲಿ ಪ್ರತಿಭಟನೆ ನಡೆಸುವಂತಿರಲಿಲ್ಲ. ಆದರೆ ಪ್ರತಿಭಟನೆಯನ್ನು ಸರ್ಕಲ್‌ನಲ್ಲಿ ನಡೆಸದೆ ಮೈಸೂರು ಬ್ಯಾಂಕ್ ವೃತ್ತದೆಡೆ ಹೋಗುವ ರಸ್ತೆಯಲ್ಲಿ ನಡೆಸಿದೆವು. ಪರಿಣಾಮವಾಗಿ ನಿಷೇದಾಜ್ಞೆ ಉಲ್ಲಂಘನೆಯಾಗಿಲ್ಲವೆಂದು, ಪೋಲೀಸ್ ಅಧಿಕಾರಿಗಳು ಮೊಕದ್ದಮೆ ಹಾಕದೆ ಹಾಗೆ ಬಿಟ್ಟು ಕಳುಹಿಸಿದರು. ನಂತರ ಹಿರಿಯ ಅಧಿಕಾರಿ ನನ್ನನ್ನು, ಡಿವೈಎಫ್‌ಐನ ಮಹಂತೇಶ್‌ರನ್ನು ಕರೆಸಿ, ನೀವು ಪ್ರತಿಭಟನೆಗೆ ಅನುಮತಿ ಪಡೆದಿಲ್ಲ ಹಾಗಾಗಿ Mishief ಕೇಸ್ ಬುಕ್ ಮಾಡುತ್ತೇವೆ ಎಂದರು, ಮಾಡಿ ಎಂದು ನಾವಿಬ್ಬರೂ ಬಂದೆವು. ಇದೇ ಮಾತನ್ನು ಆ ಅಧಿಕಾರಿ ಕಿರಿಯ ಅಧಿಕಾರಿಗೆ ಮೊದಲೇ ಸೂಚಿಸಿದ್ದರಂತೆ, ಕಿರಿಯ ಅಧಿಕಾರಿ ಬೇಡ ಎಂದಾಗ, ಹಿರಿಯ ಅಧಿಕಾರಿಗಳೇ ನಮ್ಮನ್ನು ಕರೆಸಿ ಈ ಮಾತುಗಳನ್ನು ಹೇಳಿದ್ದರು.

ಏಕೆ ಈ ಪ್ರಸಂಗ ಉದಾಹರಿಸಬೇಕಾಯಿತೆಂದರೆ, ಅಂದು ಆ ಹಿರಿಯ ಅಧಿಕಾರಿ ನಮ್ಮನ್ನು ಕರೆಸಿ - ಮೊಕದ್ದಮೆ ಜರುಗಿಸಿರಲಿಲ್ಲ. ಬಹುಶಃ ಇರುವ ಕಾನೂನಿನ ಅಸ್ತ್ರಗಳು ಸಾಲದಾಗಿತ್ತೇನೋ?

ನೋಡಿ ಅದಕ್ಕೆ ಕೋಕಾ ಅಂತಹ ಅಧಿಕಾರಿಗಳಿಗೂ ಶಿಕ್ಷೆ ವಿಧಿಸುವ ಅಂಶವನ್ನು ಕಲಂ 25 ರಲ್ಲಿ ಸೂಚಿಸಿದೆ. ಲೋಕ ನೌಕರರು (Public Servants) ಕೋಕಾದಡಿ ಕ್ರಮ ಜರುಗಿಸಲು ವಿಫಲವಾದರೆ, ಹಿರಿಯ ಅಧಿಕಾರಿಗಳ ಆಜ್ಞೆ ಜಾರಿ ಮಾಡದಿದ್ದರೆ, ಅಂತಹ ಅಧಿಕಾರಿಗಳಿಗೆ 3 ವರ್ಷದವರೆಗೆ ಕಾರವಾಸ ಹಾಗೂ ದಂಡ ವಿಧಿಸುವ ಅವಕಾಶ ಒದಗಿಸಿದೆ. ತಮ್ಮ ಕರ್ತವ್ಯ ನಿಭಾಯಿಸದ Public Servants ಗೆ ಶಿಕ್ಷೆ ವಿಧಿಸುವ ಭಾರತ ದಂಡ ಸಂಹಿತೆ (ಐಪಿಸಿ) ಯ ಕಲಂ 119 ಇರುವಾಗ, ಇಂತಹ ವಿಶೇಷ ಕಲಂ ಕೋಕಾದಡಿ ಏಕೆ?




**ಕೋಕಾ ವಿಧಿಸುವ ಶಿಕ್ಷೆ - ಮರಣದಂಡನೆ - ಜೀವಾವಧಿ ದಂಡ ಲಕ್ಷಗಳಲ್ಲಿ - ಸಾವಿರ ನೂರರಲ್ಲಲ್ಲ**

ಭಾರತ ದಂಡ ಸಂಹಿತೆ (ಐಪಿಸಿ) ಮರಣದಂಡನೆ ಜೀವಾವಧಿ ಶಿಕ್ಷೆ ಅಥವಾ ಲಕ್ಷಗಳ ಲೆಕ್ಕಾಚಾರದಲ್ಲಿ ದಂಡ ವಿಧಿಸುವ ಅಂಶ ವಿರಳ ...

ಅಪರಾಧವೆಸಗಿ - ಅದರಿಂದಾಗಿ ಸಾವು ಸಂಭವಿಸಿದರೆ ಅದಕ್ಕೆ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ಹಾಗೂ ಒಂದು ಲಕ್ಷ ರೂಪಾಯಿಗಿಂತ ಕಡಿಮೆಯಿಲ್ಲದ ದಂಡ. ಇತರೆ ಅಪರಾಧಗಳಲ್ಲಿ 5 ವರ್ಷಕ್ಕಿಂತ ಮೇಲ್ಪಟ್ಟು ಜೀವಾವಧಿ ಕಾರಾಗೃಹವಾಸದವರಿಗೆ ಶಿಕ್ಷೆ, 5 ಲಕ್ಷ ರೂಪಾಯಿಗಿಂತ ಕಡಮೆಯಿಲ್ಲದಂತೆ ದಂಡ.

ಅಂತೆಯೆ ಅಪರಾಧಕ್ಕೆ ದುಷ್ಪ್ರೇರಿಸುವ, ಪಿತೂರಿ ನಡೆಸುವ, ಯತ್ನಿಸುವ, ತಯಾರಿ ಹಂತದಲ್ಲಿ ಭಾಗವಹಿಸುವ, ಗೊತ್ತಿದ್ದು ಅಪರಾಧವೆಸಗಲು ಅನುವುಗೊಳಿಸುವವರಿಗೆ, ವ್ಯವಸ್ಥಿತ ಅಪರಾಧಿಗಳ ಕೂಟಕ್ಕೆ ಸೇರಿದ ಸದಸ್ಯರನ್ನು ಬಚ್ಚಿಡುವ, ರಕ್ಷಿಸಲು ಯತ್ನಿಸುವ ಮಾಹಿತಿ ನೀಡದೆ ವಂಚಿಸುವವರಿಗೆ ಅಥವಾ ಅಂತಹ ಕೂಟಕ್ಕೆ ಸೇರಿದ ಸದಸ್ಯರಿಗೆ ಕನಿಷ್ಟ 5 ವರ್ಷಕ್ಕಿಂತ ಮೇಲ್ಪಟ್ಟು - ಜೀವಾವಧಿ ಕಾರಾಗೃಹವಾಸದ ಶಿಕ್ಷೆ ಹಾಗೂ 5 ಲಕ್ಷ ರೂಪಾಯಿಗಿಂತ ಕಡಿಮೆ ಇರದ ದಂಡ.

ಐ.ಟಿ. ರಾಜಧಾನಿಯ ರಾಜ್ಯದಲ್ಲಿ ಎಲ್ಲಿಯವರೆಗೆ ಸಾವಿರ ರೂಪಾಯಿಗಳ ದಂಡದ ಮಾತನಾಡುವುದು ಹೆಸರಿಗೆ ತಕ್ಕದಾಗಿಯಾದರೂ ಅದು ಲಕ್ಷದಲಿರಬಾರದೆ ಎಂಬ ಸದಾಶಯವಿದ್ದಿರಬೇಕು ಕೃಷ್ಣರ ಕೋಕಾದ್ದು!

**ಚಕಾರವೆತ್ತದ ಶಾಸನ ಸಭೆ:**

ನಾಗರೀಕರ ಮೂಲಭೂತ ಹಕ್ಕು -ಮಾನವ ಹಕ್ಕನ್ನು ದಮನಿಸುವ ಇಂತಹ ದಮನಕಾರಿ ಕಾಯ್ದೆಯ ಅನಿವಾರ್ಯತೆ ಗಣರಾಜ್ಯದ 51 ವರ್ಷದಲ್ಲಿ ಏನಿತ್ತು ಎಂಬ ಪ್ರಶ್ನೆ ಪ್ರಜ್ಞಾವಂತರನ್ನು ಕಾಡದೆ ಇರದು. ಕೋಕಾವೇ ಹೇಳುವಂತೆ ಗಣರಾಜ್ಯದ 51ನೇ ವರ್ಷದಲ್ಲಿ ರಾಜ್ಯ ಶಾಸನ ಸಭೆ ಅಂಗೀಕರಿಸಿದ ಕಾಯ್ದೆ - ಶಾಸನವಿದು.

ಗಣರಾಜ್ಯದ 51 ವರ್ಷಗಳಲ್ಲಿ ...

... ಖಾಸಗೀಕರಣ ಪ್ರಾರಂಭವಾಗಿ ದಶಕವೇ ಉರುಳಿದೆ. ವಿಶ್ವವ್ಯಾಪಾರ ಸಂಘಟನೆ(WTO)ಯ ಜಾಗತಿಕ ವಹಿವಾಟು - ವ್ಯಾಪಾರ ಹೆಚ್ಚಿದ ವಿದೇಶಿ ಸಾಲ ಹೆಚ್ಚುತ್ತಿದೆ - ಸಾಲ ನೀಡಿದ ಧಣಿಗಳು ಐಎಂಎಫ್ - ವಿಶ್ವಬ್ಯಾಂಕ್‌ನ ಶರತ್ತುಗಳು ಜಾರಿಗೊಳ್ಳುತ್ತಿವೆ. ಪರಿಣಾಮವಾಗಿ ಜನತೆಯ ಅತೃಪ್ತಿ ಹೆಚ್ಚುತ್ತಿವೆ - ಹೋರಾಟಗಳು - ಚಳುವಳಿಗಳು ರೂಪಗೊಳ್ಳುತ್ತಿವೆ - ಅಲ್ಲಲ್ಲಿ ಸ್ಫೋಟಿಸುತ್ತಿವೆ. ಮುಖ್ಯಮಂತ್ರಿ ಕೃಷ್ಣಾರು ಪೋಲೀಸ್ ಅಧಿಕಾರಿಗಳ ಸಮಾವೇಶದಲ್ಲಿ ಹೇಳಿರುವಂತೆ, 'ಅವರು ವಿಶ್ವ ಆರ್ಥಿಕ ವೇದಿಕೆಯ ಶೃಂಗಸಭೆಗೆಂದು ದಾವೋಸ್‌ಗೆ ಹೋಗಿದ್ದಾಗ, ಅಲ್ಲಿನ ಜನತೆ - ವಿಮಾನ ನಿಲ್ದಾಣಕ್ಕೆ ಮುತ್ತಿಗೆ ಹಾಕಿದ್ದಪರಿಣಾಮ, ಅವರೂ ಸೇರಿದಂತೆ ವಿಶ್ವದೆಲ್ಲಾ ಗಣ್ಯರು ನೂರಾರು ಕಿ.ಮಿ. ಕಾರಿನಲ್ಲಿ ಪ್ರಯಾಣಿಸಿ ಮತ್ತೊಂದು ವಿಮಾನ ನಿಲ್ದಾಣದಿಂದ ವಿಮಾನ ಏರಿದ್ದರಂತೆ'' ಅಂತಹ ಪರಿಸ್ಥಿತಿ ಭಾರತ-ಕರ್ನಾಟಕದಲ್ಲಿ ಇಲ್ಲ - ಆದರೆ ಪರಿಸ್ಥಿತಿ ಒದಗಿಬರಬಹುದು ಅದಕ್ಕೆ ರಾಜ್ಯದ ಪೋಲೀಸರು ಸನ್ನದ್ಧರಾಗಬೇಕೆಂದು ಕರೆ ನೀಡಿದ್ದರು. ನಂತರ ರಾಜ್ಯದ ಪೋಲೀಸರಿಗೆ ಇಸ್ರೇಲ್ ಹಾಗೂ ಇಂಗ್ಲೆಂಡ್‌ನಲ್ಲಿ ಪೋಲೀಸರಿಂದ ತರಬೇತುಗೊಳಿಸಿಸುತ್ತಿದ್ದಾರೆ. ಜೊತೆಯಲ್ಲೇ ತರಬೇತಿ ಪಡೆದು - ಸನ್ನದ್ಧರಾಗುವ ರಾಜ್ಯದ ಪೋಲೀಸರಿಗೆ ವ್ಯವಸ್ಥಿತ (ಸಂಘಟಿತ) ಅಪರಾಧ ಬಗ್ಗು ಬಡಿಯುವ ಹೆಸರಿನಲ್ಲಿ ಕೋಕಾ ಅಸ್ತ್ರ ನೀಡಿದ್ದಾರೆ. ಹೇಗಿದೆ ಅಪರಾಧ - ಪಾತಕಿಗಳನ್ನು ಬಗ್ಗು ಬಡಿಯುವ ಹೆಸರಿನಲ್ಲಿ ಚಳುವಳಿ - ಹೋರಾಟಗಳನ್ನು ಬಗ್ಗು ಬಡಿಯಲು ಉದ್ದೇಶಿಸಿರುವ ಈ ಅಸ್ತ್ರ ಕೋಕಾ?

ಹಿಂದೆ ತುರ್ತುಪರಿಸ್ಥಿತಿ ಹೇರುವ ನಿಟ್ಟನಲ್ಲಿ - ಹೇರಿದ ದಿನಗಳಲ್ಲಿ ಅಂದಿನ ಪ್ರಧಾನಿ ಇಂದಿರಮ್ಮ ತಂದಿದ್ದ ಆಂತರಿಕ ಭದ್ರತೆ ರಕ್ಷಣಾ ಕಾಯ್ದೆ (MISA) ಏನೆಲ್ಲಾ ಅಟ್ಟಹಾಸ ಆಡಿತು ಎಂಬ ಕಹಿ ನೆನಪು

# ಪಂಜಾಬ್ : ಸಿಪಿಐ(ಎಂ) ಪಕ್ಷದ ರಾಜಕೀಯ ಸಂಘಟನಾ ಶಿಸ್ತು ನಿರಂತರ ಉಲ್ಲಂಘಿಸಿದವರ ಉಚ್ಚಾಟನೆ

ಸಮರಶೀಲ ಜನಪರ ಚಳುವಳಿಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಂಜಾಬ್ ಘಟಕಕ್ಕೆ ಉನ್ನತವಾದ ಸ್ಥಾನವಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಭೂ ಸುಧಾರಣೆಗಾಗಿ ಕೇಂದ್ರ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ನಡೆದ ಹೋರಾಟಗಳಲ್ಲಿ ಮುಂಚೂಣಿ ಪಾತ್ರವಹಿಸಿದ ಪಂಜಾಬ್ ಘಟಕ ಖಲಿಸ್ತಾನ್ ಪ್ರತ್ಯೇಕತಾವಾದದ ವಿರುದ್ಧ ನಡೆದ ಹೋರಾಟದಲ್ಲಿ ಅನೇಕ ಅಪ್ರತಿಮ ವೀರ ಯುವಕ/ ಯುವತಿಯರನ್ನು ಕಳೆದು ಕೊಂಡಿತು. ಇದೀಗ ಜಾಗತೀಕರಣದ ಹಿನ್ನೆಲೆಯಲ್ಲಿ ಜನಸಾಮಾನ್ಯರ ಮೇಲೆ ಅದರಲ್ಲೂ ರೈತ ಸಮುದಾಯದ ಮೇಲೆ ದಾಳಿ ನಡೆಯುತ್ತಿರುವ ಸಂದರ್ಭದಲ್ಲಿ ಪ್ರಬಲ ಹೋರಾಟ ನಡೆಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಸಿಪಿಐ(ಎಂ)ನ ಪಂಜಾಬ್ ರಾಜ್ಯದಲ್ಲಿ ತೀವ್ರತರವಾದ ಗುಂಪುಗಾರಿಕೆ, ಪಕ್ಷದ ರಾಜಕೀಯ ನಿಲುವು- ಸಂಘಟನಾ ಶಿಸ್ತಿನ ನಿರಂತರ ಉಲ್ಲಂಘನೆಗಳು ಕೆಲವು ಮುಖಂಡರಿಂದ ನಡೆಯುತ್ತಾ ಬಂದವು. ಪಕ್ಷದ ಪೊಲಿಟ್ ಬ್ಯೂರೋ, 16ನೇ ಮಹಾಧಿವೇಶನ ಮಾಡಿದ ಮನವಿ- ಎಚ್ಚರಿಕೆಗಳನ್ನು ಅವರು ಪರಿಗಣಿಸಲಿಲ್ಲ. ಈ ಗುಂಪುಗಾರಿಕೆ ಮಿತಿ ಮೀರಿ, ಪಕ್ಷದ ಗೌರವ, ಸಂಘಟನೆಗೆ ಧಕ್ಕೆ ತರುವ ಹಂತ ತಲುಪಿದಾಗ ಅನಿವಾರ್ಯವಾಗಿ ಕೆಲವು ಮುಖಂಡರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಬೇಕಾಯಿತು. ಆ ಬೆಳವಣಿಗೆಗಳು ಹೀಗಿವೆ.

**ಗುಂಪುಗಾರಿಕೆ**

ಮಂಗತ್‌ರಾಂ ಪಾಸ್ಲಾ ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರು. ಅವರು ಮತ್ತು ಇತರೆ ಸದಸ್ಯರು ಹಲವಾರು ವರ್ಷಗಳಿಂದಲೂ ಗುಂಪುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿದ್ದರು.

ಗುಂಪುಗಾರಿಕೆ ಚಟುವಟಿಕೆ ಆರಂಭವಾದದ್ದು 1998ಕ್ಕೂ ಮೊದಲು. ಪಕ್ಷವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದ ಮಾಜಿ ಶಾಸಕ, ಪರ್‌ಸೆಮ್ ಬೋಧಾನ್ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿತ್ತು. ಹಾಗೂ ಅವರೊಡನೆ ಯಾವುದೇ ಸಂಬಂಧ ಇರಿಸಿಕೊಳ್ಳಬಾರದೆಂದು ಪಕ್ಷದ ಎಲ್ಲಾ ಮುಖಂಡರು, ಸದಸ್ಯರಿಗೆ ತಿಳಿಹೇಳಲಾಗಿತ್ತು. ಮಾತ್ರವಲ್ಲ, ಪರ್‌ಸೆಮ್ ಬೋಧಾನ್ ಅವರನ್ನು ಪಕ್ಷದ ಇತರೆ ಸದಸ್ಯರಿಂದ, ಚಟುವಟಿಕೆಗಳಿಂದ ದೂರವಿಡಬೇಕೆಂದು ಕೋರಲಾಗಿತ್ತು. ಆದರೂ ಕೇಂದ್ರ ಸಮಿತಿಸದಸ್ಯ ಮಂಗತ್‌ರಾಮ್ ಪಾಸ್ಲಾ ಮತ್ತು ಇನ್ನೊರ್ವ ರಾಜ್ಯ ಸಮಿತಿ ಸದಸ್ಯ ಹಾಗೂ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಅವರು ಬೋಧನ್ ಅವರೊಂದಿಗೆ ನಿಕಟವಾದ ಸಂಪರ್ಕ ಹೊಂದಿದ್ದರು. ಗುಂಪುಗಾರಿಕೆಯನ್ನು ಮುಂದುವರಿಸಿದರು.

ಇದೇ ರೀತಿ ಚಂದ್ರಶೇಖರ್ ಅವರು ಪಕ್ಷವಿರೋಧಿ ಚಳುವಟಿಕೆಗಳಲ್ಲಿ ತೊಡಗಿದ್ದು ಮಾತ್ರವಲ್ಲದೆ, ಬೋದಾನ್ ಅವರು ಪಕ್ಷದ ಜೀಪನ್ನು ಕಸಿದುಕೊಳ್ಳಲು ಸಹಾಯ ಮಾಡಿದರು. ಆದ್ದರಿಂದ ಚಂದ್ರಶೇಖರ್ ಒಂದು ವರ್ಷ ಪಕ್ಷದ ರಾಜ್ಯ ಸಮಿತಿ ಸದಸ್ಯತ್ವದಿಂದ ಅಮಾನತ್ತಿನಲ್ಲಿದ್ದಲಾಗಿತ್ತು. ನಂತರವೂ ಸಿಐಟಿಯುವಿನಲ್ಲಿದ್ದು ತನ್ನ ಸ್ಥಾನವನ್ನು ಪಕ್ಷದ ವಿರೋಧಿ ಚಟುವಟಿಕೆಗಳಿಗೆ ಬಳಸುವುದನ್ನು ಮುಂದುವರಿಸಿದುದರಿಂದ ಪಕ್ಷದಿಂದ ಉಚ್ಚಾಟಿಸಲಾಯಿತು.

ಹಲವು ವರ್ಷಗಳ ಅನುಭವ ಹೊಂದಿದ್ದ ಮಂಗತ್‌ರಾಂ ಪಾಸ್ಲಾರವರು, ಪಕ್ಷ ವಿರೋಧಿ ಚಟುವಟಿಕೆಗಳನ್ನು ನಡೆಸುತ್ತಿದ್ದ ವ್ಯಕ್ತಿಗಳನ್ನು ದೂರವಿರಿಸಿ ಪಕ್ಷದ ರಾಜ್ಯ ಸಮಿತಿ, ಕೇಂದ್ರ ಸಮಿತಿಗಳ ನಿರ್ಧಾರಕ್ಕೆ ಅನುಗುಣವಾಗಿ ರಾಜಕೀಯ ಸಂಘಟನಾತ್ಮಕ ಐಕ್ಯತೆಯನ್ನು ಕಾಪಾಡಿಕೊಂಡು ಮುಂದಕ್ಕೆ ಹೋಗುವ ಬದಲಾಗಿ ಬೋದಾನ್ ಮತ್ತು ಚಂದ್ರಶೇಖರ್ ಅವರೊಂದಿಗೆ ಸೇರಿಕೊಂಡು ಗುಂಪುಗಾರಿಕೆಯಲ್ಲಿ ತೊಡಗಿದರು. ಪಕ್ಷದ ಪಾಲಿಟ್ ಬ್ಯೂರೋ 3 ಬಾರಿ ಅವರನ್ನು ಎಚ್ಚರಿಸಿದರೂ ಉಪಯೋಗವಾಗಲಿಲ್ಲ.

**ಪಕ್ಷದ ಕಾರ್ಯಕ್ರಮಕ್ಕೆ ವಿರೋಧ :** ಈ ಮಧ್ಯೆ ಮಂಗತ್ ರಾಂ ಪಾಸ್ಲಾ, ಚಂದ್ರಶೇಖರ್ ಗುಂಪು ತಾವು ಪಕ್ಷದ ಸಮಕಾಲೀಕಗೊಳಿಸಲಾದ ಕಾರ್ಯಕ್ರಮಕ್ಕೆ ವಿರೋಧವೆಂದೂ 1964ರ ಕಾರ್ಯಕ್ರಮಕ್ಕೆ ಅಂಟಿಕೊಂಡಿರುವುದಾಗಿಯೂ ತಿಳಿಸಿದರು. ಆದರೆ ಇವರ ಸದಸ್ಯತ್ವನ್ನು 2001ರಲ್ಲಿ ನವೀಕರಿಸಿದ ಸಂದರ್ಭದಲ್ಲಿ ಸಮಕಾಲೀಕಗೊಳಿಸಿದ ಕಾರ್ಯಕ್ರಮ ವಿಶೇಷ ಸಮ್ಮೇಳನದಲ್ಲಿ ಅಂಗೀಕಾರವಾಗಿತ್ತು. ಈ ಗುಂಪಿನ ಕೆಲವು ಸದಸ್ಯರು ಆ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಂದು ಯಾವುದೇ ವಿರೋಧವನ್ನು ವ್ಯಕ್ತಪಡಿಸದ ಪಾಸ್ಲಾ ಗುಂಪು ಇಂದು ಹೊಸರಾಗ ಹಾಡುತ್ತಿದೆ. ಗುಂಪುಗಾರಿಕೆ ನಡೆಸಲು, ಪಕ್ಷವಿರೋಧಿ ಚಟುವಟಿಕೆಗೆ ಇದೊಂದು ನೆಪ ಅಷ್ಟೆ. ಪಕ್ಷದ ಕಾರ್ಯಕ್ರಮವನ್ನು ಒಪ್ಪದವರು ಪಕ್ಷದ ಸದಸ್ಯರಾಗಿ ಇರಲು ಹೇಗೆ ಸಾಧ್ಯ? ಮಾತ್ರವಲ್ಲ ಇವರು ಸಾಧಾರಣ ಒಂದು ವರ್ಷದಿಂದಲೇ ಸತತವಾಗಿ ರಾಜ್ಯಸಮಿತಿ ಸಭೆಗಳಿಗೆ ಹಾಜರಾಗುತ್ತಿರಲಿಲ್ಲ. ಒಮ್ಮೆ ತಾವು ಸೂಚಿಸಿದ ಅಜೆಂಡಾ ಅಂಗೀಕರಿಸಲಿಲ್ಲ ಎಂದು ಪಾಸ್ಲಾ ಒಳಗೊಂಡು 9 ಜನ ರಾಜ್ಯ ಸಮಿತಿ ಸಭೆಯಿಂದ ಹೊರನಡೆದರು. ಪಾಲಿಟ್ ಬ್ಯೂರೋ ಸದಸ್ಯರಾದ ಎಸ್.ಆರ್. ಪಿಳ್ಳೆ, ಪ್ರಕಾಶ್ ಕಾರಟ್, ಪ್ರಧಾನ ಕಾರ್ಯದರ್ಶಿ ಸುರ್ಜಿತ್ ರಾಜ್ಯ ಸಮಿತಿ ಸಭೆಗಳಿಗೆ ಹಾಜರಾಗಿ ವಿವರಿಸಿದರೂ ಪ್ರಯೋಜನವಾಗಲಿಲ್ಲ.

ರಾಜ್ಯ ಸಮಿತಿ ನಿಗದಿಗೊಳಿಸಿದ ಸಮ್ಮೇಳನಗಳಿಗೆ ಬದಲಾಗಿ ಸಮಾನಾಂತರ ಸಮ್ಮೇಳನ ನಡೆಸಿದುದು ಪಕ್ಷ ವಿರೋಧಿ ಚಟುವಟಿಕೆಯ ಪರಾಕಾಷ್ಠೆಯಾಗಿತ್ತು. ಕೆಲವು ಜಿಲ್ಲೆ, ತಾಲ್ಲೂಕು ಪ್ರದೇಶಗಳಲ್ಲಿ ಆ ಗುಂಪು ಸಮಾನಾಂತರ ಸಮ್ಮೇಳನಗಳನ್ನು ನಡೆಸಿತು. ಈ ಸಮ್ಮೇಳನಗಳನ್ನು ನಡೆಸುವಾಗ ಮೇಲಿನ ಸಮಿತಿಗಳಿಗೆ ಯಾವುದೇ ಮಾಹಿತಿ ನೀಡದೆ, ಗುಟ್ಟಾಗಿ, ಕಳ್ಳತನದಿಂದ ನಡೆಸುತ್ತಿತ್ತು. ಅಂದರೆ ಮೇಲಿನ ಸಮಿತಿಯಿಂದ ಯಾರೂ ಈ ಸಮ್ಮೇಳನಕ್ಕೆ ಹಾಜರಾಗಬಾರದೆಂಬುದು ಇವರ ಉದ್ದೇಶ. ಈ ಗುಂಪು ರಾಜ್ಯ ಮಟ್ಟದಲ್ಲೂ ಅಂತಹ ಸಮ್ಮೇಳನವನ್ನು ಏರ್ಪಡಿಸಿತ್ತು. ಆ ಸಮ್ಮೇಳನವನ್ನು ನಡೆಸಲು ಸಂಘಟನಾ ಸಮಿತಿ ರಚಿಸಿ ಅದಕ್ಕೆ ಪಾಸ್ಲಾ ಅವರೇ ಸಂಚಾಲಕರಾದರು.

ಇಂತಹ ಸಂದರ್ಭದಲ್ಲಿ ಬೇರೆದಾರಿಯಿಲ್ಲದೆ ಮಂಗತ್‌ರಾಂ ಪಾಸ್ಲಾ ಅವರನ್ನು ಪಕ್ಷದ ಸಂವಿಧಾನದ XIX- 13ರ ಪ್ರಕಾರ ತುರ್ತುಕ್ರಮವಾಗಿ ಪಾಲಿಟ್ ಬ್ಯೂರೋ ಉಚ್ಚಾಟಿಸಿತು. ನಂತರ ಜನವರಿ 4 ರಿಂದ 6 ರವರೆಗೆ ಕೊಲ್ಕತ್ತಾದಲ್ಲಿ ನಡೆದ ಕೇಂದ್ರ ಸಮಿತಿ ಈ ನಿರ್ಣಯವನ್ನು ಅಂಗೀಕರಿಸಿತು.

ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷ ಕಟ್ಟಬೇಕಾದಲ್ಲಿ ಶಿಸ್ತು ಅತಿಮುಖ್ಯ. ಸದಸ್ಯರ ಎಂತಹುದೇ ಅಭಿಪ್ರಾಯವನ್ನು ಅವರ ವೇದಿಕೆಯಲ್ಲಿ ಹೇಳ ಪೂರ್ಣ ಸ್ವಾತಂತ್ರ್ಯವಿದೆ. ಈ ಶಿಸ್ತು ಪಕ್ಷದ ಸಂವಿಧಾನ ಮತ್ತು ಕಾರ್ಯಕ್ರಮಗಳಿಗೆ ಅಧೀನವಾಗಿರಬೇಕು ಮತ್ತು ಪ್ರಜಾಪ್ರಭುತ್ವ ಕೇಂದ್ರವಾದವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇದು ಮಾರ್ಕ್ಸ್‌ವಾದಿ ಲೆನಿನ್ ವಾದಿಗಳು ಮಾಡಬೇಕಾದ ಕನಿಷ್ಠಕರ್ತವ್ಯ. ಸಿಪಿಐ(ಎಂ) ಪಕ್ಷದ ಯಾವುದೇ ಸದಸ್ಯರು ಇದಕ್ಕೆ ಹೊರತಾಗಿಲ್ಲ. ಅಂತೆಯೇ ಇವುಗಳನ್ನು ಸತತವಾಗಿ ಉಲ್ಲಂಘಿಸಿದ ಮಂಗಲ್ ರಾಂ ಪಾಸ್ಲಾ ಮತ್ತಿತರ ಮುಖಂಡರನ್ನು ಪಕ್ಷದಿಂದ ಹೊರಹಾಕಲಾಗಿದೆ. ಅನ್ಯಥಾ ಬೇರೆ ಮಾರ್ಗವೇ ಇರಲಿಲ್ಲ. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಐಕ್ಯತೆಯನ್ನು ಕಾಪಾಡಿ ಪಕ್ಷದ ಸಿದ್ಧಾಂತ, ಸಂಘಟನಾಶಿಸ್ತು, ಹಿರಿಮೆ, ಗೌರವಗಳನ್ನು ಎತ್ತಿಹಿಡಿಯಬೇಕೆಂದು ಪಾಲಿಟ್‌ಬ್ಯೂರೋ ಮಾಡಿದ ಮನವಿಗೆ ಪಂಜಾಬಿನ ಪಕ್ಷದ ಪ್ರಜ್ಞಾವಂತ ಸದಸ್ಯರು ಒಗ್ಗೂಡಿದ್ದಾರೆ. ಗುಂಪುಗಾರಿಕೆಗೆ ಯಾವುದೇ ಜಾಗವಿಲ್ಲ. ಐಕ್ಯತೆಯಿಂದ ಮುನ್ನಡೆಯೋಣ ಎಂದು ಪಂಜಾಬಿನ ರಾಜ್ಯ ಸಮ್ಮೇಳನ ನೀಡಿದ ಕರೆಗೆ, 40,000ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ ಜನಸ್ತೋಮ ಕ್ರಾಂತಿಕಾರಿ ಸ್ಪಂದನೆ ನೀಡಿದೆ.

## ಮುಷರ್ರಫ್ ಭಾಷಣ............

ಪುಟ 5 ರಿಂದ

ಹರಿಸುತ್ತಿರುವುದು ಇದೇ ಕಾಶ್ಮೀರಿ ರಕ್ತವನ್ನೇ ಎಂಬುದನ್ನೂ ಅವರು ಮರೆತುಬಿಟ್ಟಿದ್ದಾರೆಯೇ? ಈಗಲೂ ಪಾಕಿಸ್ತಾನೀ ಆಕ್ರಮಿತ ಕಾಶ್ಮೀರದಲ್ಲಿ ಜನತೆಗೆ, ನಾಗರಿಕರಿಗೆ, ಮಾನವ ಜೀವಿಗಳಿಗೆ ಸಿಗುವ ಹಕ್ಕುಗಳಿಲ್ಲ.

ಒಂದು ವಿಷಯ ಸ್ಪಷ್ಟ. ಪಾಕಿಸ್ತಾನದ ಪ್ರಮುಖ ಪಕ್ಷಗಳು ಕಾಶ್ಮೀರ ವಿಷಯದಲ್ಲಿ ತಾಮುಂದು ನಾಮುಂದು ಎಂಬ ಸ್ಪರ್ಧೆಯಲ್ಲಿರುವುದರಿಂದ ಈ ವಿಷಯದಲ್ಲಿ ಅಲ್ಲಿ ತರ್ಕಬದ್ಧವಾಗಿ ಮಾತಾಡುವುದು ಕಷ್ಟ. ಮುಷರ್ರಫ್‌ರವರೂ ತಮ್ಮ ಹಿಂದಿನವರು ಹಾಕಿದ ಈ ಚೌಕಟ್ಟನ್ನು ಮುರಿಯಲಾಗಿಲ್ಲ. ಈ ಚೌಕಟ್ಟನ್ನೂ ಮುರಿಯದೇ ಮುಂದೆ ಹೋಗಲು ಸಾಧ್ಯವಿಲ್ಲ. ಕಾಶ್ಮೀರ ಮತ್ತು ಭಯೋತ್ಪಾದನೆಯನ್ನು ಪ್ರತ್ಯೇಕಿಸಿ ನೋಡಿದರೂ ಕಾಶ್ಮೀರದಲ್ಲಿನ ಉಗ್ರಗಾಮಿತ್ವವನ್ನು 'ಸ್ವಾತಂತ್ರ್ಯ ಹೋರಾಟ' ಎನ್ನುವುದನ್ನು ಅವರಿನ್ನೂ ಬಿಟ್ಟಿಲ್ಲ. ಆ "ಹೋರಾಟಕ್ಕೆ ನೈತಿಕ, ರಾಜಕೀಯ, ರಾಜತಾಂತ್ರಿಕ ಬೆಂಬಲ" ಸಾರಿದ್ದಾರೆ. ಅದೊಂದು ...

... ಆಹ್ವಾನ ನೀಡಿದ್ದಾರೆ. ಇದು ಸ್ವಾಗತಾರ್ಹ. ಆದರೆ 'ಕಾಶ್ಮೀರಿ ಜನತೆಯ ಆಶಯಗಳು ಮತ್ತು ವಿಶ್ವಸಂಸ್ಥೆಯ' ನಿರ್ಣಯಗಳ ಪ್ರಕಾರ ಅವು ನಡೆಯಬೇಕಂತೆ. ಕಾಶ್ಮೀರಿ ಜನತೆ ಹಲವು ಸಂದರ್ಭಗಳಲ್ಲಿ ತಮ್ಮ ಆಶಯ ವ್ಯಕ್ತಪಡಿಸಿದ್ದಾರೆ ಮತ್ತು ಆಗಸ್ಟ್ 1972ರ ಶಿಮ್ಲಾ ಒಪ್ಪಂದ ಈ ವಿಷಯದಲ್ಲಿ ವಿಶ್ವಸಂಸ್ಥೆಯ ಪಾತ್ರವನ್ನು ಪರಿಣಾಮಕಾರಿಯಾಗಿ ನಿರಾಕರಿಸಿದೆ.

ಇಲ್ಲಿ ಎರಡು ಅಂಶಗಳು ಗಮನಾರ್ಹ ಮೊದಲನೆಯದಾಗಿ, **ಮಾತುಕತೆ-ಚರ್ಚೆ ನಡೆಯಬೇಕು. ಆದರೆ ಇದರಲ್ಲಿ ಮೂರನೆಯವರ ಮಧ್ಯಸ್ಥಿಕೆಗೆ ಅವಕಾಶವಿಲ್ಲ. ಎರಡನೆಯದಾಗಿ, ಎಲ್ಲಕ್ಕಿಂತ ಮೊದಲು ಕಾಶ್ಮೀರ ಪ್ರಶ್ನೆಯನ್ನು ಇಡುವ ಮುಷರ್ರಫ್‌ರ ನಿಲುವು ಕೂಡಾ ಆರೋಗ್ಯಕರವಲ್ಲ.** ಸುಮಾರು 55 ವರ್ಷಗಳ ಈ ಸಮಸ್ಯೆಗೆ ರಾತ್ರಿ ಬೆಳಗಾಗುವಷ್ಟರಲ್ಲಿ ಪರಿಹಾರ ಸಾಧ್ಯವಾಗದು. ಈ ಹಿನ್ನೆಲೆಯಲ್ಲೇ ಭಾರತ-ಪಾಕಿಸ್ತಾನಗಳ ನಡುವಿನ ಇವರ ಹಲವಾರು ಪ್ರಶ್ನೆಗಳ ಪರಿಹಾರ ಮಹತ್ವದ್ದು. ಅವುಗಳ ಪರಿಹಾರ ಪ್ರಕ್ರಿಯೆ ಎರಡೂ ದೇಶಗಳ ...

... ವಿಚಾರವನ್ನು ರಷ್ಯಾ, ಚೀನಾ, ಫ್ರಾನ್ಸ್, ಜಪಾನ್ ಮತ್ತು ಇನ್ನೂ ಹಲವಾರು ದೇಶಗಳು ಬೆಂಬಲಿಸಿವೆ. ಮೂರನೇ ದೇಶ ಅಥವಾ ವಿಶ್ವಸಂಸ್ಥೆಯ ಮಧ್ಯಸ್ಥಿಕೆ ಅಗತ್ಯವಿಲ್ಲ. ಆದರೆ ಅಮೇರಿಕಾ ಬಹಳ ಸಮಯದಿಂದ, ವಿಶೇಷವಾಗಿ ಸೆಪ್ಟೆಂಬರ್11ರ ನಂತರ ಈ ಪ್ರಶ್ನೆಯಲ್ಲಿ ಮಧ್ಯಪ್ರವೇಶಿಸಲು ಪ್ರಯತ್ನಿಸುತ್ತಿದೆ. ಇತ್ತೀಚೆಗೆ ಇಸ್ರೇಲ್ ಪ್ರಧಾನಿ ಶಿಮೊನ್ ಪೆರೆಸ್ ಭಾರತಕ್ಕೆ ಭೇಟಿ ನೀಡಿದ್ದಾಗ ಭಾರತವನ್ನು ನಾಟೋ ಯುದ್ಧ ಕೂಟದ ಸದಸ್ಯ ರಾಷ್ಟ್ರವಾಗಿ ಮಾಡಬೇಕು ಎಂದು ಸೂಚಿಸುವ ಮಟ್ಟದವರೆಗೂ ಹೋದರು. ಅಮೇರಿಕಾ ಅವರ ಬಾಯಿಂದ ಮಾತನಾಡುತ್ತಿತ್ತು ಎಂದೆನಿಸುತ್ತದೆ. ಮುಷರ್ರಫ್‌ರವರ ಪ್ರಕಟಣೆಗಳ ಬಗ್ಗೆಯೂ ಅಮೇರಿಕಕ್ಕೆ ಮೊದಲೇ ತಿಳಿಸಿರುವಂತೆ ಕಾಣುತ್ತದೆ.


**ಸಾಮ್ರಾಜ್ಯಶಾಹಿಗೆ ಅವಕಾಶ ಬೇಡ**

ಆದರೆ ಆತಂಕದ ಸಂಗತಿಯೆಂದರೆ ಭಾರತ ಮತ್ತು ಪಾಕಿಸ್ತಾನ ದ್ವಿಪಕ್ಷೀಯ ಮಾತುಕತೆಗಳಿಗೆ ಬದ್ಧರಾಗುವ ಬದಲು, ಎರಡೂ ದೇಶಗಳು ಆಗಾಗ ಅಮೇರಿಕಾವನ್ನು ಒಳಗೊಳ್ಳಲು ಪ್ರಯತ್ನಿಸುತ್ತಿದ್ದಾರೆ. ನಮ್ಮ ಪ್ರಧಾನಮಂತ್ರಿ, ಗೃಹಮಂತ್ರಿ, ರಕ್ಷಣಾ ಮಂತ್ರಿ ಈಗಾಗಲೇ ಅಮೇರಿಕಾ ಭೇಟಿಗೆ ಹೋಗಿ ಬಂದಿದ್ದಾರೆ. ವಿದೇಶಾಂಗ ಮಂತ್ರಿಗಂತೂ ...

... ಮಾತನಾಡುತ್ತಿದ್ದಾರೆ.

ಇದು ನಮ್ಮ ಈ ಇಡೀ ಉಪಖಂಡಕ್ಕೆ ಒಳ್ಳೆಯದಲ್ಲ. ಅಮೇರಿಕಾ ವಿಶ್ವದಲ್ಲೆಲ್ಲಾ ತನ್ನ ಯಜಮಾನಿಕೆ ಸ್ಥಾಪಿಸಲು ಕಾಶ್ಮೀರವನ್ನು ಒಂದು ಸ್ವತಂತ್ರ ರಾಷ್ಟ್ರವಾಗಿ ಇಡಬಯಸುತ್ತದೆ. ಶಿಮ್ಲಾ ಒಪ್ಪಂದಕ್ಕೆ ಸಹಿ ಹಾಕುವ ಮೊದಲು ಅಮೇರಿಕಾ ಬಂಗಾಳಕೊಲ್ಲಿಗೆ ತನ್ನ ಪರಮಾಣು ಶಸ್ತ್ರ ಸಜ್ಜಿತ ಏಳನೇ ನೌಕಾ ಪಡೆಯನ್ನು ಕಳಿಸಿತ್ತು. ಈಗಲೂ ಹಿಂದೂ ಮಹಾಸಾಗರದ ಡಿಗೋಗಾರ್ಸಿಯಾದಲ್ಲಿ ಅದರ ಪರಮಾಣು ನೆಲೆ ಇದೆ. ಇದು ಈ ಮಹಾಸಾಗರದ ತಟದಲ್ಲಿರುವ ಎಲ್ಲಾ ದೇಶಗಳಿಗೂ ನೇರ ಅಪಾಯ ಒಡ್ಡಿದೆ. ವಾಸ್ತವವಾಗಿ ಈ ಯಾವ ದೇಶಗಳಿಂದಲೂ ಅಮೇರಿಕಕ್ಕೆ ಏನೇನೂ ಬೆದರಿಕೆಯಿಲ್ಲ.

ಆದ್ದರಿಂದ ಇಂದು ಭಾರತ-ಪಾಕಿಸ್ತಾನ ದ್ವಿಪಕ್ಷೀಯ ಮಾತುಕತೆ ನಡೆಸುವುದು, ಅದರಲ್ಲಿ ಯಾವುದೇ ಮೂರನೇ ಪಕ್ಷಕ್ಕೆ ಅವಕಾಶ ಕೊಡದಿರುವುದು ಬಹಳ ಅಗತ್ಯ. ಈ ಉಪಖಂಡದಲ್ಲಿ ಶಾಶ್ವತ ಶಾಂತಿ ಬಹಳ ನಾಜೂಕಾಗಿ ಈ ವಿಷಯವನ್ನೇ ಆಧರಿಸಿದೆ. ಯಾವುದೇ ರೀತಿಯಲ್ಲಿ ಈ ಪ್ರದೇಶದಲ್ಲಿ ಸಾಮ್ರಾಜ್ಯಶಾಹಿಗೆ ಅವಕಾಶ ನೀಡಿದರೆ, ಅದು



# ದಲೈಲಾಮಾ, ತರಂಗ ಮತ್ತು ಬಸವ ಪ್ರಶಸ್ತಿ

*ದಲೈಲಾಮಾಂಗೆ ಬಸವ ಪ್ರಶಸ್ತಿ ಘೋಷಿಸಲಾಗಿದೆ. ಇದಲ್ಲದೆ ತರಂಗ ದಲೈಲಾಮಾರ ಬಗ್ಗೆ ಪ್ರಧಾನ ವರದಿ ಮಾಡಿದೆ. ವಿಶೇಷ ಸಂದರ್ಶನ ನಡೆಸಿದೆ. ತರಂಗಕ್ಕೆ ಪ್ರತಿಗಾಮೀ ಅವೈಜ್ಞಾನಿಕ ವಿಚಾರಗಳನ್ನು ಹರಡುವುದರಲ್ಲಿರುವ ಪರಿಣತಿ ಬಗ್ಗೆ ಎಲ್ಲರಿಗೂ ಗೊತ್ತಿದೆ. ದಲೈ ಲಾಮಾರನ್ನು ಪೂಜಿಸುವ ಭರದಲ್ಲಿ ಟಿಬೆಟ್ ಬಗೆಗಿನ 'ಹಾಲಿವುಡ್ ಚರಿತ್ರೆ'ಯನ್ನು ಹೇಳುತ್ತಾ ಚರಿತ್ರೆಗೆ ಅಪಚಾರ ಬಗೆದಿದೆ. ಚೀನಿ ಪ್ರಧಾನಿ ಭೇಟಿ ಸಂದರ್ಭದಲ್ಲಿ ಬೇಕೆಂತಲೆ ಚಿನಾ ಭಾರತ ಸಂಬಂಧಗಳಿಗೆ ಹುಳಿ ಹಿಂಡುವ ರೀತಿಯಲ್ಲಿ ಅತ್ಯಂತ ಚೀನಾ-ವಿರೋದಿ ಪ್ರಚಾರದಲ್ಲಿ ತೊಡಗಿದೆ. ಸಾಮಾನ್ಯವಾಗಿ ಯಾವುದೇ ವಿದೇಶಿ ಗಣ್ಯರು ದೇಶಕ್ಕೆ ಭೇಟಿ ಮಾಡುವಾಗ ಆ ದೇಶದ ಚರಿತ್ರೆ ಸಂಸ್ಕೃತಿ ಬಗ್ಗೆ ಬರೆಯುವುದು ಅದರಲ್ಲೂ ಸಕಾರಾತ್ಮಕ ಅಂಶಗಳನ್ನು ಎತ್ತಿಹಿಡಿಯುವುದು ಪದ್ಧತಿ ಇದಕ್ಕೆ ವಿಪರೀತವಾಗಿ 'ತರಂಗ' ಚೀನಾದ ಮೇಲೆ ವಿಷಕಾರಿದೆ. ತರಂಗದ ಅವೈಜ್ಞಾನಿಕ, ಅಚಾರಿತ್ರಿಕ ಒಡಂಬಡಿಕೆ ಮತ್ತು ಬಸವ ಪ್ರಶಸ್ತಿಯನ್ನು ದಲೈಲಾಮಂಗೆ ಅಸಂಬದ್ಧತೆಯನ್ನು ಬಿಚ್ಚಿಡುವ ಲೇಖನ.*

ಟಿಬೆಟ್ ಮತ್ತು ದಲೈಲಾಮಾ ಬಗ್ಗೆ ತರಂಗದ ಸುಳ್ಳುಗಳ ಕಂತೆ, ಅಫಘಾನಿಸ್ತಾನದ ಬಾಮಿಯಾದಲ್ಲಿ ಬುದ್ಧನ ಹತ್ಯೆ ಜತೆ ಹೋಲಿಸುವುದರ ಜತೆ ಆರಂಭವಾಗುತ್ತದೆ. ಅರ್ಧ ಶತಮಾನದಿಂದ ಲಕ್ಷ ಲಕ್ಷ ಬೌದ್ಧರ ಹತ್ಯೆ' ಎಂಬ ಆಧಾರರಹಿತ ಆರೋಪಗಳ ಅಣಿಮುತ್ತುಗಳು ಲೇಖನದ ಉದ್ದಕ್ಕೂ ಉದುರುತ್ತಿರುತ್ತದೆ. ಈ ಎಲ್ಲಾ ಅಪಾದನೆಗಳಿಗೆ ಆಧಾರಗಳನ್ನು ಎಲ್ಲೂ ಒದಗಿಸಲಾಗಿಲ್ಲ. 1959ರಲ್ಲಿ ತಮ್ಮ ತಾಯ್ನಾಡು ಬಿಟ್ಟು ಓಡಿಬಂದ ಧರ್ಮಗುರು 14ನೇ ದಲೈಲಾಮಾ ಮತ್ತು ಆತನ ಕೆಲವು ಸಾವಿರ ಅನುಯಾಯಿಗಳ ಬಗ್ಗೆ ಸಹಾನುಭೂತಿ, ಪೂಜ್ಯಭಾವನೆ ಬಿಟ್ಟರೆ ಈ 13 ಪುಟಗಳ ದೀರ್ಘ ಲೇಖನದಲ್ಲಿ ಏನೂ ಇಲ್ಲ. ಲೇಖಕಿ ಚೀನಾದ ಮೇಲೆ ಮಾಡುವ ಗುರುತರ ಆಪಾದನೆಗಳನ್ನು, ಸಂದರ್ಶನದಲ್ಲಿ ದಲೈಲಾಮಾ ಸಹ ಬೆಂಬಲಿಸುವುದಿಲ್ಲ. ಸಂದರ್ಶನ ಬರಿಯ ಟೊಳ್ಳು ಆಧ್ಯಾತ್ಮಿಕ ಚರ್ಚೆಯಾಗಿದೆ.

**ಅಮೆರಿಕನ್ ಅಪಪ್ರಚಾರದ ಕುರುಡು ಅನುಕರಣೆ.**

ಹಾಗಾದರೆ ಈ ದೀರ್ಘ ಲೇಖನದ ಉದ್ದೇಶವೇನು? ಲೇಖನದ-ಉದ್ದೇಶ ಸರಳ. ಬ್ರಿಟಿಷ್ ಮತ್ತು ಅಮೇರಿಕನ್ ಸಾಮ್ರಾಜ್ಯಶಾಹಿ ನೂರಕ್ಕೂ ಹೆಚ್ಚು ವರ್ಷಗಳಿಂದ ಚೀನಾವನ್ನು ಒಡೆದು ದುರ್ಬಲಗೊಳಿಸಿ ಆಳುವ ಪಿತೂರಿ ನಡೆಸುತ್ತಾ ಬಂದಿದೆ. ಇದರ ಭಾಗವಾದ ಅಪಪ್ರಚಾರವನ್ನು ಕಣ್ಣು ಮುಚ್ಚಿ ನಂಬಿ ಅದನ್ನು ಪ್ರಸಾರ ಮಾಡುವುದು ತರಂಗದ ಉದ್ದೇಶ ಬ್ರಿಟನ್ ಮತ್ತು ಅಮೆರಿಕ ಟಿಬೆಟನ್ನು ಚೀನಾದಿಂದ ಪ್ರತ್ಯೇಕ ಮಾಡಲು ಮಿಲಿಟರಿ, ರಾಜಕೀಯ ಎಲ್ಲಾ ಪ್ರಯತ್ನಗಳು ನಡೆಸಿದೆ. ವಿಫಲವಾಗಿದೆ. ಆದರೂ ಪ್ರಯತ್ನಿಸುತ್ತಲೇ ಇದೆ.

ಈ ಎಲ್ಲಾ ಅಪಪ್ರಚಾರಗಳಲ್ಲಿ ಚೀನಾದಲ್ಲಿ ಕ್ರಾಂತಿಯ ನಂತರ ಅಧಿಕಾರಕ್ಕೆ ಬಂದ ಕಮ್ಯುನಿಸ್ಟ್ ಸರ್ಕಾರ ಟಿಬೆಟ್ ಮೇಲೆ ದಾಳಿಮಾಡಿ ಅದರ ಸ್ವಾತಂತ್ರ್ಯ ಕಸಿದುಕೊಂಡಿದೆ. ಟಿಬೆಟನ್ನರ ಮೇಲೆ ಅತ್ಯಾಚಾರ ನಡೆಸುತ್ತಿದೆ. ಧಾರ್ಮಿಕ ಸ್ವಾತಂತ್ರ್ಯ ಕಿತ್ತುಕೊಂಡಿದೆ. ಟಿಬೆಟ್‌ನಲ್ಲಿ ಮಾನವ ಹಕ್ಕು'ಗಳಿಲ್ಲ ಇತ್ಯಾದಿ ಇದನ್ನು ಅಮೆರಿಕ ಎಲ್ಲಾ ಅಂತರ್ರಾಷ್ಟ್ರೀಯ ಆರ್ಥಿಕ ರಾಜಕೀಯ ವೇದಿಕೆಗಳಲ್ಲಿ ಚೀನಾದ ಮೇಲೆ ಬೇರೆ ಬೇರೆ ವಿಷಯಗಳಿಗಾಗಿ ಒತ್ತಡ ಹಾಕಲು ಬಳಸಿಕೊಂಡಿದೆ. ಇವೆಲ್ಲ ಚಾರಿತ್ರಿಕವಾಗಿ ಸುಳ್ಳು ಅಂಶಗಳು ಎಂಬುದು ಮುಖ್ಯವಾಗಿ ಎಲ್ಲರೂ ತಿಳಿದುಕೊಳ್ಳಬೇಕಾದ ಸಂಗತಿ.

ಟಿಬೆಟ್‌ನಲ್ಲಿ ಈಗ ಸುಮಾರು 65ಲಕ್ಷ ಜನ ವಾಸಿಸುತ್ತಿದ್ದು ಆ ಪ್ರಾಂತ್ಯ ಚೀನಾದ ಒಟ್ಟಾರೆ ರಾಷ್ಟ್ರೀಯ ಆರ್ಥಿಕ ಬೆಳವಣಿಗೆಯ ಸರಾಸರಿ ದರಕ್ಕಿಂತಲೂ ಹೆಚ್ಚಿನ ದರದಲ್ಲಿ (ಶೇಕಡಾ 9) ಬೆಳವಣಿಗೆ ಸಾಧಿಸುತ್ತಿದೆ. ಪ್ರತಿವರ್ಷ ಎರಡು ಲಕ್ಷಕ್ಕೂ ಹೆಚ್ಚು ವಿದೇಶೀ ಪ್ರವಾಸಿಗರು ಟಿಬೆಟ್‌ಗೆ ಹೋಗಿ ಬರುತ್ತಿದ್ದಾರೆ. ಟಿಬೆಟಿನ ಒಟ್ಟು ಆಂತರಿಕ ಉತ್ಪಾದನೆ 1.250 ಶತಕೋಟಿ ಡಾಲರು (62,500 ಕೋಟಿ ರೂ. ಹಾಗೆಯೇ ಟಿಬೆಟ್ 50 ವರ್ಷಗಳ ಕೆಳಗೆ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು ಇಂದು ಅಲ್ಲಿನ ಜನರ ಸರಾಸರಿ ಆದಾಯ ಕರ್ನಾಟಕದ ಸರಾಸರಿ ಆದಾಯಕ್ಕೆ ಸರಿಗಟ್ಟುತ್ತಿದೆ. ಇಲ್ಲಿಗೆ ಹೋದ ಯಾವ ಪ್ರಸವಾಸಿಗರೂ ಲಕ್ಷ-ಲಕ್ಷ ಬೌದ್ಧರ ಕೊಲೆಯಾದದನ್ನು ನೋಡಿಲ್ಲ. ಆತರಹದ ವಾತಾವರಣವಿದ್ದರೆ ಎರಡು ಲಕ್ಷ ಪ್ರವಾಸಿಗರು ಅಲ್ಲಿಗೆ ಹೋಗುವ ಸಾಧ್ಯತೆಯೂ ಇಲ್ಲ.

**ಟಿಬೆಟ್ 700 ವರ್ಷಗಳಿಂದ ಚೀನಾದ ಭಾಗ.**

ಟಿಬೆಟ್ ಚಾರಿತ್ರಿಕವಾಗಿ ಕನಿಷ್ಟ ಕಳೆದ 700 ವರ್ಷಗಳಿಂದ ಚೀನಾದ ಒಂದು ಪ್ರಾಂತ್ಯವಾಗಿತ್ತು. ಇದನ್ನು ಯುರೋಪಿಯನ್ ಪ್ರವಾಸಿಗ ಮಾರ್ಕೋ ಪೋಲೋ 13ನೇ ಶತಮಾನದಲ್ಲಿ ದಾಖಲಿಸಿದ್ದಾನೆ. 1954ರಲ್ಲಿ ಲೋಕಸಭೆಯಲ್ಲಿ ಮಾತನಾಡುತ್ತಾ ಪ್ರಧಾನಿ ಜವಾಹರಲಾಲ್ ನೆಹರೂ ಸಹ ಟಿಬೆಟ್ ಕಳೆದ 700 ವರ್ಷದಿಂದ ಚೀನಾದ ಅಂಗ ಎಂಬುದರ ಬಗ್ಗೆ ಯಾವ ದೇಶವೂ ಸಂದೇಹ ವ್ಯಕ್ತಪಡಿಸಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. 1904ರಲ್ಲಿ ಬ್ರಿಟಿಷ್ ವಿದೇಶಿ ಕಾರ್ಯದರ್ಶಿ ತನ್ನ ವರದಿಯೊಂದರಲ್ಲಿ ಚೀನಾದ ಪ್ರಾಂತ್ಯವಾದ ಟಿಬೆಟ್ ಎಂದು ಉಲ್ಲೇಖಿಸಿದ್ದಾರೆ. ಟಿಬೆಟ್ ಚೀನಾದ ಸುಮಾರು 52 ದೇಸಿ ಜನಾಂಗಗಳಲ್ಲಿ ಒಂದು, ಚೀನಾದ ಈ ಎಲ್ಲಾ ಜನಾಂಗಗಳನ್ನು ಒಗ್ಗೂಡಿಸಿ ಒಂದು ದೇಶ (ಆಗ ಸಾಮ್ರಾಜ್ಯ)ದ ಅಡಿಯಲ್ಲಿ ತಂದಿದ್ದು ಪ್ರಸಿದ್ಧ ಮಂಗೋಲ ದೊರೆ ಚಿಂಗಿಸ್ ಖಾನ್ ಮತ್ತು ಆತನ ಮೊಮ್ಮಗ ಕುಲ್ಲಾಯ್ ಖಾನ್ - 13ನೇ ಶತಮಾನದಲ್ಲಿ ಅಂದು ಈಗಲೂ ) ಚೀನಾದ ಅತಿದೊಡ್ಡ ದೇಸಿ ಜನಾಂಗವಾಗಿದ್ದ ಹನ್ ಜನರನ್ನೂ ಟಿಬೆಟರನ್ನು ಮಂಗೋಲರು ಆಳಿದರು. ಇಂದು ಮಂಗೋಲರು ಚೀನಾದಲ್ಲಿ ಒಂದು ಅಲ್ಪ ಸಂಖ್ಯಾತ ದೇಸಿ ಜನಾಂಗ, ಅಂದಿನಿಂದ ಅಂದರೆ ಸುಮಾರು 700 ವರ್ಷಗಳು ಟಿಬೆಟ್ ಚೀನಾದ ಹಲವು ಸಾಮ್ರಾಜ್ಯ ಶಾಹಿಗಳ ಸಾಮ್ರಾಜ್ಯದ ಭಾಗವಾಗಿದೆ.

**ಟಿಬೆಟ್ ಪ್ರತ್ಯೇಕಿಸಲು ಪಿತೂರಿ.**

ಟಿಬೆಟ್ ಪ್ರತ್ಯೇಕ ದೇಶವೆಂಬುದು ಬ್ರಿಟಿಷ್ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕನಸಿನ ಕೂಸು. 1840ರಲ್ಲಿ ಚೀನೀಯರನ್ನು ಅಫಿಮು ಗ್ರಸ್ತಗೊಳಿಸಿ ದೇಶವನ್ನು ನಾಶಮಾಡಿದ ಬ್ರಿಟಿಷರು ಹೂರಿಸಿದ ಮೊದಲ ಅಫೀಮು ಯುದ್ಧದ ಸಮಯದಿಂದ ಚೀನಾದ ಭಾಗಗಳನ್ನು ಕಿತ್ತುಕೊಳ್ಳಲು ಹವಣಿಸುತ್ತಲೇ ಇದ್ದರು. ಇದರ ಭಾಗವಾಗಿ ಬ್ರಿಟಿಷರು ಎರಡು ಬಾರಿ (1888 ಮತ್ತು 1903)ರಲ್ಲಿ ಟಿಬೆಟ್ ಮೇಲೆ ಆಕ್ರಮಣ ಮಾಡಿದ್ದರು. ಎರಡನೇ ಯುದ್ಧದಲ್ಲಿ ಬ್ರಿಟಿಷರು 13ನೇ ದಲೈಲಾಮಾನನ್ನು ಟಿಬೆಟಿನಿಂದ ಓಡಿಸಿದ್ದರು. ಈಗಿನ ದಲೈಲಾಮಾನ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಬ್ರಿಟಿಷರು-ಅಮೆರಿಕನ್ನರು ಇಂತಹ ಹಲ್ಕಾ ಕೆಲಸ ಮಾಡಿದ್ದರು ಅಂತ ಯಾರಿಗೂ ಗೊತ್ತಿಲ್ಲ. ಬ್ರಿಟಿಷರಿಗೆ ಟಿಬೆಟ್ ಮೇಲೆ ಎಂದೂ ಪೂರ್ಣಹಿಡಿತ ಸಾಧಿಸಲಾಗದಿದ್ದರೂ, ಟಿಬೆಟ್ ಮೇಲಿನ ಈ ಸಾಮ್ರಾಜ್ಯಶಾಹಿ ಆಕ್ರಮಣವನ್ನು ಚೀನಾದ ಆಗಿನ ಕೇಂದ್ರ ಸರ್ಕಾರ ಎಂದೂ ಒಪ್ಪಿಕೊಳ್ಳಲಿಲ್ಲ ಎಂಬುದು ಚಾರಿತ್ರಿಕ ಸತ್ಯ. ಆಗ ಜಗತ್ತಿನ ಹಲವು ಕಡೆ ತಮ್ಮ ಮಿಲಿಟರಿ ಬಲದಿಂದ ವಸಾಹತುಗಳನ್ನು ಆಕ್ರಮಿಸಿಕೊಂಡಿದ್ದಂತೆ ಟಿಬೆಟನ್ನು ಆಕ್ರಮಿಸಿಕೊಂಡಿದ್ದರು. 30 -40 ರ ದಶಕದಲಿ ಸಾಧಿಸುತ್ತಿದ್ದಂತೆ ಬ್ರಿಟಿಷ್ ಅಮೆರಿಕನ್ ಹಸ್ತಕ್ಷೇಪ ಟಿಬೆಟ್‌ನಲ್ಲಿ ಹೆಚ್ಚುತ್ತಾ ಹೋಯಿತು.

**ಆಕ್ರಮಣವಲ್ಲ - ಪಾಳೆಯಗಾರಿ-ವಿರೋಧಿ ಕ್ರಾಂತಿ**

ಟಿಬೆಟ್‌ಲ್ಲಿ ಕಳೆದ ಕೆಲವು ಶತಮಾನಗಳಿಂದ ಅತ್ಯಂತ ಕ್ರೂರ ಮಧ್ಯಯುಗೀನ ಪಾಳೆಯಗಾರಿ ಪದ್ಧತಿ ಜಾರಿಯಲ್ಲಿತ್ತು. ಇದರಲ್ಲಿ ಧರ್ಮಗುರು, ರಾಜ, ಜಮೀನುದಾರ ಎಲ್ಲರೂ ಒಬ್ಬರೇ. ಪ್ರಾಂತ್ಯದ ಶೇಕಡಾ 95 ಆಸ್ತಿಪಾಸ್ತಿ ಕೇವಲ 5 ಜನರ ಕೈಯಲ್ಲಿತ್ತು. ಬೌದ್ಧ ಮತದ ಅಧಿಕಾರಿಗಳು ಅತ್ಯಂತ ಕ್ರೂರವಾಗಿ ಜನರನ್ನು ಗುಲಾಮರಂತೆ ಶೋಷಿಸುತ್ತಿದ್ದರು. ಅವರ ವಿರುದ್ಧ ಹಲವು ಬಂಡಾಯಗಳು ನಡೆದಿದ್ದವು. ಈ ಬರ್ಬರ ಪಾಳೆಯಗಾರಿ ಪದ್ಧತಿಯ ಕ್ರೌರ್ಯದ ಉದಾಹರಣೆಗಳನ್ನು ಟಿಬೆಟ್‌ನಲ್ಲಿ ಮ್ಯೂಸಿಯಂಗಳಲ್ಲಿಈಗಲೂ ಇರಿಸಲಾಗಿದೆ. ತರಗಂದ ಲೇಖಕಿ ಸಂಧ್ಯಾ ಪೈ ಇದನ್ನು ಒಮ್ಮೆ ನೋಡಿಕೊಂಡು ಬರುವುದು ಒಳ್ಳೆಯದು! ಇವೆಲ್ಲದರಲ್ಲಿ ಬ್ರಿಟಿಷರು ಅಲ್ಲಿಯ ಆಳುವ ವರ್ಗಗಳ ಬೆಂಬಲಕ್ಕಿದ್ದರು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ. ಇಡೀ ಚೀನಾದಲ್ಲಿ ರಾಷ್ಟ್ರೀಯ ವಿಮೋಚನಾ ಕ್ರಾಂತಿಯಾದಾಗ, ಸ್ವಾಭಾವಿಕವಾಗಿಯೇ ಅಲ್ಲಿನ ಆಳುವ ವರ್ಗ ಬ್ರಿಟಿಷ್-ಅಮೆರಿಕ ಬೆಂಬಲದಿಂದ ಅಧಿಕಾರ ಉಳಿಸಿಕೊಳ್ಳಲು ಪ್ರಯತ್ನಸಿದರು. ಈ ಪಿತೂರಿಯನ್ನು ವಿಫಲಗೊಳಿಸಿ ಟಿಬೆಟಿನಲ್ಲೂ ಪಾಳೆಯಗಾರಿ ಪದ್ಧತಿ ನಾಶ ಮಾಡುವ ಕ್ರಾಂತಿಯ ವಿಜಯಕ್ಕಾಗಿ ಕೆಂಪು ಸೈನ್ಯ ಟಿಬೆಟ್ ಪ್ರವೇಶಿಸಿತು. ಆಗ ಚೀನಾದ ತುಂಬಾ ಪ್ರತಿಗಾಮಿಗಳು - ಕ್ರಾಂತಿಕಾರಿಗಳಿಗೂ ನಡೆದ ಆಂತರಿಕ ಯುದ್ಧದ ಭಾಗವೇ ಇದು. ಇದನ್ನು 'ಆಕ್ರಮಣ' ಎನ್ನುವುದು ಅತ್ಯಂತ ದೊಡ್ಡ ಸುಳ್ಳು. ಪಾಳೆಯಗಾರಿ -ವಿರೋಧಿ ಕ್ರಾಂತಿಗೆ ಪ್ರತಿರೋಧ ಒಡ್ಡಲು ಪ್ರಯತ್ನಿಸಿ ಸೋತ ದಲೈಲಾಮಾ ಮತ್ತು ಆತನ ಬೆಂಬಲಿಗರು ದೇಶ ಬಿಟ್ಟು ಓಡಿಬಂದರು. ಅವರನ್ನು ಯಾರೂ ಓಡಿಸಲಿಲ್ಲ.

**ಮುಂದುವರಿಯುತ್ತಿರುವ ಪಿತೂರಿ**

ಚೀನಾದಲ್ಲಿ ಕ್ರಾಂತಿಯಾದಾಗಿನಿಂದ ಟಿಬೆಟ್‌ನಲ್ಲಿ ಬ್ರಿಟನ್-ಅಮೆರಿಕಗಳ ಹಲವು ರೀತಿಯಲ್ಲಿ ಬುಡಮೇಲು ಕೃತ್ಯಗಳನ್ನು ನಡೆಸಲು ಪ್ರಯತ್ನಿಸುತ್ತಾ ಬಂದಿವೆ. 1959 ರಲ್ಲಿ ಟಿಬೆಟ್‌ನಲ್ಲಿ ನಡೆದ 'ದಂಗೆ' ಬ್ರಿಟಿಷ್-ಅಮೆರಿಕನ್ ಕುಮ್ಮಕ್ಕಿನಿಂದ ನಡೆದದ್ದು. ಅದಕ್ಕೆ ಸ್ಥಳೀಯ ಬೆಂಬಲವಿಲ್ಲದ್ದರಿಂದ ಅದು ತಣ್ಣಗಾಗಿ ಹೋಯಿತು. ಅಂದಿನಿಂದ ಚೀನಾವನ್ನು ಬಗ್ಗು ಬಡಿಯಲು 'ಟಿಬೆಟ್ ಕಾರ್ಡ್' ನ್ನು ಬಳಸುತ್ತಾ ಬಂದಿದೆ. 70 ದಶಕದಿಂದೀಚಿಗೆ ಅಮೆರಿಕ-ಚೀನಾ ರಾಜಕೀಯ-ಆರ್ಥಿಕ ಸಂಬಂಧಗಳು ಸಾಮಾನ್ಯವಾದ ಮೇಲೂ ಕಮ್ಯುನಿಸಂ ವಿರದ್ಧ ಚೀನಾದ ಬೀ. ಒಡೆಯುವುದಕ್ಕಾಗಿ 'ಟಿಬೆಟ್ ಸಮಸ್ಯೆಯನ್ನು ಅಮೆರಿಕ ಜೀವಂತವಾಗಿಟ್ಟಿದೆ. ಅಂತರ್ರಾಷ್ಟ್ರೀಯ ವೇದಿಕೆಗಳಲ್ಲಿ ಅಮೆರಿಕಕ್ಕೆ ಈ ಬಗ್ಗೆ ಯಾವ ದೇಶವೂ ಬೆಂಬಲಿಸಿಲ್ಲ. ಆದರೂ ಅಮೆರಿಕನ್ ಅಪಪ್ರಚಾರ ನಡೆದೇ ಇದೆ. ಟಿಬೆಟ್‌ರ 'ಸ್ವಾತಂತ್ರ್ಯ ಚಳುವಳಿ' ಪೂರ್ಣವಾಗಿ ಸಿಐಎ ತನು-ಮನ-ಧನ ಸಹಾಯದಿಂದ ನಡೆಯುತ್ತಿರುವಂತಹದ್ದು. ದಲೈಲಾಮಾ ನಡೆಸುವ ಹಲವಾರು ಕ್ಯಾಂಪುಗಳು, ಬೌದ್ಧ ವಿಹಾರಗಳೂ ಅಮೆರಿಕನ್ ಸಿಐಎನ ನೇರ ಧನ ಸಹಾಯವಿದೆ.

## 'ಬಸವ ಪ್ರಶಸ್ತಿ' ದಲೈಲಾಮಾರಿಗೆ ಸಲ್ಲ

ನೊಬೆಲ್ ಶಾಂತಿ ಪ್ರಶಸ್ತಿಯ ಹಿಂದಿನ ಸಾಮ್ರಾಜ್ಯಶಾಹಿ ರಾಜಕೀಯ ಎಲ್ಲರಿಗೂ ಗೊತ್ತಿದ್ದದ್ದೇ. ಅಮೆರಿಕನ್ ಸಾಮ್ರಾಜ್ಯಶಾಹಿಯ ಬೆಂಬಲಿಗರಿಗೆ ಈ ಪ್ರಶಸ್ತಿ ಯಾವಾಗಲೂ ಕಟ್ಟಿಟ್ಟ ಬುತ್ತಿ. ದಲೈಲಾಮಾರಿಗೆ ಈ ಪ್ರಶಸ್ತಿ ಕೊಟ್ಟಿದ್ದು ಆಶ್ಚರ್ಯವೇನಲ್ಲ, ಆದರೆ ನಿಜವಾಗಿಯೂ ವ್ಯಥೆ ಪಡಬೇಕಾದದ್ದು ಅವರಿಗೆ 'ಬಸವ ಪ್ರಶಸ್ತಿ' ಕೊಡಲಾಗುತ್ತಿದೆ ಅಂತ. ಬಸವಣ್ಣ ಎತ್ತಿ ಹಿಡಿದ ಲವಲೇಶವೂ ದಲೈಲಾಮಾರಲ್ಲಿಲ್ಲ. ಸಮಬಾಳು, ಸಮಾನತೆ ಮಾನವ ಗೌರವಗಳಿಗೆ ಟಿಬೆಟನ್ನರು ಹೋರಾಡಿ ಗೆದ್ದಾಗ, ಅದನ್ನು ತಾಳಲಾರದೆ ಓಡಿಬಂದವರು. ದಲೈಲಾಮಾರಿಗೆ 'ಬಸವ ಪ್ರಶಸ್ತಿ ಕೊಡುವುದಕ್ಕಿಂತ ದೊಡ್ಡ ಅವಮಾನ ಬಸವಣ್ಣನವರಿಗೆ ಇರಲು ಸಾಧ್ಯವಿಲ್ಲ.

ಇಂತಹ ದಲೈಲಾಮಾರಿಗೆ ಅಗ್ರ ಮನ್ನಣೆ ಸಲ್ಲಿಸಿದ ತರಂಗ ಪತ್ರಿಕೆ ಅಮೆರಿಕನ್ ಪಿತೂರಿಯ

# 'ಪುಂಟಿಲ' ಸಿದ್ದಿ ಮಕ್ಕಳ ಜೀವನೋತ್ಸಾಹದ ಪ್ರಯೋಗ



'ಪುಂಟಿಲ' ಬ್ರೆಕ್ಟ್‌ನ ನಾಟಕ. ಜಮೀನ್ದಾರಿಕೆಯ ಸೋಗಲಾಡಿತನ, ಕ್ರೂರ ಗತ್ತನ್ನು ಮತ್ತು ಅದರಡಿ ನಲುಗುವ ದುಡಿಯುವ ವರ್ಗದ ಸ್ಥಿತಿಯನ್ನು ವಿವಿಧ ಮಗ್ಗುಲಲ್ಲಿ ಚರ್ಚಿಸುತ್ತದೆ. ಇಂತಹ ವಸ್ತುವಿನ ನಾಟಕವನ್ನು ಅತ್ಯಂತ ಸಮರ್ಥವಾಗಿ ಅಭಿನಯಿಸಿದವರು 'ಸಿದ್ದಿ' ಜನಾಂಗದ ಕುಟುಂಬಗಳು. ಈ ನಾಟಕದ ವಸ್ತು-ಸಿದ್ದಿಗಳ ಜೀವನ ಬೇರೆ ಬೇರೆಯಾಗಿರಲಿಲ್ಲ. ಹಾಗೇ ಅವರ ಅಭಿನಯ ಕೇವಲ ಅಭಿನಯವೂ ಆಗಿರಲಿಲ್ಲ. ಅವರು ನಿತ್ಯವೂ ಕಂಡುಂಡ ಅನುಭವವೇ ಅಭಿನಯವಾಗಿ ಹೊಮ್ಮಿತ್ತು ಎಂಬುದೇ ಈ ಪ್ರದರ್ಶನದ ಮಹತ್ವ.

ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಸಿದ್ಧಿ ಜನಾಂಗಕ್ಕೆ ಎಲ್ಲಾ ಅವಕಾಶಗಳು ಸಿಕ್ಕರೆ ಉತ್ತರ ಕನ್ನಡದ ಆಸ್ತಿ ಆಗುತ್ತಿದ್ದರು. ಆದರೆ ಅವಕಾಶಗಳೆಲ್ಲವೂ ಯಾರ್‍ಯಾರೋ ಹಿತಾಸಕ್ತಿಯನ್ನು ಅವಲಂಬಿಸಿರುವುದರಿಂದ ಒಡೆಯರ ಮನೆಯ ಆಳಾಗಿ, ರಾಜಕಾರಣಿಗಳಿಗೆ ಮತವಾಗಿ ಬುದ್ಧಿಜೀವಿಗಳಿಗೆ ಭಾಷಣದ ವಸ್ತುವಾಗಿ ಯಥಾಸ್ಥಿತಿಯಲ್ಲಿ ಮುಂದುವರೆದಿದ್ದಾರೆ.

ಇವರ ಜೀವನಕ್ಕೊಂದು ಸರಿಯಾದ ಯೋಜನೆ ಇಲ್ಲದಿದ್ದರೂ ಸಿದ್ಧಿಯರಲ್ಲಿ ಜೀವನೋತ್ಸಾಹದ ಕೊರತೆ ಇಲ್ಲ. ಇದರ ಪ್ರತೀಕವೇ 'ಪುಂಟಿಲ'ನಾಟಕ. ಖ್ಯಾತ ವಿಶ್ವಮಾನ್ಯ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್‌ನ ನಾಟಕ ಜೀವ ಪಡೆದದ್ದು ಇತೀಚೆಗೆ **ಉತ್ತರ ಕನ್ನಡದ ಮಂಚಿಕೇರಿ**ಯಲ್ಲಿ ಜೀವ ತುಂಬಿದವರು ಜಿಲ್ಲೆಯ ಸಿದ್ಧಿ ಕುಟುಂಬಗಳು. ಯಲ್ಲಾಪುರದ ಅಣುತಿಸರದಲ್ಲಿ ರಂಗಸಮೂಹ ತಂಡದವರು ನಡೆಸಿದ ಸಿದ್ಧಿಯರ ರಂಗ ಶಿಬಿರದಲ್ಲಿ ತಯಾರಾದ ಈ ನಾಟಕವನ್ನು ನಿರ್ದೇಶಿಸಿದವರು ಚಿದಂಬರ ರಾವ್ ಜಂಬೆ ಮತ್ತು ಚಿನ್ನಕೇಶವ.

ಬ್ರೆಕ್ಟನ 'ಪುಂಟಿಲ' ಜಮೀನ್ದಾರಿಕೆಯ ಸೋಗಲಾಡಿತನವನ್ನು ಹಿಂಸಾತ್ಮಕ ಗತ್ತನ್ನು ಮತ್ತು ಅವರಡಿಯಲ್ಲಿ ನಲುಗುವ ದುಡಿಯುವ ವರ್ಗದ ಸ್ಥಿತಿಯನ್ನು ವಿವಿಧ ಮಗ್ಗಲಲ್ಲಿ ಚರ್ಚಿಸಿದೆ. ಪುಂಟಿಲ ಒಬ್ಬ ಜಮೀನ್ದಾರ. ಎಸ್ಟೇಟ್ ಮಾಲಿಕ, ಮಹಾ ಕುಡುಕ, ಕುಡಿವಾಗ ಉದಾರವಾದಿಯಾಗಿ ಸ್ನೇಹಜೀವಿಯಾಗಿ ಕಾಣುತ್ತಾನೆ. ಸಂತೆಯಲ್ಲಿದ್ದ ಆಳುಗಳನ್ನು ಕೊಂಡುಕೊಳ್ಳುತ್ತಾನೆ. ಕಾರಿನ ಚಾಲಕರನನ್ನೂ ಸ್ನೇಹಿತನನ್ನಾಗಿ ಕಂಡು ಒಟ್ಟಿಗೆ ಕುಡಿಯುತ್ತಾರೆ. ಸಂತೆಯಲ್ಲಿ ಅಂಗಡಿ ಇಟ್ಟುಕೊಂಡ ಹೆಂಗಸರನ್ನು ಮದುವೆಯಾಗುವುದಾಗಿ ಹೇಳಿ ಉಂಗುರ ತೊಡಿಸಿ, ವೈನ್ ಕೊಟ್ಟು ಮನೆಗೆ ಆಹ್ವಾನಿಸುತ್ತಾರೆ. ಆದರೆ ನಿಶೆ ಇಳಿದಾಗ ಜಮೀನ್ದಾರಿಕೆಯ ಕ್ರೌರ್ಯ ಅವನನ್ನು ಆವರಿಸುತ್ತದೆ. ರಾತ್ರಿಯ ಆದರ್ಶವಾದಿ ಬದಲಾಗುತ್ತಾನೆ. ಆಳುಗಳು ಇವನ ಕ್ರೌರ್ಯಕ್ಕೆ ಬುದ್ಧಿಗೇಡಿತನಕ್ಕೆ ಬಲಿಯಾಗುತ್ತಾರೆ.

'ಈವಾ' ಪುಂಟಿಲನ ಮಗಳು. ಆಕೆ ಕಾರು ಚಾಲಕ 'ಮಟ್ಟಿ'ಯನ್ನು ಪ್ರೀತಿಸುತ್ತಾಳೆ. ಅವರ ಮದುವೆಗೆ ಅಂತಸ್ತು ಅಡ್ಡಿ ಬರುತ್ತದೆ. ಪುಂಟಿಲ ಬೇರೆಯವರೊಡನೆ ಮದುವೆ ಪ್ರಸ್ತಾವ ಮಾಡುತ್ತಾನೆ. ಮಟ್ಟಿ ಕೂಡಾ ಮೇಲ್ವರ್ಗದ ಹೆಣ್ಣಾದ ಈವಾಳನ್ನು ಮದುವೆಯಾದರೆ ಇರುವ ಹೊಂದಾಣಿಕೆಯ ಬಗ್ಗೆ ಹೆಚ್ಚು ಆತಂಕಿತನಾಗಿದ್ದಾನೆ. ಹೀಗೆ ಇಡೀ ನಾಟಕದ್ದು ಜಮೀನ್ದಾರಿಕೆ ಮತ್ತು ಅವರ ಕೈಕೆಳಗೆ ದುಡಿವ ಜನ - ಹೀಗೆ ಎರಡು ಪ್ರತ್ಯೇಕ ವರ್ಗದ ನಡುವಿನ ವೈರುಧ್ಯವನ್ನು, ಸಂಘರ್ಷವನ್ನು ಬ್ರೆಕ್ಟ್ ಹೇಳುತ್ತಾನೆ.

ಹಾಗೆ ನೋಡಿದರೆ 'ಪುಂಟಿಲ' ಸಿದ್ಧಿಯರ ನಡುವಿನ ಕತೆಯೇ ಆಗಿದೆ. ಪುಂಟಿಲನಂತಹ (ಜಮೀನ್ದಾರ) ಒಡೆಯನ ಅಡಿಯಲ್ಲಿಯೇ ಬದುಕಿದವರು ಸಿದ್ದಿಗಳು. ಒಡೆಯನ ತೋಟದಲ್ಲಿ ಸೂರ್ಯ ಹುಟ್ಟುವ ಮೊದಲಿಂದ ಸೂರ್ಯ ಕಣ್ಮರೆಯಾಗುವವರೆಗೂ ದುಡಿದು ಚೂರುಪಾರು ಅನ್ನ ಸಾರು, ಅಲ್ಪಸ್ವಲ್ಪ ಹಣ ತೆಗೆದುಕೊಂಡು ಮಿಕ್ಕಿದ್ದಕ್ಕೆ ಕಾಡಿನ ಉತ್ಪನ್ನಗಳನ್ನೇ ನಂಬಿಕೊಂಡಿದ್ದವರು ಇವರು. "ಕಾಡಿನ ಜನ, ಎರಡು ಆಳಿನ-ದುಡಿತವನ್ನು ಒಬ್ಬ ಆಳು ಮಾಡುತ್ತಾನೆ. ಆದರೆ ಸಂಬಳವನ್ನು ಮಾತ್ರ ಅರ್ಧ ಆಳಿನದು ಕೊಟ್ಟರಾಯಿತು. ಹೇಗೂ ನಾಡಿನ ಸಂಪರ್ಕ ಇಲ್ಲದವರು ಏನೇ ಮಾಡಿದರೂ ಉಸಿರೆತ್ತದೆ ದುಡಿದು ಹೋಗುತ್ತಾರೆ" ಎಂದು ತೋಟದ ಕೆಲಸಕ್ಕೆ ಅವರನ್ನೇ ದುಡಿಸಿಕೊಳ್ಳುತ್ತಿದ್ದರು. (ಮೊದಲಿನಷ್ಟಿಲ್ಲದಿದ್ದರೂ ಮುಂದುವರೆದಿದೆ) ಸ್ವತಃ ಅವರು ಮನೆ ಮಾಡಿರುವ ಕೀಳರಿಮೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಎಲ್ಲರೊಂದಿಗೆ ಬೆರೆಯಲು ಅಡ್ಡಿಯಾಯಿತು. ಅವರ ಆರ್ಥಿಕ ಬಡತನ ಅವರ ಮುಂದುವರಿಕೆಗೆ ಕಡಿವಾಣವಾಯಿತು. ಹಾಗಾಗಿ ಒಡೆಯನ ಖಾಸಗೀ ಸುಖ, ದುಃಖಗಳು ಆಳಿನ ಜೀವದೊಂದಿಗೆ ಆಡುವ ಆಟವನ್ನು ನಿರ್ಧರಿಸುತ್ತಿತ್ತು. 'ಪುಂಟಿಲ'ನ ನಿಶೆ ದುಡಿವ ವರ್ಗ ಹೊಸ ಕನಸನ್ನು ಕಟ್ಟಲು ಪ್ರರೇಪಿಸಿದರೆ ನಿಶೆ ಇಳಿದ ಜಮೀನ್ದಾರ ಪುಂಟಿಲ (ವಾಸ್ತವದಲ್ಲಿ) ಮಹಾಕ್ರೂರಿಯಾಗಿ ಆ ಕನಸುಗಳನ್ನು ಛಿದ್ರಗೊಳಿಸುತ್ತಾನೆ. ತನ್ನ ಮರ್ಜಿಗಾಗಿಯೇ ದುಡಿವ ವರ್ಗ ಇದೆ ಎಂದು ತಿಳಿದು ವ್ಯವಹರಿಸುವ ಒಡೆಯನ ಮನೆಯ ಸಗಣಿ ಬಾಚಿದ ಸಿದ್ದಿಯರು ಬದುಕಿನಲ್ಲಿ ನಾವು ಭೇಟಿ ಆದ ಪುಂಟಿಲನನ್ನು, ತಾವೇ ಅನುಭವಿಸಿದ ಸುರ್ಕಾಲ, ಸಾಂಪ್ರಾ, ಎಮ್ಮಾ ಮತ್ತು ಆಳುಗಳ ಮನಸ್ಥಿತಿಯನ್ನು ರಂಗಭೂಮಿಯಲ್ಲಿ ಅಭಿನಯಿಸುವಾಗ ಸಹಜವಾಗಿಯೇ ನೈಜತೆ ಎದ್ದು ಕಾಣುತ್ತದೆ.

ಗಿರೀಶ ಸಿದ್ದಿ(ಪುಂಟಿಲಾ) ಗೀತಾ ಸಿದ್ದಿ(ಈವಾ) ವಿಶ್ವನಾಥ ಸಿದ್ದಿ(ಮಟ್ಟಿ), ಜಯಸಿದ್ದಿ(ಸುರ್ಕಾಲ), ಮಾಲಾ(ಹಾಲಿನವಳು) ಪಾರ್ವತಿ, ಸರಸಾ, ಮೊದಲಾದವರ ಒಳ್ಳೆಯ ಅಭಿನಯ, ರಂಗಪ್ರಜ್ಞೆ ನಾಟಕವನ್ನು ಯಶಸ್ವಿಗೊಳಿಸಿತು. ಬ್ರೆಕ್ಟ್‌ನ ನಾಟಕದ ವೈಶಿಷ್ಟ್ಯವಾದ ಗುಂಪು ಕ್ರಿಯೆ(ಮೇಳ) ಹೆಚ್ಚು ಅರ್ಥಪೂರ್ಣವಾಗಿ ಬಳಕೆ ಆಗಿದೆ.

ನಾಟಕದ ಹಾಡು (ನಿರ್ದೇಶನ ಬಿ.ವಿ. ಕಾರಂತ) ಮತ್ತು ಮಧ್ಯೆ ಮಧ್ಯೆ ಬಳಸಿಕೊಂಡ ಸಿದ್ದಿಯರ ಜಾನಪದ ಹಾಡಿನ ದಾಟಿ ಗಮನ ಸೆಳೆಯುವಂತಿತ್ತು.

ಸ್ವತಃ ಸಿದ್ದಿಯರೇ ನೂರಾರು ಜನರ ಎದುರು ಯಾವ ಅಳುಕಿಲ್ಲದೆ ಪೂರ್ಣ ಪ್ರಮಾಣದಲ್ಲಿ ನಾಟಕ ಆಡಿದರು ಎನ್ನುವುದಕ್ಕಿಂತ ನಾಟಕದ ಯಶಸ್ಸನ್ನು ಅಳೆಯುವ ಬೇರೆ ಮಾನದಂಡದ ಅಗತ್ಯತೆ ಇಲ್ಲ. ಈ ಕಾರಣಕ್ಕಾಗಿ ರಂಗಶಿಬಿರ ನಡೆಸಿದ ರಂಗಸಮೂಹ ಮತ್ತು ನಿರ್ದೇಶಕರಾದ ಜಂಬೆ ಮತ್ತು ಚೆನ್ನಕೇಶವ ಇವರು ಅಭಿನಂದನಾರ್ಹರು. ಆದರೆ ಒಂದು ನಾಟಿಕ ಆಡಿದ ಮಾತ್ರಕ್ಕೆ ಅವರು ತಮ್ಮ ಕೀಳರಿಮೆಯನ್ನು ಕಳೆದುಕೊಂಡು ಎಲ್ಲರಂತಾದರು ಎಂದಾಗಲೀ, ನಾಟಕ ಆಡಿಸಿದ ಮಾತ್ರಕ್ಕೆ, ಈ ನಾಟಕದ ಬಗ್ಗೆ ಪತ್ರಿಕೆಯಲ್ಲಿ ಬರೆದ ಮಾತ್ರಕ್ಕೆ ನಮ್ಮ ಕರ್ತವ್ಯ ಮುಗಿಯಿತೆಂದಾಗಲೀ ಅಲ್ಲ. ಅವರ ಆರ್ಥಿಕ ಸ್ಥಿತಿಯನ್ನು ಎತ್ತರಿಸುವ ಹೆಚ್ಚೆಚ್ಚು ಉದ್ಯೋಗ, ಭೂಮಿ ಒದಗಿಸುವ ಮೂಲಕ ಅದಕ್ಕಾಗಿ ಹೋರಾಡಲು ಮುಂದಾದಾಗ ಮಾತ್ರ ಅವರ ಅಭಿವೃದ್ಧಿ ಸಾಧ್ಯ. ಅವರಲ್ಲಿ ಅಡಗಿರುವ ಸೃಜನಶೀಲತೆಯನ್ನು ಹೊರಗೆಡಹಲು ಸಾಧ್ಯ. ಇಂತಹ ಯೋಜನೆಯನ್ನು ಜಾರಿಗೊಳಿಸುವಂತೆ ಕೂಡಾ ನಾವು ಸರ್ಕಾರದ ಮೇಲೆ ಒತ್ತಡ ತರಬೇಕಾಗಿದೆ.

**- ವಿಠ್ಠಲ ಭಂಡಾರಿ, ಹೊನ್ನಾವರ**

# ...........ಕ್ರೂರ 'ಕೋಕಾ'

ಮಸೂದೆಯಾಗಿ ಕೃಷ್ಣರ ಸರ್ಕಾರ ರಾಜ್ಯದ ಶಾಸನ ಸಭೆಯಲ್ಲಿ ಅಧಿವೇಶನದ ಕೊನೆಯ ದಿನ, ಅಧಿವೇಶನ ಮುಗಿಯುವ ವೇಳೆಗೆ ಮಂಡಿಸಿತು. ಶಾಸನ ಸಭೆಯ ಯಾರೊಬ್ಬರು ಏನನ್ನು ಮಾತನಾಡದೆ - ಚಕಾರವೆತ್ತದೆ ಅಂಗೀಕಾರವಾಗಿ - ಕಾಯ್ದೆಯಾಗಿ - 2001 ರ ಡಿಸೆಂಬರ್‌ನಲ್ಲಿ ರಾಷ್ಟ್ರಪತಿಗಳ ಅಂಕಿತ ಪಡೆದು ಪ್ರಸ್ತುತ ಜಾರಿಯಲ್ಲಿದೆ. ಇಂತಹ ದೂರ ಪರಿಣಾಮ ಬೀರುವ, ದಮನಕಾರಿ ಕಾಯ್ದೆಯ ಬಗ್ಗೆಚರ್ಚೆ ಪ್ರಾರಂಭವಾದದ್ದು ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಪೋಟೋ ಸುಗ್ರೀವಾಜ್ಞೆ ಹೊರಡಿಸಿದಾಗ, ಶಾಸನ-ಕಾಯ್ದೆಗಳನ್ನು ರೂಪಿಸಲೆಂದೆ ರಚಿತವಾಗುವ ಶಾಸನ ಸಭೆಯಲ್ಲಿ ಕೋಕಾ ಬಗ್ಗೆ ಚರ್ಚೆಯೇ ನಡೆಯದೆ ಇರುವುದು, ಶಾಸನ ಸಭೆಯಲ್ಲಿ ಪ್ರಾತಿನಿಧ್ಯ ಪಡೆದಿರುವ ರಾಜಕೀಯ ಪಕ್ಷಗಳ, ಬೇಜಾವಾಬ್ದಾರಿತನ, ವೈಚಾರಿಕ ಹಾಗೂ ಪ್ರಜ್ಞಾವಂತಿಕೆಯ ರಾಜಕೀಯ ಶೂನ್ಯತೆಯನ್ನು ಸಂಕೇತಿಸುತ್ತದೆ. ಅಂತೆಯೇ ರಾಜ್ಯದ ಚಳುವಳಿಗಳಲ್ಲಿ ಇರಬೇಕಿದ್ದಷ್ಟು ಎಚ್ಚರಿಕೆ ಇಲ್ಲದಿರುವುದರ ಸೂಚಕವು ಆಗಿದೆ.

ಪ್ರಸ್ತುತ ದೇಶದ ಭಾರತ ದಂಡ ಸಂಹಿತೆ, ದಂಡ ಪ್ರಕ್ರಿಯಾ ಸಂಹಿತೆ, ಸಾಕ್ಷ್ಯಾಧಾರಗಳ ಅಧಿನಿಯಮ ಸಾಕಷ್ಟು ಅಪರಾಧಗಳ ತಡೆಗೆ ಅವಕಾಶ ಒದಗಿಸಿರುವಾಗ ಪೋಟೋ ಹಾಗೂ ಕೋಕಾದಂತಹ ಸುಗ್ರೀವಾಜ್ಞೆ ಹಾಗೂ ಕಾಯ್ದೆಗಳ ಅನಿವಾರ್ಯತೆಯನ್ನು ಪ್ರಶ್ನೆಗೆ ಹಚ್ಚುತ್ತದೆ.

ಪೋಟೋವನ್ನು ವಿರೋಧಿಸುತ್ತಲೆ ಜನತೆಯ ಚರ್ಚೆಗೆ ಅನುವುಗೊಳಿಸದೆ, ಕೋಕಾದಂತಹ ದಮನಕಾರಿ ಕಾಯ್ದೆ ರೂಪಿಸಿದ ಕೃಷ್ಣರ ಸರ್ಕಾರದ ದೋಕಾವನ್ನು ಚಳುವಳಿಗಳು, ಜನತೆ ಅರಿಯಬೇಕಿದೆ. ಕೇಂದ್ರದಲ್ಲಿ ಇಂತಹ ದಮನಕಾರಿ ಕಾಯ್ದೆಗಳನ್ನು ರೂಪಿಸುವಾಗ ತಿದ್ದುಪಡಿ ತರುವಾಗ ಸಂಸತ್ತಿನಲ್ಲಿ -ಟಾಡಾ (TADA) ಕುರಿತು 1993 ರಲ್ಲಿ ನಡೆದ ಚರ್ಚೆ ಒಟ್ಟಾರೆ ಸರಾಸರಿ ಕೇವಲ 3 ಗಂಟೆ 2 ನಿಮಿಷ ಪ್ರತಿ ಚರ್ಚೆಗೆ ಹಾಗೂ ಚರ್ಚೆಯಲ್ಲಿ ಭಾಗವಹಿಸಿದವರು ಕೇವಲ 8 ಮಂದಿ ಮಾತ್ರ. ಆದರೆ ತೀವ್ರ ಪ್ರತಿರೋಧವಂತೂ ಸಂಸತ್ತಿನಲ್ಲಿ ಮೂಡಿತ್ತು. ಆದರೆ ರಾಜ್ಯದ ಶಾಸನ ಸಭೆಗಳ ಉಭಯ ಸದನಗಳಲ್ಲಿ ಒಂದೇ ಒಂದು ಚಕಾರ -ಕೊಕಾ ಬಗ್ಗೆ ಏಳದಿರುವುದು - ರಾಜ್ಯದ ರಾಜಕೀಯ ದುರಂತವೇ ಸರಿ. ಅದೇ ವೇಳೆಯಲ್ಲಿ ರಾಜ್ಯದ ಶಾಸನ ಸಭೆಯಲ್ಲಿ ದುಡಿಯುವ ಜನರ ಅಥವಾ ಚಳುವಳಿಗಳ ಪ್ರತಿನಿಧಿಗಳು - ಸಿಪಿಐ(ಎಂ)ನ ಶಾಸಕರೂ ಇಲ್ಲದಿರುವುದರ ಪ್ರತೀಕವೆಂದರೆ ಅತಿಶಯೋಕ್ತಿ ಆಗಲಾರದು.

POTO ಕೋಕಾ ಎರಡೂ ಇಲ್ಲದಿರುವಾಗಲೇ ದೆಹಲಿಯಲ್ಲಿ ಯುದ್ಧ ವಿರೋಧಿಸಿ ಕರಪತ್ರ ಹಂಚುತ್ತಿದ್ದ ವಿದ್ಯಾರ್ಥಿಗಳನ್ನು ಬಂಧಿಸಿ ಜೈಲಿಗೆ ತಳ್ಳಿದ್ದಾರೆ. ಮಹಾರಾಷ್ಟ್ರದ ಮಹಾಗಾಂವ್‌ನಲ್ಲಿ ಅಮೆರಿಕಾ ವಸ್ತುಗಳನ್ನು ಬಹಿಷ್ಕರಿಸುವ ಕರೆ ಹೊತ್ತ ಕರಪತ್ರ ಹಂಚುವವರ ಮೇಲೆ ದೌರ್ಜನ್ಯವೆಸಗಿ, ತದನಂತರ ನಡೆದ ಗೋಲಿಬಾರ್‌ನಲ್ಲಿ ಅಮಾಯಕರು ಅಸುನೀಗಿದ್ದಾರೆ. ರಾಜ್ಯದಲ್ಲಿ ಕಾರ್ಮಿಕರ ಬೇಡಿಕೆಗಳಿಗಾಗಿ ರಸ್ತೆ ತಡೆ ನಡೆಸಿದಾಗ ಗೋಲೀಬಾರ್ ನಡೆಸಿ, ಮುಖಂಡರನ್ನು ತಿಂಗಳುಗಳ ಕಾಲ ಜೈಲಿನಲ್ಲಿರಿಸಿದ್ದಾರೆ. ಕೆ.ಆರ್. ಸರ್ಕಲ್‌ನಲ್ಲಿ ಧರಣಿ ಕುಳಿತ ಕಾರ್ಮಿಕರ ಮೇಲೆ ದೂರದ ಹೊಸೂರು ರಸ್ತೆಯಲ್ಲಿ ಕಾರ್ಮಿಕರ ಬಸ್‌ಗೆ ಬೆಂಕಿ ಹಚ್ಚಿದರೆಂಬ ಅಪಾಧನೆ ಮೇಲೆ ವರ್ಷಗಟ್ಟಲೆ ಜೈಲಿನಲ್ಲಿರಿಸಿರುವ ಉದಾಹರಣೆ ಯಿದೆ. ಮಹಾರಾಷ್ಟ್ರದ ಕಾರ್ಮಿಕ ಮುಖಂಡರಾದ ಕಾ|| ಕಾರಾಡ್ ರವರಿಗೆ ಜೀವಾವಧಿ ಶಿಕ್ಷೆ ವಿಧಿಸಿರುವ ಉದಾಹರಣೆ ಇದೆ. ಗುಜರಾತ್ - ರಾಜಸ್ತಾನಗಳಲ್ಲಿ ರಾಜಕೀಯ ದುರುದ್ದೇಶದಿಂದ ಸಾವಿರಾರು ಅಮಾಯಕರ ಮೇಲೆ ಕೇಸ್ ಹಾಕಿ ಜೈಲಿಗೆ ತಳ್ಳಲಾಗಿದೆ. ಇತ್ತೀಚೆಗೆ ಗುಲ್ಬರ್ಗಾದಲ್ಲಿ 12 ತಾಸು ವಿದ್ಯುತ್‌ಗೆ ಒತ್ತಾಯಿಸಿ ಹೋರಾಟ ನಡೆಸಿದಾಗ ಲಾಠಿ ಚಾರ್ಜ್ - ಗೋಲಿಬಾರ್ ನಡೆಸಿ ಮುಖಂಡರನ್ನು ಜೈಲಿಗೆ ತಳ್ಳುವಾಗ ದರೋಡೆ ಮೊಕದ್ದಮೆಯನ್ನು ಅವರ ಮೇಲೆ ಹೂಡಲಾಗಿರುವ ಜೀವಂತ ಉದಾಹರಣೆಗಳಿವೆ. ಇಂತಹ ಪರಿಸ್ಥಿತಿಯಲ್ಲಿ ಕೇಂದ್ರದ POTO ಬಿಜೆಪಿಯವರ ರಾಮಬಾಣ ವಾದರೆ ರಾಜ್ಯದ ಕೋಕಾ ಕಾಂಗ್ರೆಸ್‌ನ ಕೃಷ್ಣರ ದಿವ್ಯಾಸ್ತ್ರವಾಗಿದೆ. ಈ ಬಾಣ-ಅಸ್ತ್ರಗಳ ಜನ ಚಳುವಳಿಗಳ ಮೇಲೆ ಎರಗಿದಾಗ, POTO ಮಹಾಮಾರಿಯಾದರೆ ಕೋಕಾ ಹೆಮ್ಮಾರಿ ಯಾಗಲಿದೆ. ಈ ಕಾನೂನುಗಳು ರಾಷ್ಟ್ರ ಹಾಗೂ ರಾಜ್ಯದ ಪ್ರಜಾಸತ್ತೆಯೊಳಕ್ಕೆ ನುಸುಳುತ್ತಿರುವ ತುರ್ತು ಪರಿಸ್ಥಿತಿಯ(Creeping Emergency) ಸಂಕೇತವಾಗಿದೆ.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
[illegible] ಆಫೀಸ್: ನಂ 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,